ಜನಶಕ್ತಿ – 2013

ಜನಶಕ್ತಿ



ಕನ್ನಡ ವಾರಪತ್ರಿಕೆ

ಸಂಪುಟ 7 ಸಂಚಿಕೆ 01

ಜನವರಿ 06, 2013

ಪುಟ 16 ರೂ. 10/-


Blog :janashakthi.wordpress.com e-mail : js_weekly@yahco.com



ಮಡೆಸ್ನಾನ ಮತ್ತು ಪಂಕ್ತಿಭೇದದ ವಿರುದ್ಧ ಜನಾಂದೋಲನ

ಉಡುಪಿಯಲ್ಲಿ ಪೊಲೀಸ್ ಅತಿರೇಕ ಪ್ರತಿಭಟನಾಕಾರರ ಮೇಲೆ ಲಾಠಿ ಪ್ರಹಾರ





ರಾಜ್ಯವ್ಯಾಪಿ ಪ್ರತಿಭಟನೆಗಳು



ಹೊಸಪೇಟೆ : ರೇಷನ್ ಅವ್ಯವಸ್ಥೆ ಸರಿಪಡಿಸಲು ಆಗ್ರಹ

CITU ಬೆಂಗಳೂರು ಜಿಲ್ಲಾ ಸಮ್ಮೇಳನ



ಚಳುವಳಿಯ ದಾಪುಗಾಲಿನ ಮುನ್ನಡೆಗೆ ಶ್ರಮಿಸಲು ಸಂಕಲ್ಪ

ಗಂಗಾವತಿಯಲ್ಲಿ ಕೃಷಿ ಕೂಲಿಕಾರರ 5ನೇ ರಾಜ್ಯ ಸಮ್ಮೇಳನ ಸ್ವಾಗತ ಸಮಿತಿ ರಚನೆ

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 5ನೇ ರಾಜ್ಯ ಸಮ್ಮೇಳನವನ್ನು ಕೊಪ್ಪಳ ಜಿಲ್ಲೆಯ ಗಂಗಾವತಿಯಲ್ಲಿ ಏರ್ಪಡಿಸಲು ನಿರ್ಧರಿಸ ಲಾಗಿದ್ದು ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಿಕೊಡಲು ಸ್ವಾಗತ ಸಮಿತಿಯೊಂದನ್ನು ರಚಿಸಲಾಯಿತು. ಇದೇ ಡಿಸೆಂಬರ್ 23 ರಂದು ಜಿಲ್ಲೆಯ ವಿವಿಧ ಸಾಮೂಹಿಕ ಸಂಘಟನೆಗಳ ಸುಮಾರು ಒಂದು ನೂರು ಜನ ಕಾರ್ಯಕರ್ತರು ನೆರೆದಿದ್ದ ಸಭೆಯಲ್ಲಿ ಸಮ್ಮೇಳನದ ಸ್ವಾಗತ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಕಾರ್ಯದರ್ಶಿಗಳಾದ ಸಂಗಾತಿ ಜಿ.ನಾಗರಾಜ ಅವರನ್ನು ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿಯೂ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲ್ಲೂಕು ಕಾರ್ಯದರ್ಶಿ ಸಂಗಾತಿ ಕೆ.ಹುಸೇನಪ್ಪ ಅವರನ್ನು ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿಯೂ ಆಯ್ಕೆ ಮಾಡಲಾಯಿತು. ಇನ್ನುಳಿದ ಪದಾಧಿಕಾರಿ ಸ್ಥಾನಗಳಿಗೆ ಸಿಐಟಿಯು ನೇತೃತ್ವದ ಹಮಾಲಿ ಕಾರ್ಮಿಕರ ಸಂಘ, ಕಟ್ಟಡ ನಿರ್ಮಾಣ ಕಾರ್ಮಿಕ ಸಂಘ, ಗ್ರಾಮ ಪಂಚಾಯತ್ ನೌಕರರ ಸಂಘ, ಪ್ರಾಂತ ರೈತ ಸಂಘ, ಪ್ರಾಂತ ಕೃಷಿ ಕೂಲಿಕಾರರ ಸಂಘ, ವಿದ್ಯಾರ್ಥಿ ಫೆಡರೇಷನ್, ಯುವಜನ ಫೆಡರೇಷನ್, ಜನವಾದಿ ಮಹಿಳಾ ಸಂಘಟನೆ, ದೇವದಾಸಿ ಮಹಿಳಾ ವಿಮೋಚನಾ ಸಂಘಟನೆಯ ಪ್ರಮುಖ ಕಾರ್ಯಕರ್ತರನ್ನು ಆಯ್ಕೆ ಮಾಡಲಾಯಿತು.

ಸಭೆಯಲ್ಲಿ ಉಪಸ್ಥಿತರಿದ್ದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ಸಂಗಾತಿ ನಿತ್ಯಾನಂದ ಸ್ವಾಮಿ ಅವರು ಮಾತನಾಡುತ್ತಾ ರಾಜ್ಯದ ಕೃಷಿ ಕೂಲಿಕಾರರ ಸಂಘಟನೆ ಮತ್ತು ಚಳುವಳಿಗೆ ಗಂಗಾವತಿಯ ಕೊಡುಗೆ ಅತ್ಯಂತ ಮಹತ್ತರವಾದದ್ದು ಎಂದು ಹೇಳಿದರು. ಕಳೆದ 25ಕ್ಕೂ ಹೆಚ್ಚು ವರ್ಷಗಳಿಂದ ಇಲ್ಲಿ ಕೂಲಿಕಾರರ ಸಂಘಟನೆ ಅನೇಕ ಸಮರಶೀಲ ಹೋರಾಟಗಳನ್ನು ಮಾಡಿ ರಾಜ್ಯದ ಗಮನ ಸೆಳೆದಿತ್ತು. ಗಂಗಾವತಿಯ ಅತ್ಯಂತ ಜನಾನುರಾಗಿಯಾದ ಹೋರಾಟಗಾರ ಕೆ.ಬಾಳಪ್ಪ ಅವರು ಇರುವಾಗಲೇ ಕೃಷಿ ಕೂಲಿಕಾರರ ರಾಜ್ಯ ಸಮ್ಮೇಳನವನ್ನು ಗಂಗಾವತಿಯಲ್ಲಿ ನಡೆಸಬೇಕೆಂಬ ಪ್ರಸ್ತಾವವಿತ್ತು, ಅಂದು ಕಾರಣಾಂತರದಿಂದ ಸಾಧ್ಯವಾಗದಿರುವುದನ್ನು ಈಗ ಸಾಧ್ಯವಾಗಿಸುವ ಅವಕಾಶವನ್ನು ಬಳಸಿಕೊಳ್ಳಬೇಕು ಎಂದು ಹೇಳಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಸಂಗಾತಿ ಮಾರುತಿ ಮಾನ್ಪಡೆ ಅವರು ಮಾತನಾಡಿ ದೇಶದಲ್ಲಿ ಬಡತನ, ನಿರುದ್ಯೋಗ ದಂತಹ ಸಮಸ್ಯೆಗಳನ್ನು ಬಗೆಹರಿಸಲು ಪ್ರಾಥಮಿಕವಾಗಿ ಪಾಳೆಗಾರಿ ಪದ್ಧತಿಯನ್ನು ಮತ್ತು ಅದರ ಅವಶೇಷಗಳನ್ನು ನಾಶ ಮಾಡಬೇಕಾಗಿದ್ದು ಕ್ರಾಂತಿಕಾರಕವಾದ ಈ ಹೋರಾಟದಲ್ಲಿ ಕೃಷಿ ಕೂಲಿಕಾರರು, ಬಡರೈತರು ಕಾರ್ಮಿಕ ವರ್ಗದ ನೇತೃತ್ವದ ಅಡಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಬೇಕಾಗಿದೆ. ಆದರಿಂದ ಕಾರ್ಮಿಕ ಕ್ರಾಂತಿಗೆ ಗ್ರಾಮೀಣ ಬಡವರನ್ನು ಅಣಿನೆರೆಸುವ ಭಾಗವಾಗಿ ಕೃಷಿ ಕೂಲಿಕಾರರನ್ನು ಹಾಗೂ ಬಡರೈತರನ್ನು ಸಂಘಟಿಸಲು ಹೆಚ್ಚಿನ ಆದ್ಯತೆ ನೀಡುವುದು ಅಗತ್ಯವಾಗಿದೆ. ಎಲ್ಲಾ ಪ್ರಮುಖ ಬಂಡವಾಳಶಾಹಿ–ಭೂಮಾಲಿಕ ರಾಜಕೀಯ ಪಕ್ಷಗಳು ಜನಸಾಮಾನ್ಯರ ವಿಶ್ವಾಸ ಕಳೆದು ಕೊಳ್ಳುತ್ತಿರುವ ಈ ಕಾಲಘಟ್ಟದಲ್ಲಿ, ರಾಜ್ಯ ವಿಧಾನಸಭಾ ಚುನಾವಣೆಗಳು ಹತ್ತಿರವಾಗುತ್ತಿರು ವಾಗ, ಗಂಗಾವತಿಯಲ್ಲಿ ನಡೆಯುವ ಕೃಷಿ ಕೂಲಿಕಾರರ ಸಮ್ಮೇಳನಕ್ಕೆ ತುಂಬಾ ಮಹತ್ವವಿದೆ ಎಂದು ಹೇಳಿದ ಅವರು ಸಮ್ಮೇಳನವನ್ನು ಯಶಸ್ವಿಯಾಗಿ ನಡೆಸಲು ಬೇಕಾಗುವ ಹಣವನ್ನು ಜನರಿಂದ ಸಂಗ್ರಹಿಸಲು, ಸಮ್ಮೇಳನದ ಅಂಗವಾಗಿ ನಡೆಯುವ ರ‍್ಯಾಲಿ ಮತ್ತು ಬಹಿರಂಗ ಸಭೆಗೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ಪಾಲ್ಗೊಳಿಸಲು ಹಾಗೂ ಸಮ್ಮೇಳನದ ಪ್ರಚಾರ ಸಮಿತಿ, ವಸತಿ ಮತ್ತು ಊಟೋಪಚಾರ ಸಮಿತಿ, ಸ್ವಯಂ ಸೇವಕರ ಸಮಿತಿ, ವೈದ್ಯಕೀಯ ಸಮಿತಿ, ಸ್ಮರಣ ಸಂಚಿಕೆ ಸಮಿತಿ ಮತ್ತು ಹಣಕಾಸು ಸಮಿತಿಗಳಲ್ಲಿ ಸದಸ್ಯರಾಗಿ ಶಕ್ತಿಮೀರಿ ಶ್ರಮಿಸಬೇಕೆಂದು ಅವರು ಮನವಿ ಮಾಡಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ತಾಲೂಕ ಅಧ್ಯಕ್ಷರಾದ ಸಂಗಾತಿ ಮರಕುಂಬಿ ಬಸವರಾಜ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಕೆ. ಹುಸೇನಪ್ಪ, ಎಚ್. ಗಂಗಾಧರಯ್ಯ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕೊನೆಯಲ್ಲಿ ಸಂಗಾತಿ ನಿರುಪಾದಿ ಎಲ್ಲರನ್ನು ವಂದಿಸಿದರು. ಸಮ್ಮೇಳನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸುಮಾರು 300 ಜನ ಪ್ರತಿನಿಧಿಗಳು ಭಾಗವಹಿಸಲಿದ್ದು ರಾಜ್ಯದ ಕೃಷಿ ಕೂಲಿಕಾರರ ಇಂದಿನ ಜೀವನ ಪರಿಸ್ಥಿತಿ ಹಾಗೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಧೋರಣೆಗಳನ್ನು ಕುರಿತು ಚರ್ಚಿಸಲಿದ್ದಾರೆ.

ಸಮ್ಮೇಳನವನ್ನು 2013 ಫೆಬ್ರವರಿಯಲ್ಲಿ 3ದಿನಗಳ ಕಾಲ ನಡೆಸಲು ನಿರ್ಧರಿಸಲಾಗಿದ್ದು ಮೊದಲ ದಿನ ಬೃಹತ್ ಮೆರವಣಿಗೆ ಮತ್ತು ಬಹಿರಂಗ ಸಭೆಯನ್ನು ಏರ್ಪಡಿಸಲು ನಿರ್ಧರಿಸಲಾಗಿದೆ. ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಮುಖಂಡರಾದ ಪಾಟೂರು ರಾಮಯ್ಯ, ಎ. ವಿಜಯ್ ರಾಘವನ್, ಸುಭಾಷಿಣಿ ಅಲಿ, ಸುನಿತ್ ಛೋಪ್ರಾ, ಹನ್ನನ್ ಮುಲ್ಲಾ ಮೊದಲಾದವರು ಭಾಗವಹಿಸುವರು. ಸಮ್ಮೇಳನದ ಅಂಗವಾಗಿ ರಾಜ್ಯ ಮಟ್ಟದ ಮಹಿಳಾ ಕೃಷಿ ಕೂಲಿಕಾರರ ಸಮಾವೇಶವನ್ನು ನಡೆಸಲಾಗುವುದು. ●

ಅನಿಷ್ಟ ಮಡೆಸ್ನಾನ ಮತ್ತು ಜಾತಿ ತಾರತಮ್ಯ– ಪಂಕ್ತಿ ಬೇಧ ವಿರೋಧಿ ಚಳುವಳಿ

ಉಡುಪಿ ಮಠದ ಎದುರಿನ ಪ್ರತಿಭಟನಾಕಾರರ ಮೇಲೆ ಲಾಠಿ ಪ್ರಹಾರ ಖಂಡಿಸಿ ರಾಜ್ಯವ್ಯಾಪಿ ಪ್ರತಿಭಟನೆಗೆ ಕರೆ

ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯಿಂದ ಡಿಸೆಂಬರ್ 27, 2012 ರಂದು ಮಾಧ್ಯಮಗಳಿಗೆ ಬಿಡುಗಡೆ ಮಾಡಲಾದ ಹೇಳಿಕೆ

ಮೌಢ್ಯತೆಯ ಅನಿಷ್ಟ ಪದ್ಧತಿಯಾದ ಮಡೆಸ್ನಾನ ಮತ್ತು ಉಡುಪಿ ಮಠ–ದೇವಾಲಯಗಳಲ್ಲಿ ಜಾರಿಯಲ್ಲಿರುವ ಜಾತಿ ತಾರತಮ್ಯದ ಪಂಕ್ತಿ ಬೇಧವನ್ನು ನಿಲ್ಲಿಸಲು ಆಗ್ರಹಿಸಿ ರಾಜ್ಯ ಮಟ್ಟದ ಜಾಥಾ ಹಾಗೂ ಪಾದಯಾತ್ರೆಗಳನ್ನು ನಡೆಸಿ ಇಂದು ಉಡುಪಿ ಕೃಷ್ಣ ದೇವಾಲಯದೆದುರು ಅತ್ಯಂತ ಶಾಂತ ರೀತಿಯಲ್ಲಿ ಪ್ರತಿಭಟಿಸುತ್ತಿದ್ದ ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ಯ ಸಾವಿರಾರು ಕಾರ್ಯಕರ್ತರು ಹಾಗೂ ರಾಜ್ಯ ನಾಯಕರ ಮೇಲೆ ಲಾಠಿ ಚಾರ್ಜ್ ನಡೆಸಿ ಹತ್ತಾರು ಜನರ ತಲೆ ಒಡೆದು, ಪ್ರಜ್ಞಾಹೀನವಾಗುವಂತೆ ದಬ್ಬಾಳಿಕೆ ನಡೆಸಿದ ಉಡುಪಿ ಪೋಲೀಸರ ಅಮಾನುಷ ಕೃತ್ಯವನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿಯು ತೀವ್ರವಾಗಿ ಖಂಡಿಸಿದೆ. ಇಂತಹ ದಬ್ಬಾಳಿಕೆಗಳಿಂದ ಪ್ರತಿಭಟನೆಯನ್ನು ಹತ್ತಿಕ್ಕಲು ಸಾಧ್ಯವಿಲ್ಲ ಎಂದು ಸರಕಾರಕ್ಕೆ ಮತ್ತು ಜಾತೀವಾದಿ ಸ್ಥಾಪಿತ ಹಿತಾಸಕ್ತಿಗಳಿಗೆ ಎಚ್ಚರಿಸಿದೆ.

ಈ ದಬ್ಬಾಳಿಕೆಯಲ್ಲಿ ಹತ್ತು ಕಾರ್ಯಕರ್ತರ ತಲೆ ಒಡೆದಿದೆ. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯೆಯಾದ ಎಸ್. ವರಲಕ್ಷ್ಮಿ ಮತ್ತು ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಮುಖಂಡರಾದ ಪ್ರತಾಪ್, ದ.ಕನ್ನಡದ ಈಶ್ವರಿಯವರನ್ನು ತೀವ್ರ ಚಿಕಿತ್ಸೆಗಾಗಿ ಮಣಿಪಾಲ್ ಆಸ್ಪತ್ರೆಗೆ ಸೇರಿಸಲಾಗಿದೆ. ರಾಜ್ಯ ಕಾರ್ಯದರ್ಶಿ ಹಾಗೂ ರಾಜ್ಯ ಕಾರ್ಯದರ್ಶಿ ಮಂಡಳಿ ಮತ್ತು ಹಲವಾರು ರಾಜ್ಯ ಸಮಿತಿ ಸದಸ್ಯರನ್ನು ಬಂಧನದಲ್ಲಿ ಇರಿಸಲಾಗಿದೆ.

ಪೋಲೀಸರ ಈ ಪ್ರಜಾಪ್ರಭುತ್ವ ವಿರೋಧಿ ದಬ್ಬಾಳಿಕೆಯ ಕೃತ್ಯವನ್ನು ಖಂಡಿಸಿ ನಾಳೆ 28ರಂದು ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ಸಿ.ಪಿ.ಐ.(ಎಂ) ರಾಜ್ಯ ಸಮಿತಿಯು ಕರೆ ನೀಡಿದೆ. ಇದರಲ್ಲಿ ಎಲ್ಲಾ ಪ್ರಗತಿಪರ, ಪ್ರಜಾಸತ್ತಾತ್ಮಕ ಶಕ್ತಿಗಳು ಭಾಗವಹಿಸಲು ಮನವಿ ಮಾಡಿದೆ.

ಪೋಲೀಸರು, ಸರಕಾರ ದೇಶದ ಸಂವಿಧಾನವನ್ನು ಎತ್ತಿ ಹಿಡಿಯುವ ಬದಲು ಪೇಜಾವರ ಮಠಾಧೀಶರ, ಜಾತಿವಾದಿ ಸ್ಥಾಪಿತ ಹಿತಾಸಕ್ತಿಗಳ ಗುಲಾಮರಂತೆ ನಡೆದು ಕೊಂಡಿದ್ದಾರೆ. ನಿಜಕ್ಕೂ ಅಲ್ಲಿ ಅಂತಹ ಯಾವುದೇ ಉದ್ರಿಕ್ತ ವಾತಾವರಣವೇ ಇರಲಿಲ್ಲ. ಇಂತಹ ಸಂದರ್ಭದಲ್ಲಿ ಶಾಂತ ರೀತಿಯಲ್ಲಿ ಕಾನೂನು ಕ್ರಮ ವಹಿಸದೇ ಅಲ್ಲಿದ್ದ ಪೋಲೀಸ ಅಧಿಕಾರಿಗಳು ಪ್ರಚೋದನಾತ್ಮಕವಾಗಿ ವರ್ತಿಸಿದ್ದಾರೆ. ಈ ಕೂಡಲೇ ಇದಕ್ಕೆ ಪ್ರಚೋದಿಸಿ ಲಾಠಿ ಚಾರ್ಜ್ ನಡೆಸಿದ ಸರ್ಕಲ್ ಇನ್‌ಸ್ಪೆಕ್ಟರ್ ನಾಯಕ್‌ರನ್ನು ಒಳಗೊಂಡು ಇತರ ಅಧಿಕಾರಿಗಳನ್ನು ಕೂಡಲೇ ಅಮಾನತುಗೊಳಿ[illegible] ಅವರ ಮೇಲೆ ಕಠಿಣ ಕ್ರಮ ವಹಿಸಲು ಮತ್ತು ಹೂಡಿರುವ ಸುಳ್ಳು ಮೊಕದ್ದಮೆಗಳನ್ನು ಹಿಂಪಡೆದು ಕೂಡಲೇ ಬಂಧಿತೆಲ್ಲರನ್ನು ಬಿಡುಗಡೆ ಮಾಡಬೇಕೆಂದು ಸಿಪಿಐ(ಎಂ) ಆಗ್ರಹಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರಗಳ ಕುರಿತು ಮಠಾಧೀಶರೇಕೆ ಮೌನ ?

ಧರ್ಮಸ್ಥಳ ಗ್ರಾಮದ ಪಾಂಗಳ ನಿವಾಸಿಗಳಾದ ಚಂದಪ್ಪಗೌಡ ಮತ್ತು ಕುಸುಮಾ ದಂಪತಿಗಳ ಮಗಳು ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥ ಕಾಲೇಜಿನಲ್ಲಿ ಪಿಯುಸಿ ದ್ವಿತೀಯ ವರ್ಗದಲ್ಲಿ ಕಲಿಯುತ್ತಿದ್ದ ಸೌಜನ್ಯಗೌಡ ಎಂಬ ಅಮಾಯಕ ಯುವತಿಯ ಮೇಲೆ ಕಳೆದ ಅಕ್ಟೋಬರ್ ತಿಂಗಳಲ್ಲಿ ಸಾಮೂಹಿಕ ಅತ್ಯಾಚಾರ ಮಾಡಿ ನಂತರ ಬರ್ಬರವಾಗಿ ಕೊಲೆ ಮಾಡಿ, ಅವಳ ಅರೆ ಬೆತ್ತಲೆ ಶವವನ್ನು ನೇತ್ರಾವತಿ ನದಿಯ ದಡದಲ್ಲಿ ಯಾತ್ರಿಕರಿಗಾಗಿ ಕಟ್ಟಲಾಗಿರುವ ಸ್ನಾನಘಟ್ಟದ ಬಳಿಯ ಕಾಡಿನಲ್ಲಿ ಎಸೆದು ಹೋದ ಘಟನೆ ರಾಜ್ಯ ಮಟ್ಟದಲ್ಲಿ ಸುದ್ದಿ ಆಗಲೇ ಇಲ್ಲ. ಕಾಡಿನ ರಾಜ ಧರ್ಮಾಧಿಪತಿಗಳು ಮೊನ್ನೆ ಮೊನ್ನೆಯವರೆಗೂ ತಮ್ಮ ಶಿಕ್ಷಣ ಸಂಸ್ಥೆಯಲ್ಲಿ ಓದುತ್ತಿದ್ದ ವಿದ್ಯಾರ್ಥಿಯು ಅತ್ಯಾಚಾರಕ್ಕೆ ಒಳಗಾಗಿ ಅವಮಾನುಷವಾಗಿ ಕೊಲೆಯಾಗಿರುವುದನ್ನು ಖಂಡಿಸಲಿಲ್ಲ. ಅವರು ಇಂತಹ ಅನೇಕ ಕೊಲೆಗಳನ್ನು, ಸಂಶಯಾಸ್ಪದ ಸಾವುಗಳನ್ನು ಕಂಡಿದ್ದಾರೆ. ಕಳೆದ 15 ವರ್ಷಗಳ ಅವಧಿಯಲ್ಲಿ ಇಂತಹ ನೂರಾರು ಪ್ರಕರಣಗಳು ಇಲ್ಲಿ ನಡೆದಿವೆಯಾದರೂ ಅವುಗಳ ಕುರಿತು ಯಾರೂ ದ್ವನಿ ಎತ್ತುವುದಿಲ್ಲ. ಹಾಗೆ ದ್ವನಿ ಎತ್ತಿದರೆ ರಕ್ತಕಾರಿ ಸಾಯುತ್ತಾರೆ ಎಂದು ಇಲ್ಲಿನ ಕಾಡಿನಲ್ಲಿ ಸುಳಿದಾಡುವ ಭೀಭತ್ಸ ಗಾಳಿಯು ಸಹ ಪಿಸುಗುಟ್ಟುತ್ತದೆ.

ಆದರೆ ಈ ಸಲ ಹಾಗಾಗಲಿಲ್ಲ. ವಿವಿಧ ವಿದ್ಯಾರ್ಥಿ ಮತ್ತು ನಾಗರಿಕ ಸಂಘಟನೆಗಳು ಬೀದಿಗಿಳಿದು ಪ್ರತಿಭಟಿಸಿದವು. ಧರ್ಮಸ್ಥಳದಲ್ಲಿ ಹೆಣಗಳು ಬೀಳುತ್ತಿರುವ ಬಗ್ಗೆ ಸಮಗ್ರವಾದ ತನಿಖೆಯಾಗಬೇಕೆಂದು ಒತ್ತಾಯಿಸಿದವು. ಸೌಜನ್ಯಗಳ ಮೇಲಿನ ಅತ್ಯಾಚಾರ ಮತ್ತು ಕೊಲೆಗೆ ಕಾರಣರಾದವರೂ ಯಾರೇ ಆಗಿರಲಿ, ಅವರನ್ನು ಪತ್ತೆಹಚ್ಚಿ ಕಠಿಣ ಕಾನೂನು ಕ್ರಮಕ್ಕೆ ಒಳಪಡಿಸಬೇಕೆಂದು ಆಗ್ರಹಿಸಿದವು. ಸಾರ್ವಜನಿಕ ಅಭಿಪ್ರಾಯದ ಒತ್ತಡಕ್ಕೆ ಮಣಿದ ಹೆಗ್ಗಡೆಯವರು ಒಂದೂವರೆ ತಿಂಗಳ ನಂತರ ಕೊನೆಗೂ ಮೌನ ಮುರಿದು ಸೌಜನ್ಯಾ ಪ್ರಕರಣವನ್ನು ಸಿಬಿಐ ತನಿಖೆಗೆ ಒತ್ತಾಯಿಸಿದರು. ಮುಂದಿನ ಬೆಳವಣಿಗೆಗ್ಗಳನ್ನು ಕಾದು ನೋಡಬೇಕು.

ಆದರೆ, ದೇಶದಲ್ಲಿ ಇಂದು ದಲಿತರ ಮೇಲೆ ಸವರ್ಣೀಯರಿಂದ ಹೆಚ್ಚುತ್ತಿರುವ ದೌರ್ಜನ್ಯಗಳ ಬಗ್ಗೆಯಾಗಲಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳ ಬಗ್ಗೆಯಾಗಲಿ ನಾಡಿನ ಮಠಾಧೀಶರು ಹೀಗೇಕೆ ಮೌನವಾಗಿದ್ದಾರೆ ಎಂಬ ಪ್ರಶ್ನೆಯನ್ನು ಕೇಳಲೇ ಬೇಕಾಗಿದೆ. ಗೋಹತ್ಯೆ ತಡೆಯಲು ಇವರು ಬೀದಿಗಿಳಿಯುತ್ತಾರೆ. ಭ್ರಷ್ಟ ರಾಜಕಾರಣಿಗಳಿಗೆ ರಕ್ಷಣೆ ನೀಡಲು ಇವರು ಒಂದಾಗುತ್ತಾರೆ. ಆದರೆ, ಸನಾತನ ಸಂಸ್ಕೃತಿಯಲ್ಲಿ ಮಹಿಳೆಯರನ್ನು ದೇವತೆಗಳಂತೆ ಕಾಣಲಾಗುತ್ತದೆ ಎಂದು ಹೇಳುವ ಇವರು ಮಹಿಳೆಯರ ಮೇಲೆ ಪ್ರತಿದಿನ ಎಂಬಂತೆ ನಡೆಯುತ್ತಿರುವ ದೌರ್ಜನ್ಯ, ಅತ್ಯಾಚಾರಗಳ ವಿರುದ್ಧ ಮಾತನಾಡುವುದಿಲ್ಲ. ತಮ್ಮ ಶ್ರಾವಣ, ಚಾತುರ್ಮಾಸ ಪ್ರವಚನಗಳಲ್ಲಿ ಇಂತಹ ಹೇಯ ಕೃತ್ಯಗಳನ್ನು ಖಂಡಿಸುವುದಿಲ್ಲ, ಏಕೆ? ವೇದಗಳು, ಉಪನಿಷತ್ತುಗಳು ಎಂದು ಪ್ರತಿಪಾದಿಸುತ್ತಾ ಇವರು ಮನುವಾದದ ಗುಂಗಿನಲ್ಲಿ ಇದ್ದಂತೆ ಭಾಸವಾಗುವುದಿಲ್ಲವೆ?

ಬೆಂಗಳೂರಿನ ಸ್ವಯಂ ಘೋಷಿತ ದೇವಮಾನವರೊಬ್ಬರು "ಮಹಿಳೆಯರ ಮೇಲಿನ ಅತ್ಯಾಚಾರಗಳ ವಿರುದ್ಧ ದೆಹಲಿಯಲ್ಲಿ ಕೂಗಾಡಿದರೆ ಏನೂ ಪ್ರಯೋಜನವಿಲ್ಲ, ಜನರು ಆಧ್ಯಾತ್ಮದ ಕಡೆಗೆ ತಿರುಗುವಂತಾಗಬೇಕು" ಎಂದು ಬದುಕುವ ಕಲೆಯ ಅಮೂಲ್ಯ(!) ಸಲಹೆಯೊಂದನ್ನು ಬಿಡುಗಡೆ ಮಾಡಿದ್ದಾರೆ. ಧರ್ಮಸ್ಥಳದಲ್ಲಿ ಭಕ್ತಿಯಿಂದ ಶಾಂತಿ ಪಡೆಯಲು ಬರುವ ಜೀವಗಳಿಗೇ ರಕ್ಷಣೆ ಇಲ್ಲ. ಅದೇ ಬೆಂಗಳೂರಿನ ಬಿಡದಿ ಆಶ್ರಮಕ್ಕೆ ದ್ಯಾನಕ್ಕಾಗಿ ಬರುವ ಅಮಾಯಕ ಮಹಿಳೆಯರ ಶೀಲ ಸುರಕ್ಷಿತವಲ್ಲ. ಬದುಕುವ ಕಲೆಯನ್ನು ತಿಳಿಯಲು ಬರುವ ಮಾರ್ಯಾದಸ್ತ ಮಹಿಳೆಯರ ಪಾಡಿಗೆ ಅಲ್ಲಿ ಇತ್ತೀಚೆಗೆ ಬಯಲಿಗೆ ಬಂದ ಒಂದು ಸಂಶಯಾಸ್ಪದ ಸಾವೇ ಸಾಕ್ಷಿ. ಹೀಗಿರುವಾಗ, ಮಹಿಳೆಯರ ಮೇಲೆ ಅತ್ಯಾಚಾರಗಳನ್ನು ತಡೆಗಟ್ಟಲು ಸಾಧ್ಯವಾಗಬೇಕಾದರೆ ಮಹಿಳೆಯರು ಇಂತಹ(!) ದೇವಮಾನವರನ್ನು ಆಶ್ರಯಿಸಬೇಕೆನ್ನುವುದರ ಮರ್ಮವೇನು?

ಪುಟ 4 ಕ್ಕೆ


ಬಿಜೆಪಿ ಮತ್ತು ಕೆಜೆಪಿ: ದೃಷ್ಟಿ ಯುದ್ಧದಿಂದ ಮುಷ್ಟಿ ಯುದ್ಧಕ್ಕೆ

ಪಕ್ಷದೊಳಗೆ ಮತ್ತೊಂದು ಪಕ್ಷವನ್ನು ಬಿಜೆಪಿಯು ಹೊತ್ತೊಯ್ಯುತ್ತಿರುವುದು ವಿಚಿತ್ರ ವಿಪರ್ಯಾಸ. ಬಿಜೆಪಿ ಮತ್ತು ಕೆಜೆಪಿಯೊಳಗೀಗ ಅಸ್ತಿತ್ವ ಉಳಿಸಿಕೊಳ್ಳುವ ಬಡಿದಾಟ

ಬಿಜೆಪಿ ಮತ್ತು ಕೆಜೆಪಿ ಪಕ್ಷಗಳ ನಡುವಿನ ಕದನ ಇನ್ನಷ್ಟು ತೀವ್ರಗೊಂಡಿದೆ. ಸಮಾವೇಶದ ಮೊದಲು ಯಡಿಯೂರಪ್ಪನವರ ನಿಷ್ಠ ಇಬ್ಬರು ಪ್ರಮುಖರ ಮೇಲೆ ಕ್ರಮ ಜರುಗಿಸಿದ ನಂತರ ಇದೀಗ ವಿವಿಧ ಮಂಡಳಿಗಳ ಕೆಲ ಅದ್ಯಕ್ಷರಾಗಿದ್ದ ಅವರ ಬೆಂಬಲಿಗರನ್ನು ಕಿತ್ತು ಹಾಕಿರುವುದು ಅವರನ್ನು ಕೆರಳಿಸಿದೆ. ಅದ್ದರಿಂದ ಸರಕಾರದಲ್ಲಿರುವ ತಮ್ಮ ಬೆಂಬಲಿಗರು ಅಲ್ಲಿಂದ ಹೊರ ಬರುವಂತೆ ಮಾಡಿ ರಾಜ್ಯಪಾಲರಿಗೆ ಪತ್ರ ಬರೆದು ಸರಕಾರವನ್ನೇ ಉರುಳಿಸುವುದಾಗಿ ಹೇಳುತ್ತಿರುವುದು ಈ ವಾರದ ಬೆಳವಣಿಗೆ. ಅದಕ್ಕೆ ವಿಧಿಸಿರುವ ಗಡುವು ಜನವರಿ 4 !

ಪಕ್ಷದೊಳಗೊಂದು ಪಕ್ಷ !


ಭಿನ್ನಮತವೆಂಬುದು ಬಹುತೇಕ ಬಂಡವಾಳಶಾಹೀ ಪಕ್ಷಗಳ ಇಂದಿನ ಬಹಿರಂಗ ಲಕ್ಷಣವಾಗಿದೆ. ಉದಾರೀಕರಣದ ಸಹಜ ಶಿಶುಗಳಾದ ಅಪಾರ ಅಕ್ರಮ ಸಂಪತ್ತಿನ ಸಂಗ್ರಹ ಮತ್ತು ಲೂಟಿಗಾಗಿನ ಸ್ಪರ್ದೆ, ಭ್ರಷ್ಟಾಚಾರ ಹಗರಣಗಳನ್ನು ಮುಚ್ಚಿಕೊಳ್ಳುವ ಹವಣಿಕೆ., ಅಧಿಕಾರ ದಾಹ, ಆ ಪಕ್ಷಗಳೊಳಗೆ ಕಿತ್ತಾಟಗಳಿಗೆ ಕಾರಣವಾಗಿವೆ. ತಾನೊಂದು ಭಿನ್ನ ಪಕ್ಷವೆಂದು ಹೇಳಿಕೊಂಡ ಬಿಜೆಪಿಯು ಇವುಗಳಲ್ಲೆಲ್ಲಾ ಕುಖ್ಯಾತ ದಾಖಲೆ ಸೃಷ್ಟಿಸಿರುವುದು ಗೊತ್ತಿರುವ ಸಂಗತಿ. ಇಷ್ಟಲ್ಲದೇ ಈಗ ಬಿಜೆಪಿಯು ತನ್ನ ಪಕ್ಷದೊಳಗೆ ಇನ್ನೊಂದು ಪಕ್ಷವನ್ನೇ ಜೊತೆಗೆ ಹೊತ್ತೊಯ್ಯುತ್ತಿರುವುದು ವಿಪರ್ಯಾಸದ ಇನ್ನೊಂದು ಕುಖ್ಯಾತ ದಾಖಲೆಯಾಗಿದೆ.



'ಬಲ' ಕ್ರೋಢೀಕರಣ

ಆ ಪಕ್ಷದಿಂದ ಹೊರ ನಡೆದು ಕೆಜೆಪಿ ಎಂಬ ಪಕ್ಷವನ್ನು ಚಾಲನೆಗೆ ತಂದದ್ದು ಬಿಜೆಪಿಗೆ ಒಂದು ಅಘಾತಕಾರಿ ಹೊಡೆತ ನೀಡಿರುವುದರಲ್ಲಿ ಅನುಮಾನವಿಲ್ಲ.. ಈ ಎರಡು ಪಕ್ಷಗಳ ನಡುವೆ ಹಣಾಹಣಿಯೂ ಈಗ ಮತ್ತಷ್ಟು ಹೆಚ್ಚಾಗಿದೆ. ಬಿಜೆಪಿಯ ಹಲವು ಶಾಸಕರು ಮತ್ತು ಸಚಿವರು ಪಕ್ಷದ ನಿರ್ದೇಶನವನ್ನು ತಿರಸ್ಕರಿಸಿ ಅದಕ್ಕೆ ಸವಾಲೆಸೆದು ಕೆಜೆಪಿ ಪಕ್ಷದ ಸಮಾವೇಶದಲ್ಲಿ ಭಾಗವಹಿಸಿದ್ದರು. ಅಂತಹವರನ್ನು ವಜಾ ಮಾಡುವ ಬಿಜೆಪಿ ನಾಯಕರ ಬೆದರಿಕೆ ಕೇವಲ ಮಾತಿನಲ್ಲೇ ಉಳಿದಿದ್ದರಿಂದ ಸರಕಾರವೇನೋ ಉರುಳಿ ಹೋಗುವ ಆತಂಕದಿಂದ ತಾತ್ಕಾಲಿಕವಾಗಿ ಬಚಾವಾಯಿತು. ಅಲ್ಲಿದ್ದದ್ದು ಅಧಿಕಾರದಲ್ಲಿದ್ದೇ ತಮ್ಮ ಆರ್ಥಿಕ ಹಾಗೂ ಸಂಘಟನಾ ಬಲ ಕ್ರೋಢೀಕರಿಸಿಕೊಳ್ಳಬೇಕು. ಹಾಗಾಗಿ ಬಿಜೆಪಿ ನಾಯಕರು ತಮ್ಮ ಪಕ್ಷದ ಸಂಘಟನಾ, ರಾಜಕೀಯ ಬಲವನ್ನು ಕ್ರೋಢೀಕರಿಸಿಕೊಳ್ಳುವ ತೀವ್ರ ಪ್ರಯತ್ನಕ್ಕೆ ಇಳಿದಿದ್ದಾರೆ. ಅವರಿಗೆ ತಕ್ಷಣದಲ್ಲಿ ಬೇರೆಲ್ಲರಿಗಿಂತ ಕೆಜೆಪಿಯೇ ಪ್ರಥಮ ಶತೃ. ಅಂತೆಯೇ ಗುರಿಯಿರಿಸಿ ದಾಳಿ ನಡೆಸಿದ್ದಾರೆ. ಕೆಜೆಪಿಗೆ ಬಿಜೆಪಿ ನೆಲೆಯಿಂದ ಎಷ್ಟು ಕಿತ್ತುಕೊಳ್ಳುವುದೆಂಬುದೇ ನಿರ್ಣಾಯಕ. ಹಾಗಾಗಿ ಒಂದೆಡೆ ಬಿಜೆಪಿಯ ಧಾಳಿಯಿಂದ ರಕ್ಷಿಸಿಕೊಳ್ಳುವ, ಮತ್ತು ಅದರ ನೆಲೆಯಿಂದ ಕಿತ್ತುಕೊಳ್ಳುವ ಪ್ರಯತ್ನವಿರುವಾಗಲೇ ಅದು ಮೂರನೆಯ ಪರ್ಯಾಯದ ಸ್ಥಾನವನ್ನು ಪಡೆಯಲು

ಪುಟ 4 ಕ್ಕೆ



ಜನಶಕ್ತಿ
ಕನ್ನಡ ವಾರಪತ್ರಿಕೆ

ವಿಶೇಷ ಸಂಚಿಕೆ – ಜಾಹಿರಾತು ಸಂಗ್ರಹಕ್ಕೆ ಕೈ ಜೋಡಿಸಿ

ಬಂಧುಗಳೇ,

'ರಾಜ್ಯೋತ್ಸವ-ವಿಶೇಷ ಸಂಚಿಕೆ'ಯನ್ನು ಹೊರತರಲು ಸಿದ್ದತೆಗಳು ನಡೆದಿವೆ. ಡಿಸೆಂಬರ್ ತಿಂಗಳ ಕೊನೆಯಲ್ಲಿ ಈ ಸಲದ ವಿಶೇಷ ಸಂಚಿಕೆಯನ್ನು ಹೊರತರಲು ಉದ್ದೇಶಿಸಲಾಗಿದ್ದು ಅದನ್ನು 'ಕರ್ನಾಟಕ– ಜಾಗತೀಕರಣದ ಎರಡು ದಶಕಗಳು– ಪರಿಣಾಮಗಳು ಮತ್ತು ಪರಿಹಾರಗಳು' ಎಂಬ ವಿಷಯ ಆಧಾರಿತವಾಗಿ ರೂಪಿಸಲೂ ತೀರ್ಮಾನಿಸಲಾಗಿದೆ. ಪತ್ರಿಕೆಯ ವಿಶೇಷ ಸಂಚಿಕೆಗೆ ಜಾಹಿರಾತುಗಳನ್ನು ಸಂಗ್ರಹಿಸಲಾಗುತ್ತಿದೆ. ಪತ್ರಿಕೆಯನ್ನು ಆರ್ಥಿಕವಾಗಿ ಬಲಪಡಿಸಲು ಜಾಹಿರಾತುದಾರರು ಉದಾರವಾಗಿ ಜಾಹಿರಾತುಗಳನ್ನು ನೀಡಿ ಪ್ರೋತ್ಸಾಹಿಸಬೇಕೆಂದೂ ಪತ್ರಿಕೆಯ ಹಿತೈಷಿಗಳು-ಓದುಗರು ಜಾಹಿರಾತುಗಳನ್ನು ಸಂಗ್ರಹಿಸಿ ಕಳುಹಿಸಿ ಕೊಡಬೇಕೆಂದು ಕೋರುತ್ತೇವೆ.

– ಸಂಪಾದಕರು

ಜನಶಕ್ತಿ ಪತ್ರಿಕೆಯ ಓದುಗರ - ಏಜೆನ್ಸಿದಾರರ ಗಮನಕ್ಕೆ

1. 2013 ಜನವರಿ ಒಂದರಿಂದ ಪತ್ರಿಕೆಯ ಮುದ್ರಣ-ವಿತರಣೆಯ ಜವಾಬ್ದಾರಿಯುನ್ನು "ಕ್ರಿಯಾ ಪ್ರಕಾಶನ" ವಹಿಸಿಕೊಳ್ಳುತ್ತದೆ.
2. ಪತ್ರಿಕೆಯ ಬಿಡಿ ಪತ್ರಿಕೆ ಬೆಲೆ ರೂ. 10.00
3. ಹೊಸ ವಾರ್ಷಿಕ ಚಂದಾ ದರಗಳು:
ವಿದ್ಯಾರ್ಥಿಗಳಿಗೆ : 300 ರೂ.
ವ್ಯಕ್ತಿಗಳಿಗೆ : 350 ರೂ.
ಸಂಘ ಸಂಸ್ಥೆಗಳಿಗೆ: 500 ರೂ.
4. ಪತ್ರಿಕೆಯ ಏಜೆನ್ಸಿದಾರರಿಗೆ ಶೇ. 30ರಷ್ಟು ಕಮಿಶನ್ ನೀಡಲಾಗುವುದು.
5. ಪತ್ರಿಕೆಗೆ ಚಂದಾ ನೊಂದಾಯಿಸುವವರಿಗೆ ಶೇ. 10ರಷ್ಟು ಕಮಿಶನ್ ನೀಡಲಾಗುವುದು.

ಅತ್ಯಾಚಾರಗಳ ಕುರಿತು ಮಠಾಧೀಶರೇಕೆ ಮೌನ ?

ಪುಟ 3 ರಿಂದ

ಮಹಿಳೆಯರ ಮೇಲೆ, ನಮ್ಮ ತಾಯಿ, ತಂಗಿ, ಅಕ್ಕಂದಿರ ಮೇಲೆ ಹೆಚ್ಚುತ್ತಿರುವ ಅತ್ಯಾಚಾರಗಳ ವಿರುದ್ಧ ಎಲ್ಲರೂ ಮಾತನಾಡಬೇಕಾಗಿದೆ. ಮನೆಮಾಳಿಗೆಗಳ ಮೇಲೆ ನಿಂತು ಕೂಗಾಡಬೇಕಾಗಿದೆ. ಬೀದಿ ಬೀದಿಗಳಲ್ಲಿ ಸಿಡಿದೇಳಬೇಕಾಗಿದೆ. ತಂದೆ ಮಗಳ ಮೇಲೆ, ಶಿಕ್ಷಕ ವಿದ್ಯಾರ್ಥಿನಿಯ ಮೇಲೆ, ಸ್ನೇಹಿತ ತನ್ನ ಸ್ನೇಹಿತನ ಹೆಂಡತಿಯ ಮೇಲೆ ಹತಾಶ ಯುವಕ ಪಕ್ಕದ ಮನೆಯ ಅಪ್ರಾಪ್ತ ಹೆಣ್ಣು ಮಗುವಿನ ಮೇಲೆ, ವೈದ್ಯ ರೋಗಿಯ ಮೇಲೆ, ವಕೀಲ ಕಕ್ಷಿದಾರಳ ಮೇಲೆ, ಪೋಲೀಸ್ ದೂರು ನೀಡಲು ಬಂದಿರುವವಳ ಮೇಲೆ, ಮಠಾಧೀಶ ತನ್ನ ಪಾದಪೂಜೆ ಮಾಡುವ ಭಕ್ತಳ ಮೇಲೆ, ರಾಜಕೀಯ ಪುಡಾರಿ ಮಹಿಳಾ ಕಾರ್ಯಕರ್ತಳ ಮೇಲೆ ಅತ್ಯಾಚಾರ ಮಾಡುವಂತ ಪುರುಷರನ್ನು ಸೃಷ್ಟಿಮಾಡುತ್ತಿರುವ ಈ ಸಮಾಜವನ್ನು ಆಮೂಲಾಗ್ರವಾಗಿ ಬದಲಾಯಿಸಲು ಬಯಸುವ ಎಲ್ಲ ಮಾನವತಾವಾದಿ ಸ್ತ್ರೀ ಪುರುಷರನ್ನು ಒಂದುಗೂಡಿಸಬೇಕಾಗಿದೆ. ಈ ಸಮಾಜವನ್ನು ಬದಲಾಯಿಸ ಬೇಕಾಗಿದೆ.

ದೃಷ್ಟಿ ಯುದ್ಧದಿಂದ ಮುಷ್ಟಿ ಯುದ್ಧಕ್ಕೆ.....

ಪುಟ 3 ರಿಂದ

ಹವಣಿಸುತ್ತಿದೆ. ಆದ್ದರಿಂದಲೇ ಕಾಂಗ್ರೆಸ್ ಮತ್ತು ಬಿಜೆಪಿಗಳಿಗೆ ಪರ್ಯಾಯವಾದ ಸ್ಥಾನವನ್ನು ಜೆಡಿಎಸ್ ನಿಂದ ಕಸಿಯಲು ಯಡಿಯೂರಪ್ಪ ಪ್ರಯತ್ನಿಸುತ್ತಿರುವುದನ್ನು ಕಾಣಬಹುದಾಗಿದೆ. ಜೆಡಿಎಸ್ ನಾಯಕತ್ವವೂ ಕೂಡ ಇದಕ್ಕೆ ರಕ್ಷಣಾತ್ಮಕವಾಗಿ ಪ್ರತಿಕ್ರಿಯಿಸುತ್ತಿದೆ.

ಗಡುವುಗಳ ಗುಡುಗು

ಹೀಗಿರುವಾಗಲೇ ಪ್ರಧಾನವಾಗಿ ಬಿಜೆಪಿ ಮತ್ತು ಕೆಜೆಪಿಗಳ ನಡುವಿನ ಘರ್ಷಣೆ ಮತ್ತೇ ಸರಕಾರ ಉರುಳುವ ಸಾಧ್ಯತೆಗಳತ್ತ ಕೊಂಡೊಯ್ಯುತ್ತಿದೆ. ಸರಕಾರವನ್ನು ಉಳಿಸಿಕೊಳ್ಳುವ ಯಾವುದೇ ಇಚ್ಛೆ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್‌ಗಾಗಲೀ , ಬಿಜೆಪಿ ನಾಯಕರಿಗಾಗಲೀ ಇಲ್ಲದಿರುವುದರಿಂದ ತಾನೇನೂ ಮಾಲಾಗದು ಎಂದು ಹೇಳುವ ಮೂಲಕ ಯಡಿಯೂರಪ್ಪ ಸರಕಾರದೊಳಗಿನ ಬೆಂಬಲಿಗರನ್ನು ಹೊರ ಬರುವಂತೆ ಮಾಡಿ ಅಲ್ಪಮತಕ್ಕೆ ಇಳಿಸಿ ಉರುಳಿಸುವ ಎಚ್ಚರಿಕೆಯನ್ನು ಈ ವಾರದ ಆರಂಭದಲ್ಲಿ ನೀಡಿಯಾಗಿದೆ. ಅಲ್ಲದೇ ಬಹು ಮುಖ್ಯವಾಗಿ 2013ರಲ್ಲಿ ಶೆಟ್ಟರ್ ಬಜೆಟ್ ನ್ನು ಮಂಡಿಸದಂತೆ ತಡೆಯುವ ಲೆಕ್ಕಾಚಾರ ಈಗಾಗಲೇ ತೀವ್ರವಾಗ್ವಾದದಲ್ಲಿದೆ. ಈ ಬಾರಿಯ ಬಜೆಟ್ ನಲ್ಲಿ ಹಲವಾರು ಜನಮರುಳು ಯೋಜನೆಗಳನ್ನು ಪ್ರಕಟಿಸಿ ಜನರ ಓಟುಗಳನ್ನು ಅಪಹರಿಸುವ ಹಂಚಿಕೆ ಬಿಜೆಪಿಗಿದೆ. ಇದಕ್ಕೆ ಅವಕಾಶ ಕಲ್ಪಿಸುವುದು ತನಗೇ ತಿರುಗು ಬಾಣವಾಗಲಿದೆ ಎಂಬುದರಿಂದಾಗಿ ಯಡಿಯೂರಪ್ಪ ಅಂಥಃ ಅವಕಾಶ ನೀಡಲು ಸಿದ್ಧವಿಲ್ಲ.

ಅಸ್ತ್ರ-ಪ್ರತ್ಯಸ್ತ್ರ

ಜೊತೆಗೆ ಯಡಿಯೂರಪ್ಪನಿಂದ ಬಿಜೆಪಿಯನ್ನು ಉಳಿಸಿಕೊಳ್ಳಲು ರಾಜಕೀಯದಿಂದ ದೂರವಿರುವುದಾಗಿ ಹೇಳಿಕೊಳ್ಳುವ ಆರೆಸ್ಸೆಸ್ ಹಲವಾರು ಸಂಘಟನಾ, ರಾಜಕೀಯ ತಂತ್ರಗಳನ್ನು ರೂಪಿಸಿ ಅದರಂತೆ ಕಾರ್ಯವೆಸಗಲು ಬಿಜೆಪಿಗೆ ನಿರ್ದೇಶನ ನೀಡಿದೆ . ಯಡಿಯೂರಪ್ಪನ ಮೇಲೆ ಬಿಡೆಯಿಲ್ಲದೇ, ಬಿಡುವಿಲ್ಲದೇ ಸತತವಾಗಿ ಹಲವಾರು ನಾಯಕರು ನಿರಂತರ ಧಾಳಿ ನಡೆಸಲು ಸೂಚಿಸಿದೆ. ಸಂಘಪರಿವಾರದ ಈ ಬಹುಮುಖಿ ಧಾಳಿಗಳು ಮತ್ತು ಸಂಘಟನಾ ಜಾಲ, ಅದರ ಸಂಪೂರ್ಣ ಸಾಮರ್ಥ್ಯವನ್ನು ಬಳಸುವ ತೀವ್ರತೆಯನ್ನು ಇದೀಗ ನೆಲ ಹುಡುಕುತ್ತಿರುವ ಕೆಜೆಪಿ ಹೇಗೆ ಎದುರಿಸಬಲ್ಲದು ಎಂಬುದು ಅದರ ಜೀವನ್ಮರಣದ ಪ್ರಶ್ನೆಯಾಗಿದೆ. ಹೀಗಾಗಿ ತನ್ನ ಬೆಂಬಲದ ನೆಲೆಯನ್ನು ಕ್ರೋಢೀಕರಿಸಿಕೊಳ್ಳು ಕೆಲ ಪ್ರಯತ್ನಗಳನ್ನು ಆರಂಭಿಸಿದೆ. ತನ ಸರಕಾರ(?)ದ ಯೋಜನೆಗಳನು ಜಾರಿಗೊಳಿಸದೇ ನಿರ್ಲಕ್ಷಿಸಲಾಗುತ್ತಿದೆಯೆಂದು . ಒಂದು ವಾರದೊಳಗೆ ಈಡೇರಿಸದಿದ್ದರೆ ಧರಣ ಸತ್ಯಾಗ್ರಹ ನಡೆಸುವುದಾಗಿ ಯಡಿಯೂರ ಗಡುವು ನೀಡಿರುವುದು ಅಸ್ತಿತ್ವ ಉಳಿಸಿಕೊಳ್ಳ ಪ್ರಯತ್ನವಾಗಿದೆ. ಜೊತೆಗೆ ಭೂ ಹಗರಣ ಆರೋಪಿ ಉಪ ಮುಖ್ಯಮಂತ್ರಿ ಕೆ.ಎಸ್ ಈಶ್ವರಪ್ಪನವರ ಮೇಲೆ ಅಕ್ರಮ ಆಸ್ತಿ ಗಳಿಕೆಯ ಆರೋಪದಲ್ಲಿ ಲೋಕಾಯುಕ್ತ ನಡೆಸಿರು ಧಾಳಿಯು ತನ್ನ ವಿರೋಧಿ ಮೇಲೆ ಅಸ ಬಳಸಲು ದೊರೆತ ಒಂದು ಅವಕಾಶವೆಂದ ಭಾವಿಸಿ ರಾಜೀನಾಮೆ ನೀಡುವಂತೆ ಕೇಳಲಾಗಿದ ಹೀಗೆ ಕೆಜೆಪಿ ಮತ್ತು ಬಿಜೆಪಿಯೊಳಗಿನ ಘರ್ಷಣ ದಿನ, ದಿನಕ್ಕೆ ತೀವ್ರಗೊಳ್ಳುತ್ತಿದೆ.

ಪಟ್ಟದಲ್ಲಿರುವವರಿಗೆ ಒಮ್ಮೆಗೇ ಚಟ್ಟ ಕಟ್ಟಬಾರದೇಕೆ?.

ಇದು ಚುನಾವಣೆಗಳು ಅವಧಿಗಿಂ ಮೊದಲೇ ಬರಬಹುದೇ ಇಂಬ ಪ್ರಶ್ನೆಯನ ಜೀವಂತವಾಗಿರಿಸಿದೆ.ಇದು ಈಗಾಗಲೇ ಜನ ಪಾಲಿಗೆ ಸತ್ತೇ ಹೋಗಿರುವ ಆಡಳಿತವನ ಮತ್ತಷ್ಟೂ ಕೊಳೆಸಲು ಅವಕಾಶ ಕಲ್ಪಿಸಿದೆ. ಇ ಸಾಯುತ್ತಾ ಬಂದಿರುವ ಈ ಸರಕಾರಕ್ಕೆ ಒಮ್ಮೆಗೇ ಚಟ್ಟ ಕಟ್ಟಬಾರದೇಕೆ?.

ಮಡೆಸ್ನಾನ, ಪಂಕ್ತಿಭೇಧ ಪದ್ಧತಿಗೆ ವಿರೋಧ

ಉಡುಪಿಯಲ್ಲಿ ಹೋರಾಟ ನಿರತರ ಮೇಲಿನ ದಬ್ಬಾಳಿಕೆ ಖಂಡಿಸಿ ಪ್ರತಿಭಟನೆ

ಮೌಢ್ಯತೆಯ ಅನಿಷ್ಠ ಪದ್ಧತಿಯಾದ ಮಡೆಸ್ನಾನ ಮತ್ತು ಉಡುಪಿ ಮಠ-ದೇವಾಲಯಗಳಲ್ಲಿ ಜಾರಿಯಲ್ಲಿರುವ ಜಾತಿ ತಾರತಮ್ಯದ ಪಂಕ್ತಿಭೇಧವನ್ನು ನಿಲ್ಲಿಸಲು ಆಗ್ರಹಿಸಿ ರಾಜ್ಯ ಮಟ್ಟದ ಜಾಥಾ ಹಾಗೂ ಪಾದಯಾತ್ರೆಗಳನ್ನು ನಡೆಸಿ ಇದೇ 27ರಂದು ಉಡುಪಿ ಕೃಷ್ಣ ದೇವಾಲಯದೆದುರು ಅತ್ಯಂತ ಶಾಂತ ರೀತಿಯಲ್ಲಿ ಪ್ರತಿಭಟಿಸಲಾಗುತ್ತಿತ್ತು. ಅದಾಗಲೇ ಸಮಾರೋಪಗೊಳ್ಳುವ ಹಂತದಲ್ಲಿ ರಾಜ್ಯದಾದ್ಯಂತ ಬಂದು ಪ್ರತಿಭಟನೆಯಲ್ಲಿ ನೆರೆದಿದ್ದ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಯ ಸಾವಿರಾರು ಕಾರ್ಯಕರ್ತರು ಹಾಗೂ ರಾಜ್ಯ ನಾಯಕರ ಮೇಲೆ ಪೊಲೀಸರು ಏಕಾಏಕಿ ಲಾಠಿ ಚಾರ್ಜ್ ನಡೆಸಿದ್ದಾರೆ. ಇದರಿಂದಾಗಿ ಹತ್ತಾರು ಜನರ ತಲೆ ಒಡೆದು, ಹಲವರು ಪ್ರಜ್ಞಾಹೀನವಾಗುವಂತಾಯಿತು. ಇಂತಹ ದಬ್ಬಾಳಿಕೆ ನಡೆಸಿದ ಉಡುಪಿ



ಪೊಲೀಸರ ಅಮಾನುಷ ಕೃತ್ಯವನ್ನು ಖಂಡಿಸಿ ರಾಜ್ಯದ್ಯಂತ ಪ್ರತಿಭಟನೆ ಅಂಗವಾಗಿ ಬೆಂಗಳೂರಿನ ಕಾರ್ಪೋರೇಷನ್ ವೃತ್ತದಲ್ಲಿ ಪ್ರತಿಭಟನಾ ಧರಣಿಯನ್ನು ಸಿಪಿಐ(ಎಂ) ಹಮ್ಮಿಕೊಂಡಿತ್ತು.

ಪ್ರತಿಭಟನೆಯಲ್ಲಿ ಮಾತನಾಡಿದ ನಿಡುಮಾಮಿಡಿ ಮಹಾಸಂಸ್ಥಾನನದ ಪೀಠಾಧ್ಯಕ್ಷರಾದ ಶ್ರೀವೀರಭದ್ರ ಚನ್ನಮಲ್ಲ ಸ್ವಾಮೀಜಿರವರು "ಉಡುಪಿಯ ಶ್ರೀಕೃಷ್ಣ ಮಠದ ಮುಂದೆ ಪ್ರತಿಭಟನೆ ಮಾಡಿದ ಕಾರ್ಯಕರ್ತರ ಮೇಲೆ ಪೊಲೀಸರು ಹಲ್ಲೆ ಮಾಡಿರುವುದು ಅವಮಾನವೀಯ ಹಾಗೂ ಇಡೀ ರಾಜ್ಯವೇ ತಲೆ ತಗ್ಗಿಸುವಂತ ಸ್ಥಿತಿ. ಉಡುಪಿ ಮತ್ತು ಕುಕ್ಕೆ ಸುಬ್ರಮಣ್ಯದಲ್ಲಿನ ಜಾತಿ ಪದ್ಧತಿಯ ಎಂಜಲೆಲೆ ಮೇಲೆ ಉರುಳುವ ಈ ರೀತಿಯ ಅಮಾನವೀಯ ಅವೈಜ್ಞಾನಿಕ ಪದ್ಧತಿಯ ವಿರುದ್ಧ ನಾನು ಕೂಡ ಸರ್ಕಾರದ ಜೊತೆಯಲ್ಲಿ ಹಲವು ಬಾರಿ ಮಾತುಕತೆ ನಡೆಸಿದ್ದೇನೆ ಆದರೂ ಈ ಸರ್ಕಾರ ಇದಾವುದನ್ನೂ ಸರಿಯಾಗಿ ಪರಿಗಣಿಸುತ್ತಿಲ್ಲ. ಎಂದು ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದರು. ಮುಂದುವರೆದು ಮಾತನಾಡಿದ ಅವರು 175 ಜನರಷ್ಟು ಕಾರ್ಯಕರ್ತರು, ನಾಯಕರನ್ನು ಬಂಧಿಸಿದ್ದು ಅವರ ಮೇಲೆ ಹಲ್ಲೆ ನಡೆಸಲಾಗಿದೆ, ಅಮಾನವೀಯವಾಗಿ ನಡೆಸಿಕೊಂಡಿದ್ದಾರೆ ಹಾಗೂ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. ಹಾಗಾಗಿ ಇದು ಸರಿಯಾಗಿ ತನಿಖೆಯಾಗಬೇಕಿದೆ. ಅಲ್ಲದೆ ಸಿಪಿಐ(ಎಂ) ಪಕ್ಷ ಸಾಮಾಜಿಕ ಪರಿವರ್ತನೆಗಾಗಿ ನಡೆಸಿದ ಈ ಹೋರಾಟ, ಅಲ್ಲದೆ ಮುಂದೆ ಇಡೀ ರಾಜ್ಯದ್ಯಂತ ಹೋರಾಟ ರೂಪಿಸಿ, ಮುಖ್ಯಮಂತ್ರಿ ಮನೆ ಮುಂದೆ ಧರಣಿ ಕುಳಿತುಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಸಿಪಿಐ(ಎಂ) ಪಕ್ಷದ ಹೋರಾಟವು ಪ್ರಜ್ಞಾವಂತ ಮಾನವೀಯ ಹೋರಾಟ, ಪಕ್ಷಾತೀತವಾಗಿ ಹೋರಾಟ ಮಾಡಬೇಕು ಎಂದು ನಾನು ಜನರಲ್ಲಿ ವಿನಂತಿಸಿಕೊಳ್ಳುತ್ತೇನೆ" ಎಂದರು.

ಪೇಜಾವರ ಸ್ವಾಮೀಜಿಯವರ ಜೊತೆಯಲ್ಲಿ ಮಾತುಕತೆ ನಡೆಸಿದಾಗ ಅವರು ನೇರವಾಗಿ ಹೇಳಿದ್ದು ಏನೆಂದರೆ ಎಲ್ಲಾ ಮಠದಲ್ಲಿ ಎರಡು ತರನಾದ ಊಟದ ವ್ಯವಸ್ಥೆ ಇದೆ ಮಡೆಸ್ನಾನ ಬ್ರಾಹ್ಮಣರು-ತುಳುವರು ಮುಂದುವರೆಸಿಕೊಂಡು ಬಂದ ಪದ್ಧತಿ ಎಂದಿದ್ದರು. ಮನೂಷ್ಯ ಮನೂಷ್ಯರನ್ನು ಬಲಿಪಶುಗಳಾಗಿ ನಡೆಸಿಕೊಳ್ಳುವಂತ ಸಂಸ್ಕೃತಿ ಸಂಸ್ಕೃತಿಯಲ್ಲ. ಇದು ಬ್ರಾಹ್ಮಣಶಾಹಿ ಸಂಸ್ಕೃತಿ ಎಂದರು.

ಇದು ಕೇವಲ ಕುಕ್ಕೆ ಸುಬ್ರಮಣ್ಯದಲ್ಲಿ ಮಾತ್ರ ನಡೆವ ಪದ್ಧತಿ ಮಾತ್ರ ಅಲ್ಲ, ಅನೇಕ ಕಡೆ ನಡೆಯುತ್ತಿದೆ. ಪೇಜಾವರ ಇದುವರೆಗೂ



ಒಂದು ದಿನವೂ ಇದಕ್ಕೆ ವಿರೋಧ ವ್ಯಕ್ತಪಡಿಸಿಲ್ಲ. ಸರ್ಕಾರದ ಜೊತೆ ಸಂಧಾನ ಕಾರ್ಯ ನಡೆಸಿದ್ದೇನೆ. ಪಂಕ್ತಿಭೇಧ ವಿರೋಧಿಸಬೇಕು ರಾಜಿ ನ್ಯಾಯ ಮಾಡಬಾರದು ಈ ದೇಶದ ಮರ್ಯಾದೆ ಉಳಿಸಲು ಮಾನವೀಯತೆ ಕಾಪಾಡಲು ಕಪ್ಪು ಜನರ ಅಸಮಾನತೆಯ ವಿರುದ್ಧ ಪೇಜಾವರ ಧ್ವನಿ ಎತ್ತಬೇಕು. ಈಗ ಬಂಧಿತರ ಮೇಲಿನ ಮೊಕದ್ದಮೆಗಳನ್ನು ಹಿಂಪಡೆಯಲು ಹಾಗೂ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಿದ ಪೊಲೀಸರನ್ನು ಅಮಾನತ್ತು ಮಾಡಬೇಕೆಂದು ರಾಜ್ಯ ಸರ್ಕಾರಕ್ಕೆ ಮನವಿ ಮಾಡುತ್ತೇವೆ ಎಂದು ಆಗ್ರಹಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ ಪ್ರಜಾ ವಿಮೋಚನಾ ಚಳುವಳಿಯ ಪಟಾಪಟ್ ನಾಗರಾಜ್, ಸಿಪಿಐ(ಎಂ)ನ ರಾಜ್ಯ ಮುಖಂಡರಾದ ಎಸ್.ವೈ.ಗುರುಶಾಂತ ಪೊಲೀಸರು ಸಂವಿಧಾನ, ಕಾನೂನು ಪಾಲಿಸದೇ, ಪೇಜಾವರ ಮಠಾಧೀಶರ ಜಾತಿವಾದಿ ಸ್ಥಾಪಿತ ಹಿತಾಸಕ್ತಿಗಳ ಆಜ್ಞೆಯಂತೆ ನಡೆದುಕೊಂಡಿದ್ದಾರೆ. ಇದು ಖಂಡನೀಯ. ಅವರ ಮೇಲೆ ಕ್ರಮ ಜರುಗಿಸಬೇಕು ಮತ್ತು ಅಮಾನುಷ ಪದ್ಧತಿಗಳನ್ನು ನಿಷೇಧಿಸಬೇಕು ಎಂದು ಆಗ್ರಹಿಸಿದರು. ಈ ಪ್ರತಿಭಟನಾ ಕಾರ್ಯಕ್ರಮವನ್ನು ಉದ್ದೇಶಿಸಿ ಬೆಂ.ಉತ್ತರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗೌರಮ್ಮ, ಹೆಚ್.ಎನ್.ಗೋಪಾಲಗೌಡ, ಮತ್ತು ಬೆಂ.ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸುರೇಂದ್ರರಾವ್ ಮಾತನಾಡಿದರು.

ಉಡುಪಿಯಲ್ಲಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಕಾರ್ಯಕರ್ತರು ಸಹ ಇಂದಿನ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಸಿಪಿಐ(ಎಂ) ಪಕ್ಷದ ಬೆಂ. ಉತ್ತರ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪ್ರತಾಪ್‌ಸಿಂಹ ಮತ್ತು ಗೋಪಾಲಕೃಷ್ಣರವರು ಸಹ ಮಾತಾನಾಡಿ ಮಡೆ ಮಡೆಸ್ನಾನ ಮತ್ತು ಉಡುಪಿಯ ಶ್ರೀಕೃಷ್ಣ ಮಠ ಸೇರಿದಂತೆ ಇತರೆಡೆ ನಡೆಯುತ್ತಿರುವ ಪಂಕ್ತಿಭೇಧ ಪದ್ಧತಿಯು ನಿಲ್ಲಿಸಬೇಕು. ಇದರ ಅಂಗವಾಗಿ ಇದೇ 21ರಿಂದ ಕರಾವಳಿ ಭಾಗದಾದ್ಯಂತ ನಡೆದ ಪಾದಯಾತ್ರೆ ಮತ್ತು ಜಾಥಾ ಅತ್ಯಂತ ಮೇಲು ಕೀಳೆಂಬ ಬೇಧ ಭಾವ ಮಾಡದೆ ಎಲ್ಲರನ್ನೂ ಸಮಾನವಾಗಿ ನೋಡಬೇಕೆಂದು, ಹೋರಾಟ ನಿರತ ಕಾರ್ಯಕರ್ತರ ಮೇಲಿನ ಮೊಕದ್ದಮೆಗಳನ್ನು ಕೂಡಲೇ ಹಿಂಪಡೆಯಬೇಕೆಂದು ಆಗ್ರಹಿಸಿದರು.


ಪ್ರತಿಭಟನೆಯ ನಂತರ ಸಿಪಿಐ(ಎಂ) ರಾಜ್ಯ ಮುಖಂಡರು ಪೊಲೀಸ್ ಮಹಾ ನಿರ್ದೇಶಕರಿಗೆ ಮನವಿ ಸಲ್ಲಿಸಲಾಯಿತು.



ರಾಜ್ಯ ಮುಖಂಡರಾದ ಎಸ್.ವೈ.ಗುರುಶಾಂತ್, ಜಿಲ್ಲಾ ಮುಖಂಡರಾದ ಗೌರಮ್ಮ, ಸುರೇಂದ್ರರಾವ್, ಪ್ರತಾಪ್‌ಸಿಂಹರವರು ಇದ್ದರು, ನಿಯೋಗವು ಬಿಪಿನ್ ಗೋಪಾಲಕೃಷ್ಣರೊಂದಿಗೆ ಚರ್ಚಿಸಿದ್ದು ಈ ಪ್ರಕರಣ ಬಗ್ಗೆ ವಿಚಾರಣೆ ನಡೆಸಿ ಕ್ರಮವಹಿಸುವುದಾಗಿ ತಿಳಿಸಿದರು.

ಚಳುವಳಿಯ ದಾಪುಗಾಲಿನ ಮುನ್ನಡೆಗೆ ತ್ರಿವಳಿ ಜಿಲ್ಲಾ ಸಮಿತಿಗಳ ರಚನೆ

ಕೆ.ಎನ್. ಉಮೇಶ್



ಸಿಐಟಿಯು 10ನೇ ಬೆಂಗಳೂರು ಜಿಲ್ಲಾ ಸಮ್ಮೇಳನವು 2012 ಡಿಸೆಂಬರ್ 16ರಿಂದ 18 ರವರೆಗೆ ನಗರದ ಕೆ.ಆರ್.ಪುರಂ ಪ್ರದೇಶದ ಬಿ.ನಾರಾಯಣ ಪುರದಲ್ಲಿ ನಡೆಯಿತು. 16ರಂದು ಆಕರ್ಷಕ ಕೆಂಪು ಸ್ವಯಂಸೇವಕರನ್ನು ಒಳಗೊಂಡ 2000 ಕ್ಕೂ ಹೆಚ್ಚು ಜನರ ಮೆರವಣಿಗೆ ರ್‍ಯಾಲಿ ಹಾಗೂ ಬಹಿರಂಗ ಸಭೆಯೊಂದಿಗೆ ಸಮ್ಮೇಳನವು ಆರಂಭವಾಯಿತು. ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ.ತಪನ್ ಸೇನ್ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು. ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ.ಮೀನಾಕ್ಷಿ ಸುಂದರಂ ಆರಂಭಿಕ ಮಾತುಗಳನ್ನಾಡಿದರು. ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ.ಶ್ರೀರಾಮರೆಡ್ಡಿ, ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷರಾದ ಕಾಂ.ವಿ.ಜೆ.ಕೆ. ನಾಯರ್ ಮಾತನಾಡಿದರು. ಜಿಲ್ಲಾ ಸಮಿತಿ ಅಧ್ಯಕ್ಷರಾದ ಕಾಂ.ಹೆಚ್.ಎನ್. ಗೋಪಾಲಗೌಡ ಅಧ್ಯಕ್ಷತೆ ವಹಿಸಿದ್ದರು. ಕಾಂ.ಪಿ.ಮುನಿರಾಜು ಸ್ವಾಗತಿಸಿ ಕಾಂ.ರಾಮಚಂದ್ರ.ಸಿ ವಂದಿಸಿದರು.



ಕಾಂ.ಎಮ್.ಕೆ.ಪಂಧೆ ನಗರ ಕಾಂ.ಜ್ಯೋತಿಬಸು ಸಭಾಂಗಣ ಕಾಂ.ದೀಪಾಂಕರ್ ಮುಖರ್ಜಿ ವೇದಿಕೆಯಲ್ಲಿ ಪ್ರತಿನಿಧಿ ಅಧಿವೇಶನದ ಉದ್ಘಾಟನೆಯನ್ನು ಕಾಂ.ವಿಜೆಕೆ ನಾಯರ್ ನೆರವೇರಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕಾಂ.ಕೆ.ಎನ್.ಉಮೇಶ್ ಮಂಡಿಸಿದ ಕರಡು ವರದಿಯ ಮೇಲೆ 34 ಸಂಗಾತಿಗಳು 3 ಗಂಟೆ ಚರ್ಚೆ ನಡೆಸಿದರು. ಸಮ್ಮೇಳನವು ಸರ್ವಾನುಮತದಿಂದ ವರದಿಯನ್ನು ಅಂಗೀಕರಿಸಿತು.

2013 ಫೆಬ್ರವರಿ 20–21:ಅಖಿಲ ಭಾರತ ಸಾರ್ವತ್ರಿಕ ಮುಷ್ಕರ ಯಶಸ್ಸಿಗೆ ವಿಶೇಷ ಚರ್ಚೆ:

ಸಮ್ಮೇಳನದ ಕಲಾಪದ ಭಾಗವಾಗಿ ಅಖಿಲ ಭಾರತ ಮುಷ್ಕರ ಯಶಸ್ವಿ ಕುರಿತು 2ಗಂಟೆಗೂ ಹೆಚ್ಚು ವಿಶೇಷ ಚರ್ಚೆಯನ್ನು ಏರ್ಪಡಿಸಲಾಗಿತ್ತು. ಕಾಂ.ಮೀನಾಕ್ಷಿ ಸುಂದರಂ ಮಂಡಿಸಿದ ನಿರ್ಣಯವನ್ನು ವಲಯವಾರು ಚರ್ಚೆಯ ನಂತರ 13 ಸಂಗಾತಿಗಳ ಅನುಮೋದನೆಯೊಂದಿಗೆ ಅಂಗೀಕರಿಸಲಾಯಿತು. ಸಮ್ಮೇಳನವು 2012 ಡಿಸೆಂಬರ್ 20ರಿಂದ ಆರಂಭಿಸಿ 2013 ಫೆಬ್ರವರಿ 20ರವರೆಗೆ ವಿವಿಧ ಹಂತದ ತಯಾರಿ ಪ್ರಚಾರ ಪ್ರಕ್ಷೋಭೆಯನ್ನು ರೂಪಿಸಿದೆ. ಡಿಸೆಂಬರ್ 20ರಿಂದ ಜನವರಿ 12ರವರೆಗೆ ಎಲ್ಲಾ ಸಂಘಗಳ ಸರ್ವಸದಸ್ಯರ ಸಭೆಗಳನ್ನು ನಡೆಸಲು ಆನಂತರ ಜನವರಿ 21 ರವರೆಗೆ ಎಲ್ಲಾ ವಲಯ\ತಾಲ್ಲೂಕು ಮಟ್ಟದ ಎಲ್ಲಾ ಸಂಘಗಳ ಜಂಟಿ ಇಸಿ.ಸದಸ್ಯರ ಸಭೆ ನಡೆಸಲು, 21ರಂದು ಎಲ್ಲಾ ಕಾರ್ಖಾನೆಗಳ ಬಳಿ ಧ್ವಜಾರೋಹಣ ನಡೆಸಲು 21ರಿಂದ 26ರವರೆಗೆ ಎಲ್ಲಾ ವಲಯ\ತಾಲ್ಲೂಕು ವ್ಯಾಪ್ತಿಗಳಲ್ಲಿ ಬಹಿರಂಗ ಸಭೆಗಳನ್ನು ನಡೆಸಲು, ಫೆಬ್ರವರಿ 1ರಿಂದ 10ರವರೆಗೆ ಪ್ರಚಾರ ಸಪ್ತಾಹ ಕೈಗೊಳ್ಳಲು, ಆನಂತರ ಜೆಸಿಟಿಯು ನೊಂದಿಗೆ ಜಂಟಿ ಪ್ರಚಾರ ಕೈಗೊಳ್ಳಲು ಸಮ್ಮೇಳನವು ನಿರ್ಣಯಿಸಿದೆ.

ಆಯೋಗವಾರು ಚರ್ಚೆ : ಹೊಸ ಪ್ರಯೋಗ

ಸಮ್ಮೇಳನದಲ್ಲಿ ಅಸಂಘಟಿತ ಕಾರ್ಮಿಕರನ್ನು ಸಂಘಟಿಸುವ ಕುರಿತು ಮತ್ತು ಹೋರಾಟಗಳಿಗೆ ಸೌಹಾರ್ದತೆ ರೂಪಿಸುವ ಕುರಿತು ಪ್ರತಿನಿಧಿಗಳನ್ನು ಒಳಗೊಂಡು 2 ಪ್ರತ್ಯೇಕ ಆಯೋಗಗಳನ್ನು ರಚಿಸಿ ವಿಶೇಷ ಚರ್ಚೆಯನ್ನು ಸಮಾನಾಂತರವಾಗಿ ನಡೆಸಲಾಯಿತು 2 ತಾಸುಗಳ ಆಯೋಗವಾರು ಚರ್ಚೆಗೆ ಪ್ರತ್ಯೇಕ ಲಿಖಿತ ವರದಿ ಮಂಡಿಸಿ ಚರ್ಚೆ ನಡೆಸಲಾಗಿದೆ. ಆಯೋಗಗಳಲ್ಲಿ ತಲಾ 100 ಸಂಗಾತಿಗಳು ಭಾಗವಹಿಸಿದ್ದಾರೆ. ಚರ್ಚೆಯನ್ನು ಒಳಗೊಂಡ ಆಯೋಗಗಳ ವರದಿಯನ್ನು ಸಮ್ಮೇಳನ ಅಂಗೀಕರಿಸಿತು.



ಬೆಂಗಳೂರು ಉತ್ತರ, ದಕ್ಷಿಣ, ಗ್ರಾಮಾಂತರ 3 ಜಿಲ್ಲಾ ಸಮಿತಿಗಳ ರಚನೆ.

ಬೆಂಗಳೂರು ನಗರ, ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳನ್ನು ಒಳಗೊಂಡು ಇದ್ದ ಒಂದು ಜಿಲ್ಲಾ ಸಮಿತಿಯನ್ನು ಈ ವ್ಯಾಪ್ತಿಯಲ್ಲಿನ ಜನಸಂಖ್ಯೆ, ಭೌಗೋಳಿಕ ವ್ಯಾಪ್ತಿ ಮತ್ತು ಕಾರ್ಮಿಕರ ಬಾಹುಳ್ಯವನ್ನು ಆಧರಿಸಿ 3 ಜಿಲ್ಲಾ ಸಮಿತಿಗಳು ಬೆಂಗಳೂರು ಉತ್ತರ, ದಕ್ಷಿಣ ಮತ್ತು ಗ್ರಾಮಾಂತರ ಜಿಲ್ಲಾ ಸಮಿತಿಗಳನ್ನು ಸಮ್ಮೇಳನ ಆಯ್ಕೆ ಮಾಡಿದೆ.

ಸಮ್ಮೇಳನದ ಸಮಾರೋಪ ಭಾಷಣವನ್ನು ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಕಾಂ.ಎಸ್.ಪ್ರಸನ್ನಕುಮಾರ್ ನೆರವೇರಿಸಿದರುಸಮ್ಮೇಳನವು 12ನೇ ರಾಜ್ಯ ಸಮ್ಮೇಳನಕ್ಕೆ ಸರ್ವಾನುಮತದಿಂದ 23 ಪ್ರತಿನಿಧಿಗಳನ್ನು ಆಯ್ಕೆಮಾಡಿದೆ.

ಲೂಟಿ- ದರೋಡೆಗೆ ಕಾರಣವಾಗಿರುವ ಉದಾರವಾದಿ ನೀತಿಗಳ ಬದಲಾವಣೆಗಾಗಿ ಸಾರ್ವತ್ರಿಕ ಮುಷ್ಕರ ಯಶಸ್ವಗೊಳಿಸಿ –ತಪನ್ ಸೇನ್



ಸಮ್ಮೇಳನದ ಬಹಿರಂಗ ಸಭೆ ಉದ್ಘಾಟಿಸಿದ ಸಿಐಟಿಯು ಅಖಿಲ ಭಾರತ ಪ್ರಧಾನ ಕಾರ್ಯದರ್ಶಿ ಕಾಂ. ತಪನ್ ಸಿಂಗ್ ರವರು ಮಾತನಾಡುತ್ತಾ ಕೇಂದ್ರ–ರಾಜ್ಯ ಸರ್ಕಾರಗಳು ಅನುಸರಿಸುತ್ತಿರುವ ನವ ಉದಾರವಾದಿ ಆರ್ಥಿಕ ನೀತಿಗಳು ಕೇಂದ್ರದ ಸರ್ಕಾರದಲ್ಲಿನ ಜನರಿಗೆ ರಾಷ್ಟ್ರದ ಸಂಪತ್ತಿನ ದರೋಡೆಗೆ ರಾಜ್ಯ ಸರ್ಕಾರದಲ್ಲಿನ ಜನರಿಗೆ ಲೂಟಿಗೆ ಅವಕಾಶ ಕಲ್ಪಿಸಿವೆ. ನವ ಉದಾರವಾದಿ ಆರ್ಥಿಕ ನೀತಿಗಳ ಪ್ರತಿಪಾದಕರಾದ ಕಾಂಗ್ರೆಸ್ ಕೇಂದ್ರದಲ್ಲಿ ಬಿಜೆಪಿ ರಾಜ್ಯದಲ್ಲಿ ಲೂಟಿ ಹಾಗೂ ದರೋಡೆಯಲ್ಲಿ ತೊಡಗಿದ್ದಾರೆ. 1.83ಲಕ್ಷ ಕೋಟಿರೂಗಳ ಕಲ್ಲಿದ್ದಲು ಹಗರಣ ಚರ್ಚೆಗೆ ಸಂಸತ್ತಿನಲ್ಲಿ ಎಡಪಕ್ಷಗಳು ಒತ್ತಾಯಿಸಿದರೆ ಬಿಜೆಪಿಯವರು ಮೌನವಹಿಸಿ ಚರ್ಚೆಗೆ ಬಾರದಂತೆ ನೋಡಿಕೊಂಡಿದ್ದಾರೆ. ಇದು ಈ ಎರಡೂ ಪಕ್ಷಗಳ ಮ್ಯಾಚ್ ಫಿಕ್ಸಿಂಗನ್ನು ತೋರುತ್ತದೆ ಎಂದರು. ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ಕುರಿತು ಸಂಸತ್ತಿನ ಚರ್ಚೆಯಲ್ಲಿ ವೀರಾವೇಶದ ಮಾತನಾಡಿದ ಸಮಾಜವಾದಿ ಪಕ್ಷ ಮತ್ತು ಬಹುಜನ ಸಮಾಜವಾದಿ ಪಕ್ಷಗಳು ಮತಚಲಾವಣೆ ವೇಳೆ ನಡೆದುಕೊಂಡ ರೀತಿ, ನವ ಉದಾರವಾದಿ ಆರ್ಥಿಕ ನೀತಿಗಳಿಗೆ ಅವರ ಬದ್ದತೆಯನ್ನು ತೋರುತ್ತದೆ. ಚಿಲ್ಲರೆ ವ್ಯಾಪಾರದಲ್ಲಿ ವಿದೇಶಿ ನೇರ ಬಂಡವಾಳ ರಾಷ್ಟ್ರಕ್ಕೆ ಮಾರಕ ಆರ್ಥಿಕತೆಯನ್ನು ದಿವಾಳಿ ಮಾಡಲಿದೆ ಎಂದರು. ಈ ಎಲ್ಲಾ ಹಿನ್ನೆಲೆಯಲ್ಲಿ ನವ ಉದಾರವಾದಿ ಆರ್ಥಿಕ ನೀತಿಗಳನ್ನು ಬದಲಾಯಿಸಲು ಮುಂದಾಗಬೇಕೆಂದು ಕರೆ ನೀಡಿದರು.

ಈ ನಿಟ್ಟನಲ್ಲಿ ಎಲ್ಲಾ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ಕರೆ ನೀಡಿರುವ 2013 ಫೆಬ್ರವರಿ 20–21ರ ಮುಷ್ಕರ ಮಹತ್ತರವಾದದ್ದು ಆ ಮುಷ್ಕರವು ಈ ನೀತಿಗಳ ವಿರುಧ್ಧದ ಜನತೆಯ ಪ್ರತಿರೋಧವಾಗಿ ಮಾರ್ಪಡುವಂತೆ ಮಾಡಬೇಕಿದೆ ಎಂದರು. ಆಹಾರದ ಹಕ್ಕಿನ ಬಗ್ಗೆ ಮೊಸಳೆ ಕಣ್ಣೀರನ್ನು ಸುರಿಸುವ ಕೇಂದ್ರ ಸರ್ಕಾರ ಮತ್ತು ಕುಟುಂಬಕ್ಕೆ ಮಾಸಿಕ 35 ಕೆಜಿ ಅಕ್ಕಿಯನ್ನು 2 ರೂ.ನಂತೆ ನೀಡುವ ಭರವಸೆ ನೀಡಿದ್ದ ರಾಜ್ಯ ಸರ್ಕಾರಗಳು ಇರುವ ಪಡಿತರ ವ್ಯವಸ್ಥೆಯನ್ನೆ ನಾಶ ಮಾಡಲು ಹೊರಟಿವೆ. ರಾಜ್ಯದ ಬಿಜೆಪಿ ಸರ್ಕಾರಕ್ಕೆ ಜನತೆಯ ಬಗ್ಗೆ ಕಾಳಜಿ ಇಲ್ಲ, ಭ್ರಷ್ಟಾಚಾರ–ಒಳಜಗಳದಲ್ಲಿ ಮುಳುಗಿದೆ. ಇಂತಹ ಕೇಂದ್ರ–ರಾಜ್ಯ ಸರ್ಕಾರಗಳ ಬದಲಾವಣೆಗೆ ಆರ್ಥಿಕ ಬೇಡಿಕೆಗಳಿಗಾಗಿ ಕೆಂಬಾವುಟ ಹಿಡಿಯುವ ಕಾರ್ಮಿಕರು ರಾಜಕೀಯವಾಗಿಯೂ ಕೆಂಬಾವುಟವನ್ನು ಬೆಂಬಲಿಸುವ ಕರ್ತವ್ಯವನ್ನು ಕೈಗೊಳ್ಳಬೇಕಿದೆ ಎಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ.ಜಿ.ವಿ.ಶ್ರೀರಾಮರೆಡ್ಡಿ ಕೋರಿದರು.

ರಾಜ್ಯವ್ಯಾಪಿ ಸಮಾನ ಕನಿಷ್ಠ ವೇತನ ರೂ.10,000 ನಿಗದಿ ಮಾಡಲು ಮುಂದಾಗದ ರಾಜ್ಯ ಸರ್ಕಾರ ದಿನದ ದುಡಿಮೆಯ ಕಾಲಾವಧಿಯನ್ನು ಹೆಚ್ಚಿಸಲು ಕಾಯ್ದೆ ತಿದ್ದುಪಡಿ ಮಾಡಿದೆ. ಇಂತಹ ಕಾರ್ಮಿಕ ವಿರೋಧಿ–ಜನವಿರೋಧಿ ಸರ್ಕಾರ ಕೋಮುವಾದಿ ನೀತಿಗಳನ್ನು ಅನುಸರಿಸುತ್ತಿದೆ. ಇದರ ಬದಲಾವಣೆಗೆ ಕಾರ್ಮಿಕ ವರ್ಗದ ಐಕ್ಯತೆ ಮತ್ತು ಹೋರಾಟಗಳು ಮುಖ್ಯ. ಸಂಘವಾರು ಕಾರ್ಖಾನೆವಾರು ಹೋರಾಟಗಳ ಜೊತೆಗೆ, ಸಾಮಾನ್ಯ ಹೋರಾಟಗಳು ಚಳುವಳಿಯಾಗಿ ಮಾರ್ಪಾಡ ಬೇಕಿವೆ ಎಂದು ಸಿಐಟಿಯು ರಾಜ್ಯ ಅಧ್ಯಕ್ಷರಾದ ಕಾಂ.ವಿಜೆಕೆ ನಾಯರ್ ನುಡಿದರು.

ಜನಶಕ್ತಿ
ಕನ್ನಡ ವಾರಪತ್ರಿಕೆ

ವಿಶಾಲ ಜನಸಮೂಹಗಳ ಬದುಕನ್ನುಉತ್ತಮ ಪಡಿಸುವ ಹೋರಾಟಗಳು ತೀವ್ರಗೊಳ್ಳುವ ವರ್ಷವಾಗಲಿ

2012ರಲ್ಲೂ ಲೋಕಪಾಲ ಮಸೂದೆ ಪಾಸಾಗಲಿಲ್ಲ. ಭ್ರಷ್ಟಾಚಾರದ ಹಗರಣಗಳ ಒಂದು ಸರಣಿಯೇ ದೇಶವನ್ನು ನಡುಗಿಸಿದೆ. ನಮ್ಮ ದೇಶದ ಜಿಡಿಪಿ 9ಶೇ. ದರದಲ್ಲಿ ಏರಬೇಕೆಂಬ ಗುರಿಯಿತ್ತು, ಆದರೆ ಈ ವರ್ಷ ಮುಗಿಯುವ ವೇಳೆಗೆ ಕಂಡಿರುವುದು 6ಶೇ. ಅಥವ ಅದಕ್ಕಿಂತಲೂ ಕಡಿಮೆ ಬೆಳವಣಿಗೆ ದರವನ್ನು. ಸಾಮಾಜಿಕ ರಂಗದಲ್ಲಿಯೂ 2012 ಪ್ರತಿಗಾಮಿ ಚಲನೆಯನ್ನು ಕಂಡಿದೆ. 2013 ನಮ್ಮ ಸಾಮರ್ಥ್ಯವನ್ನು ಈಡೇರಿಸಿಕೊಳ್ಳುವ ಅವಕಾಶದ ವಂಚನೆ ಹಾಗೆಯೇ ಮುಂದುವರೆಯಲು ಬಿಡಬಾರದು. ನಮ್ಮ ವಿಶಾಲ ಜನಸಮೂಹಗಳು ತಮಗೆ ನ್ಯಾಯಬದ್ಧವಾಗಿ ಸಲ್ಲಬೇಕಾದ್ದನ್ನು ಪಡೆಯಲು ಮತ್ತು ನಮ್ಮ ದೇಶ ತನ್ನಲ್ಲಿ ಅಡಗಿರುವ ಸಾಮರ್ಥ್ಯವನ್ನು ಈಡೇರಿಸಿಕೊಳ್ಳಲು ಹೋರಾಟವನ್ನು ತೀವ್ರಗೊಳಿಸುವ ಒಂದು ವರ್ಷವಾಗಬೇಕು

ಇ

ನಮ್ಮೆಲ್ಲ ಓದುಗರಿಗೆ ಹೊಸ ವರ್ಷದ ಶುಭಾಶಯಗಳು

ಆದರೆ ಈ ಶುಭಾಶಯಗಳು ದೇಶದ ರಾಜಧಾನಿಯಲ್ಲಿ ಘೋರ ಸಾಮೂಹಿಕ ಅತ್ಯಾಚಾರಕ್ಕೆ ಬಲಿಯಾದಾಕೆ ಆಸ್ಪತ್ರೆಯಲ್ಲಿ ಈಗಲೂ ಜೀವ ಉಳಿಸಿಕೊಳ್ಳಲು ಹೆಣಗುತ್ತಿರುವ ನೋವಿನಿಂದ, ಕ್ರೋಧದಿಂದ ತುಂಬಿದ ಹೃದಯದಿಂದ ಬರಬೇಕಾದ ಸನ್ನಿವೇಶ ಉಂಟಾಗಿದೆ.

'ಹಳೆಗಾಲ ಹೋಗಿ ಹೊಸಕಾಲ ಬರಲಿ' ಎಂಬ ಕವಿವಾಣಿಯನ್ನು ಸಾಮಾನ್ಯವಾಗಿ ಹೊಸ ವರ್ಷದ ಶುಭಾಶಯಗಳೊಂದಿಗೆ ನೆನಪಿಸಿ ಕೊಳ್ಳಲಾಗುತ್ತದೆ. ಮುಂಬರುವ ವರ್ಷ ಉತ್ತಮವಾಗಿರುತ್ತದೆ ಎಂಬ ನಿರೀಕ್ಷೆಯಿರುತ್ತದೆ. ಆದರೆ ಈಗ ಮುಗಿಯುತ್ತಿರುವ ವರ್ಷದ ನಮ್ಮ ಅನುಭವಗಳು ಇದನ್ನು ಹುಸಿಗೊಳಿಸಿವೆ. ನಿರೀಕ್ಷೆಗಳೇನೂ ತಂತಾನೇ ವಾಸ್ತವಗೊಳ್ಳು ವುದಿಲ್ಲ. ವಾಸ್ತವ ಪರಿಸ್ಥಿತಿಗಳು ಉತ್ತಮ ಗೊಳ್ಳಬೇಕಾದರೆ ಅದು ಜನತೆಯ ನಿರಂತರ ಹೋರಾಟಗಳಿಂದ ಮಾತ್ರ ಸಾಧ್ಯ.

ಹಿಂದಿನ ವರ್ಷ ಕೊನೆಗೊಂಡದ್ದು ಯುಪಿಎ-2 ಸರಕಾರ ರಾಜ್ಯಸಭೆಯಲ್ಲಿ ಲೋಕಪಾಲ ಮಸೂದೆಗೆ ಅಡ್ಡಗಾಲು ಹಾಕುವುದರೊಂದಿಗೆ. "2012 ಕೊನೆಗೂ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರವನ್ನು ಎದುರಿಸುವ ಸಂಸ್ಥೆಗಳನ್ನು ಸೃಷ್ಟಿಸಲಿಕ್ಕಾಗಿ ನಡೆಸಿದ ನಾಲ್ಕು ದಶಕಗಳ ಹೋರಾಟದ ನಂತರ ಈ ಸಂಸ್ಥೆಗಳನ್ನು ಸ್ಥಾಪಿಸಲು ಎಲ್ಲ ರೀತಿಯಿಂದಲೂ ಸಿದ್ಧವಾಗಿರುವಂತೆ ಕಾಣುತ್ತದೆ. ಆದರೆ ಇದು ತಂತಾನೇ ಆಗಲಾರದು. ಇದು ಅವಿಶ್ರಾಂತ ಸಾರ್ವಜನಿಕ ಒತ್ತಡದ ಮೂಲಕವೇ ಬರಬೇಕಾಗಿದೆ" ಎಂದು ನಾವು ಈ ಅಂಕಣದಲ್ಲಿ ಆಶಿಸಿದ್ದೆವು. ಆದರೆ, ಸಾರ್ವಜನಿಕ ಒತ್ತಡ ಹೆಚ್ಚುತ್ತಿದ್ದರೂ, ಇದು ಸಂಭವಿಸದೆಯೇ 2012 ಕೊನೆಗೊಳ್ಳುತ್ತಿದೆ.

ಈ ನಡುವೆ 2012 ರಲ್ಲಿ ಭ್ರಷ್ಟಾಚಾರದ ಹಗರಣಗಳ ಒಂದು ಸರಣಿಯೇ ದೇಶವನ್ನು ನಡುಗಿಸಿದ್ದನ್ನು ಕಂಡಿದ್ದೇವೆ. ನಿಷ್ಕರುಣೆಯಿಂದ ಈ ರೀತಿ ನಡೆಯುತ್ತಿರುವ ನಮ್ಮ ಸಂಪನ್ಮೂಲಗಳ ಲೂಟಿಯ ಅನೈತಿಕತೆ ಒತ್ತಟ್ಟಿಗಿರಲಿ, ಅದು ಅಪಾರ ಸಂಪನ್ಮೂಲಗಳನ್ನು ಸಾಮಾಜಿಕ ಅಭಿವೃದ್ಧಿಗೆ ದಕ್ಕದಂತೆಯೂ ಮಾಡಿ ನಮ್ಮ ಜನತೆಗೆ ಒಂದು ಉತ್ತಮ ಬದುಕನ್ನು ನಿರಾಕರಿಸುತ್ತಿದೆ. "ಈ ಹೋರಾಟವನ್ನು ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರಕ್ಕೆ ಇದುವರೆಗೆ ತಿಳಿದಿರದಿದ್ದ ದಾರಿಗಳನ್ನು ಸತತವಾಗಿ ತೆರೆದು ಕೊಡುತ್ತಿರುವ ಈ ಆರ್ಥಿಕ ಸುಧಾರಣೆಗಳ ವಿರುದ್ಧ ಹೋರಾಟಗಳೊಂದಿಗೆ ಬೆಸೆಯದಿದ್ದರೆ, ಅದು ಪರಿಣಾಮಕಾರಿಯಾಗದು" ಎಂದೂ ಈ ಅಂಕಣದಲ್ಲಿ ನಾವು ಹೇಳಿದ್ದೆವು.

ಭಾರತದ ಜನತೆಯ ದುರದೃಷ್ಟವೆಂದರೆ, ಯುಪಿಎ-2 ಸರಕಾರ ನವ=ಉದಾರವಾದಿ ಆರ್ಥಿಕ ಸುಧಾರಣೆಗಳ ಟಕ್ಕಿನಲ್ಲೇ ಎಡಬಿಡದೆ ಸಾಗುತ್ತಿದೆ. ಇದು, ನಿರೀಕ್ಷೆಯಂತೆ, ಜನತೆಯ ಮೇಲೆ ಒಂದು ಗಂಭೀರ ಆರ್ಥಿಕ ಇಳಿಗತಿಯ ಸಂಕಟಗಳನ್ನು ಹೇರಿದೆ. ನಮ್ಮ ದೇಶದ ಜಿಡಿಪಿ 9ಶೇ. ದರದಲ್ಲಿ ಏರಬೇಕೆಂಬ ಗುರಿಯಿತ್ತು, ಆದರೆ ಈ ವರ್ಷ ಮುಗಿಯುವ ವೇಳೆಗೆ ಕಂಡಿರುವುದು 6ಶೇ. ಅಥವ ಅದಕ್ಕಿಂತಲೂ ಕಡಿಮೆ ಬೆಳವಣಿಗೆ ದರವನ್ನು. ಎಲ್ಲ ಜೀವನಾವಶ್ಯಕ ಸರಕುಗಳ ಬೆಲೆಗಳಲ್ಲಿ ಅವ್ಯಾಹತ ಏರಿಕೆ ಜನಗಳ ಸಂಕಟವನ್ನು ಮತ್ತಷ್ಟು ಹೆಚ್ಚಿಸಿದೆ.

ಜಾಗತಿಕ ಆರ್ಥಿಕ ಬಿಕ್ಕಟ್ಟು ಮತ್ತು ಹಿಂಜರಿತ ಮುಂದುವರೆಯುತ್ತಿರುವಾಗ, ಇಂತಹ ಒಂದು ನವ-ಉದಾರವಾದಿ ಧೋರಣೆಯ ದಿಕ್ಪಥ ಎರಡು ಭಾರತಗಳ ನಡುವಿನ ಕಂದರವನ್ನು ಇನ್ನಷ್ಟು ಹೆಚ್ಚಿಸಬಹುದಷ್ಟೇ. ಈ ಸುಧಾರಣೆಗಳು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ದೊಡ್ಡ ದೇಶೀ ಬಂಡವಾಳಗಾರರಿಗೆ ಗರಿಷ್ಟ ಲಾಭಗಳನ್ನು ಗಳಿಸಲು ಹೆಚ್ಚೆಚ್ಚು ದಾರಿಗಳನ್ನು ಕಲ್ಪಿಸಿ ಕೊಡುತ್ತಲೇ, ಅದರ ಪರಿಣಾಮವಾಗಿ ಬಡವರನ್ನು ಇನ್ನಷ್ಟು ಬಡವರಾಗಿಸುತ್ತಿವೆ. ಏಕೆಂದರೆ, ಬಹುಪಾಲು ದುಡಿಯುವ ಜನಗಳ ಶೋಷಣೆಯನ್ನು ತೀವ್ರಗೊಳಿಸುವ ಮೂಲಕವೇ ತಾನೇ ಮಾಲಕರು ಗರಿಷ್ಟ ಲಾಭಗಳನ್ನು ಗಳಿಸಲು ಸಾಧ್ಯ?

ಧೋರಣೆಯ ದಿಕ್ಕನ್ನು ಬದಲಿಸಲೇ ಬೇಕಾಗಿದೆ

2013 ರಲ್ಲಿ ನಮ್ಮ ಜನತೆಗೆ ಒಂದು ಉತ್ತಮ ಬದುಕನ್ನು ನಿರ್ಮಿಸಬೇಕಾದರೆ, ಈ ಧೋರಣೆಯ ದಿಕ್ಕನ್ನು ಬದಲಿಸಲೇ ಬೇಕಾಗಿದೆ. ದೇಶದ ಮುಂದಿರುವ ಪರ್ಯಾಯವೆಂದರೆ, ನಮ್ಮ ಅತ್ಯಂತ ಅಗತ್ಯ ಸಾಮಾಜಿಕ ಮತ್ತು ಆರ್ಥಿಕ ಮೂಲರಚನೆಗಳನ್ನು ಕಟ್ಟಲು ಬೃಹತ್ ಪ್ರಮಾಣದಲ್ಲಿ ಸಾರ್ವಜನಿಕ ಹೂಡಿಕೆಗಳನ್ನು ಮಾಡುವುದು. ಇದು ಗಮನಾರ್ಹ ಪ್ರಮಾಣದಲ್ಲಿ ಹೊಸ ಉದ್ಯೋಗಾವಕಾಶಗಳನ್ನು ನಿರ್ಮಿಸಿ, ಆಮೂಲಕ ನಮ್ಮ ದೇಶದೊಳಗಿನ ಬೇಡಿಕೆ ಯನ್ನು ವಿಸ್ತರಿಸುವಲ್ಲಿ ಕೊಡುಗೆ ನೀಡಬಲ್ಲುದು. ಇದು ನಮ್ಮ ದೇಶದ ಸರಕು ಉತ್ಪಾದನಾ ವಲಯಕ್ಕೆ ಒಟ್ಟಾರೆಯಾಗಿ ಕೈಗಾರಿಕಾ ವಲಯಕ್ಕೆ ಉತ್ತೇಜನೆ ನೀಡುತ್ತದೆ. ಒಂದು ಬಹುಕಾಲ ನಿಲ್ಲಬಲ್ಲ, ಮತ್ತು ಎಲ್ಲರನ್ನೂ ಒಳಗೊಳ್ಳಬಲ್ಲ ಒಂದು ಬೆಳವಣಿಗೆಯ ಮಾದರಿಗೆ ಇಂತಹ ಒಂದು ಪರ್ಯಾಯದ ಮೂಲಕ ಚಾಲನೆ ಸಿಗುತ್ತದೆ. ಈಗಿನ ಜಾಗತಿಕ ಸಂದರ್ಭದಲ್ಲಿ, ಕಳೆದ ಐದು ವರ್ಷಗಳಿಂದ ಮುಂದುವರೆ ಯುತ್ತಿರುವ ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದಾಗಿ ನಮ್ಮ ರಫ್ತುಗಳಲ್ಲಿ ತೀವ್ರ ಇಳಿಕೆಯಾಗಿರುವ ಸಂದರ್ಭದಲ್ಲಿ ಇದು ಇನ್ನಷ್ಟು ಪ್ರಸ್ತುತವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಯಾವ ರಫ್ತು-ಆಧಾರಿತ ಕಾರ್ಯತಂತ್ರವೂ ಕೆಲಸ ಮಾಡದು. ಯಾವುದೇ ಬೆಳವಣಿಗೆಯ ಮೇಲೆ ಆಂತರಿಕ ಬೇಡಿಕೆಯ ಮಟ್ಟ ಬಹಳ ಪ್ರಭಾವ ಬೀರುತ್ತದೆ. ಈಗ ಕೈಗೊಳ್ಳುತ್ತಿರುವ ನವ-ಉದಾರವಾದಿ ಸುಧಾರಣೆಗಳ ಪರಿಣಾಮ ತದ್ವಿರುದ್ಧ- ಅವು ಬಹುಪಾಲು ಜನರ ಖರೀದಿ ಸಾಮರ್ಥ್ಯವನ್ನು ತೀವ್ರವಾಗಿ ಇಳಿಸುತ್ತಿವೆ.

ಇಂತಹ ಭಾರೀ ಪ್ರಮಾಣದ ಸಾರ್ವಜನಿಕ ಹೂಡಿಕೆಗಳಿಗೆ ಸಂಪನ್ಮೂಲಗಳನ್ನು ಸರಕಾರ ಎಲ್ಲಿಂದ ತರಬೇಕು- ಈ ಪ್ರಶ್ನೆಯನ್ನು ಸಾಮಾನ್ಯವಾಗಿ ಎತ್ತಲಾಗುತ್ತದೆ. ಕಳೆದ ಹಣಕಾಸು ವರ್ಷದಲ್ಲೇ ಸರಕಾರ ತಾನು ಕಾನೂನು ಪ್ರಕಾರ ವಸೂಲು ಮಾಡಬೇಕಾಗಿದ್ದ 5.28 ಲಕ್ಷ ಕೋಟಿ ರೂ.ಗಳನ್ನು ಸ್ವಯಮಿಚ್ಛೆಯಿಂದಲೇ ಬಿಟ್ಟುಕೊಟ್ಟಿದೆ ಎಂದು ನಾವು ಹಲವು ಬಾರಿ ತೋರಿಸಿ ಕೊಟ್ಟಿದ್ದೇವೆ. ನಮ್ಮ ಹಣಕಾಸು ಕೊರತೆ ಜಿಡಿಪಿಯ 6.9 ಶೇ.ದಷ್ಟು ಬೆಳೆದು ಬಿಟ್ಟಿದೆ ಎಂದು ಹೇಳಲಾಗುತ್ತಿದೆ. ಅಂದರೆ 5.22 ಲಕ್ಷ ಕೋಟಿ ರೂ.ಗಳು. ಇದು ಸರಕಾರ ಬಿಟ್ಟುಕೊಟ್ಟ ತೆರಿಗೆಗಳ ಮೊತ್ತಕ್ಕಿಂತ ಕಡಿಮೆ. ಆದರೆ ಈ ಕೊರತೆಯನ್ನು ಇಳಿಸುವ ಹೆಸರಿನಲ್ಲೇ ಡೀಸೆಲ್, ಅಡುಗೆ ಅನಿಲ, ಯೂರಿಯ ಇತ್ಯಾದಿಗಳ ಬೆಲೆಗಳನ್ನು ಏರಿಸಲಾಗಿದೆ ಮತ್ತು ಬಡವರಿಗೆ ಕೊಡುವ ಅಲ್ಪ ಸಬ್ಸಿಡಿಗಳನ್ನು ಕೂಡ ಇನ್ನಷ್ಟು ಕಡಿತ ಮಾಡಬೇಕೆಂದು ಹೇಳಲಾಗುತ್ತದೆ. ಶ್ರೀಮಂತರಿಗೆ ರಿಯಾಯ್ತಿಗಳನ್ನು ಅಥವ ಸಬ್ಸಿಡಿಗಳನ್ನು ಕೊಡುವುದರಿಂದಾಗಿ ಉಂಟಾದ ಕೊರತೆಯ ಹೊರೆಯನ್ನು ಬಡವರು ಹೊರಬೇಕು, ಅದಕ್ಕಾಗಿ ಇನ್ನಷ್ಟು ಸಂಕಟಗಳನ್ನು ಅನುಭವಿಸಬೇಕು.

ಅಭೂತಪೂರ್ವ ಐಕ್ಯತೆ

ನಮ್ಮ ಬಹುಪಾಲು ಜನಗಳ ಹಿತದೃಷ್ಟಿಯಿಂದ ಮತ್ತು ಒಂದು ಉತ್ತಮ ಭಾರತದ ನಿರ್ಮಾಣ ಮಾಡಬೇಕಾದರೆ, ಇಂತಹ ಒಂದು ಧೋರಣೆಯ ದಿಕ್ಕನ್ನು ಮುಂದುವರೆಸಲು ಬಿಡಲಾಗದು. ಆದ್ದರಿಂದ ವರ್ಷ 2013 ಸರಕಾರ ತನ್ನ ವಿನಾಶಕಾರಿ ಧೋರಣೆಗಳನ್ನು ಕೈಬಿಡುವಂತೆ ಜನಗಳಿಂದ ಹೆಚ್ಚಿನ ಒತ್ತಡಗಳನ್ನು ಕಾಣಬೇಕಾಗಿದೆ. ಸ್ವತಂತ್ರ ಭಾರತದಲ್ಲಿ ಮೊದಲ ಬಾರಿಗೆ, ಎಲ್ಲ ಕಾರ್ಮಿಕ ಸಂಘಟನೆಗಳು ತಮ್ಮ ಭಿನ್ನ ರಾಜಕೀಯ ಒಲವುಗಳನ್ನು ಬದಿಗಿಟ್ಟು, ಅಭೂತಪೂರ್ವ ಐಕ್ಯತೆಯನ್ನು ಪ್ರದರ್ಶಿಸಿದ್ದಾರೆ, ಈ ಧೋರಣೆಗಳ ವಿರುದ್ಧ ಎರಡು ದಿನಗಳ ಕೈಗಾರಿಕಾ ಕಾರ್ಯಾಚರಣೆಗೆ ಕರೆ ನೀಡಿದ್ದಾರೆ. ನಮ್ಮ ದೇಶ ಮತ್ತು ನಮ್ಮ ಜನತೆಯ ಬಗ್ಗೆ ಕಾಳಜಿ ಇರುವವರೆಲ್ಲರೂ ಇದು ಯಶಸ್ವಿ ಯಾಗುವಂತೆ ಮಾಡಬೇಕಾಗಿದೆ. ಏಕೆಂದರೆ ಈ ಧೋರಣೆಗಳನ್ನು ಮುಂದುವರೆಸುವುದೆಂದರೆ ನಮ್ಮ ಬಹುಪಾಲು ಜನತೆಯ ಜೀವನಾಧಾರ ಗಳನ್ನು ಮತ್ತಷ್ಟು ನಾಶಪಡಿಸಿದಂತೆಯೇ ಸರಿ, ಮತ್ತು ನಮ್ಮ ದೇಶದ ಸಂಪತ್ತು ಭ್ರಷ್ಟಾಚಾರ ಮತ್ತು ಲಂಪಟತನದ ಮೂಲಕ ಪೋಲಾಗುವುದಕ್ಕೆ ಬಿಟ್ಟಂತೆಯೇ ಸರಿ.

ಸಾಮಾಜಿಕ ರಂಗದಲ್ಲಿ 2012 ಪ್ರತಿಗಾಮಿ ಚಲನೆಯನ್ನು ಕಂಡಿದೆ-ಖಾಪ್ ಪಂಚಾಯತು ಗಳು, ಜಾತಿ ದಮನದ ಮುಂದುವರಿಕೆ, ಧಾರ್ಮಿಕ ಅಲ್ಪಸಂಖ್ಯಾತರಿಗೆ ಪ್ರಾಥಮಿಕ ಹಕ್ಕುಗಳು ಮತ್ತು ಅವಕಾಶಗಳ ನಿರಾಕರಣೆಯ ಮುಂದುವರಿಕೆ ಮತ್ತು ಮಹಿಳೆಯರ ಮೇಲೆ ಲೈಂಗಿಕ ದಾಳಿಗಳಲ್ಲಿ ಆತಂಕಕಾರಿ ಹೆಚ್ಚಳಗಳನ್ನು ಕಂಡಿದೆ. ದಿಲ್ಲಿ ಸಾಮೂಹಿಕ ಅತ್ಯಾಚಾರ ಒಂದು ಎಲ್ಲೋ ಕೆಲವೆಡೆ ನಡೆಯಬಹುದಾದ ಅಮಾನವೀಯ ಘೋರ ಅಪರಾಧವಲ್ಲ. ಮಹಿಳೆಯರ ಮೇಲೆ, ಬಾಲಕಿಯರ ಮೇಲೂ ಇಂತಹ ದಾಳಿಗಳ ವರದಿಗಳು ದೇಶದ ಎಲ್ಲೆಡೆಗಳಿಂದ ಸತತವಾಗಿ ಬರುತ್ತಲೇ ಇರುತ್ತವೆ. ನಮ್ಮ ಸಮಾಜದ ಈ ಅಮಾನವೀಕರಣ ಭೂತಕಾಲದ ಪ್ರತಿಗಾಮಿ ಮೌಲ್ಯ ವ್ಯವಸ್ಥೆಗಳನ್ನು ನವ-ಉದಾರವಾದದ ಅಷ್ಟೇ ಪ್ರತಿಗಾಮಿ ಸಂಸ್ಕೃತಿಯೊಂದಿಗೆ ಬೆರೆಸಿದ ಒಂದು ಮಾರಕ ಹೊಲಸು ಮಿಶ್ರಣದ ಫಲಿತಾಂಶ. ಅಲ್ಲದೆ, ಈ ಆರ್ಥಿಕ ಸುಧಾರಣೆಗಳು, ಒಂದೆಡೆ ವಿದೇಶಿ ಮತ್ತು ದೇಶೀ ಬಂಡವಾಳದ ಲಾಭಗಳ ಕೊಬ್ಬು ಬೆಳೆಸುತ್ತಲೇ, ನಮ್ಮ ಜನಗಳಿಗೆ ಸಿಗುವ ಪಾಲನ್ನು ಸತತವಾಗಿ ಇಳಿಸುತ್ತಿವೆ. ಇದರಿಂದಾಗಿ ಇದರಲ್ಲಿ ತಮ್ಮ ಭಾಗವನ್ನು ಉಳಿಸಿಕೊಳ್ಳಲು ವಿವಿಧ ವಿಭಾಗಗಳ ನಡುವೆ ಸ್ಪರ್ಧೆ, ಹೊಯ್ದಾಟಗಳು ನಡೆಯುತ್ತಿವೆ. ಇದು ನಮ್ಮ ಸಮಾಜ ವ್ಯವಸ್ಥೆಯಲ್ಲಿ ಎಲ್ಲ ರೀತಿಯ ವಿಭಜನಕಾರಿ ಮತ್ತು ವಿಚ್ಛಿದ್ರಕಾರಿ ಅಭಿವ್ಯಕ್ತಿಗಳು ಹುಲುಸಾಗಿ ಬೆಳೆಯಲು

ಪುಟ 10 ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

"ಭಿನ್ನ ಭೇದವ ಮಾಡಬೇಡಿರೋ"–ಮಡೆಸ್ನಾನ ಮತ್ತು ಪಂಕ್ತಿಭೇದದ ವಿರುದ್ಧ ಜನಾಂದೋಲನ

ಉಡುಪಿಯಲ್ಲಿ ಪೋಲೀಸ್ ಅತಿರೇಕ: ಪ್ರತಿಭಟನಾಕಾರರ ಮೇಲೆ ಲಾಠಿಪ್ರಹಾರ

ಮಾನವ ಘನತೆಗೆ ವಿರುದ್ಧವಾದ, ದೇಶದ ಸಂವಿಧಾನದ ಆಶಯಗಳಿಗೆ ಚ್ಯುತಿತರುವ ಮಡೆಸ್ನಾನ ಮತ್ತು ಪಂಕ್ತಿಬೇದ ಆಚರಣೆಯ ವಿರುದ್ಧ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಹಮ್ಮಿಕೊಂಡಿದ್ದ ಜನಜಾಗೃತಿ ಆಂದೋಲನದ ಅಂದಿನ ಕೊನೆಯ ಕಾರ್ಯಕ್ರಮದ ಅಂಗವಾಗಿ ಉಡುಪಿಯ ಕೃಷ್ಣ ಮಠದ ಎದುರು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಸಾಮೂಹಿಕ ಮತ ಪ್ರದರ್ಶನವನ್ನು ಘೋಷಿಸುತ್ತಿದ್ದಂತೆ, ಅಲ್ಲಿಯವರೆಗೆ ಪ್ರೇಕ್ಷಕರಂತೆ ಕಾಣುತ್ತಿದ್ದ ಖಾಕಿ ಪಡೆ ಅಮಾಯಕ ಪ್ರತಿಭಟನಾಕಾರರ ಮೇಲೆ ಗುಂಡಾಗಳಂತೆ ಎರಗಿದರು. ನೂರಾರು ಕಾರ್ಯಕರ್ತರು ಗಾಯಗೊಂಡರು. ಕೆಲವರ ತಲೆಗಳ ಮೇಲೆ ಗಂಭೀರವಾದ ಗಾಯಗಳಾಗಿ ರಕ್ತ ಹರಿಯಿತು. ಇನ್ನು ಕೆಲವರ ಕೈ ಕಾಲುಗಳಿಗೆ ಗಾಯಗಳಾದವು. ಹೆಚ್ಚಿನ ಕಾರ್ಯಕರ್ತರ ಮೈ ಮೇಲೆ ಬಾಸುಂಡೆ ಏಳುವಷ್ಟು ಲಾಠಿ ಏಟುಗಳು ಬಿದ್ದವು. ಪುರುಷರು, ಮಹಿಳೆಯರು ಎಂಬ ಬೇದವಿಲ್ಲದೆ ಹಿಗ್ಗಾಮುಗ್ಗಾ ಥಳಿಸಿದರು. ಆದಾಗ್ಯೂ ಪಕ್ಷದ ಕಾರ್ಯಕರ್ತರು ಚದುರಲಿಲ್ಲ ಪೆಟ್ಟು ತಿನ್ನುತ್ತಿದ್ದಂತೆ ಅವರ ಆಕ್ರೋಶ ಹೆಚ್ಚಾಯಿತು. ಪೊಲೀಸ್ ದೌರ್ಜನ್ಯದ ವಿರುದ್ಧದ ಘೋಷಣೆಗಳು ಮುಗಿಲು ಮುಟ್ಟಿದವು.

ಪೊಲೀಸರ ಅತಿರೇಕ ತೀರಾ ಅನಗತ್ಯವಾಗಿತ್ತು. ಅಂತಹ ಯಾವುದೇ ಪ್ರಚೋದನೆ ಇರಲಿಲ್ಲ. ಕನಕದಾಸ ರಸ್ತೆಗೆ ಅಡ್ಡವಾಗಿ ಹಾಕಲಾಗಿದ್ದ ತಡೆಗಳನ್ನು ಕೆಡವಿ ಹಾಕಲು ಪ್ರತಿಭಟನಾಕಾರರು ಪ್ರಯತ್ನ ಪಟ್ಟಿದ್ದರೆ ಅದಕ್ಕೆ ಪೊಲೀಸರ ವಿಫಲತೆಯೇ ಕಾರಣವಾಗಿದೆ. ಪ್ರತಿಭಟನಾಕಾರರನ್ನು ಶಾಂತಿಯುತವಾಗಿ ಮಠದ ಹತ್ತಿರಕ್ಕೆ ಹೋಗಲು ಪೊಲೀಸರೇ ಏರ್ಪಾಡು ಮಾಡಬಹುದಾಗಿತ್ತು. ಮಠಾಧೀಶರೊಂದಿಗೆ ಸಹಭೋಜನವನ್ನು ಏರ್ಪಡಿಸಿದ್ದರೆ ಶತಮಾನಗಳಿಂದ ಮಠಕ್ಕೆ ಅಂಟಿಕೊಂಡಿರುವ ಕಳಂಕ ತೊಳೆದು ಹೋಗುತಿತ್ತು. ಕನಿಷ್ಠ ಪ್ರತಿಭಟನಾಕಾರರ ಮುಖಂಡರನ್ನಾದರೂ ಮಠಕ್ಕೆ ಕರೆದೊಯ್ದು ಪೇಜಾವರ ಮಠಾಧೀಶರೊಂದಿಗೆ ಮಾತನಾಡಲಾದರೂ ಪೊಲೀಸರು ವ್ಯವಸ್ಥೆ ಮಾಡಬಹುದಾಗಿತ್ತು. ಅಥವ ಮಠಾಧೀಶರಲ್ಲಿ ಒಬ್ಬರನ್ನು ಪ್ರತಿಭಟನಾ ಸ್ಥಳಕ್ಕೆ ಕರೆದುಕೊಂಡು ಬಂದು ಮಾತುಕತೆಯೊಂದನ್ನು ಏರ್ಪಡಿಸಬಹುದಾಗಿತ್ತು. ಅದ್ಯಾವುದನ್ನೂ ಮಾಡದೆ ಪೊಲೀಸರು ಮುಖಂಡರನ್ನು ಬಂಧಿಸಲು ಮುಂದಾದಾಗ ಪ್ರಕ್ಷುಬ್ಧ ಪರಿಸ್ಥಿತಿ ಉಂಟಾಯಿತು. ಲಾಠಿ ಪ್ರಹಾರಕ್ಕೆ ಆದೇಶಮಾಡಿದ ತಾಲೂಕ ದಂಡಾಧಿಕಾರಿ ಜಗನ್ನಾಥ್ ರಾವ್ ಅವರಿಗೂ ಇದ್ಯಾವುದೂ ಹೊಳೆದಿರಲಿಲ್ಲ.

ಪೊಲೀಸರ ದೌರ್ಜನದ ವಿರುದ್ಧ ಪ್ರತಿಭಟಿಸುತ್ತಲೇ ಕಾರ್ಯಕರ್ತರು ತಂಡ ತಂಡವಾಗಿ ಬಂಧನಕ್ಕೆ ಒಳಗಾಗಿದ್ದಾರೆ. ವಾಹನಗಳಲ್ಲಿ ಅವರನ್ನು ತುಂಬುವಾಗಲೂ, ಪೊಲೀಸರು ಲಾಠಿಗಳಿಂದ ಅವರನ್ನು ಹೊಡೆಯುತ್ತಲೇ ಇದ್ದರು. ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿ ಸೇರಿದಂತೆ 176 ಕಾರ್ಯಕರ್ತರ ವಿರುದ್ಧ ಪೊಲೀಸರು ಸುಳ್ಳು ಪ್ರಕರಣ ದಾಖಲಿಸಿದ್ದಾರೆ.





ಮಡೆಸ್ನಾನ ವಿರುದ್ಧ ಜನ ಜಾಗೃತಿ ಜಾಥಾ

ಕುಕ್ಕೆ ಸುಬ್ರಹ್ಮಣ್ಯದಲ್ಲಿ ವಾರ್ಷಿಕ ಷಷ್ಠೀ ಜಾತ್ರೆಯಂದು ಬ್ರಾಹ್ಮಣರು ಉಂಡು ಬಿಟ್ಟ ಎಂಜಲೆಲೆಗಳ ಮೇಲೆ ಉರುಳಾಡುವ ಹರಕೆ ಸೇವೆಯು ಅನಿಷ್ಟವಾದುದು ಹಾಗೂ ಜಾತಿ ತಾರತಮ್ಯವನ್ನು ಪ್ರತಿಪಾದಿಸುವ ಆಚರಣೆಯಾಗಿದೆ. ಅಲ್ಲಿ ಬ್ರಾಹ್ಮಣೇತರರಿಗೆ ಪ್ರತ್ಯೇಕವಾದ ಪ್ರಸಾದ ಭೋಜನ ವ್ಯವಸ್ಥೆಯಿದ್ದರೂ, ಅವರುಂಡ ಎಂಜಲೆಲೆಗಳ ಮೇಲೆ ಉರುಳು ಸೇವೆಯನ್ನು ಯಾರೂ ನಡೆಸುವುದಿಲ್ಲ. ಬ್ರಾಹ್ಮಣರು ಹುಟ್ಟಿನಿಂದಲೇ ಪವಿತ್ರರೆಂದೂ ಅವರ ಎಂಜಲೂ ಪವಿತ್ರವೆಂದು ಎಂಬ ನಂಬಿಕೆಯನ್ನು ಈ ಮಡೆಸ್ನಾನ ಹೆಸರಿನ ಹರಕೆಯು ಎತ್ತಿ ಸಾರುತ್ತಿದ್ದು, ಅದನ್ನು ಅಲ್ಲಿನ ದೇವಸ್ಥಾನದ ಆಡಳಿತ ಮಂಡಳಿ ಹಾಗೂ ಕರಾವಳಿ ಜಿಲ್ಲೆಗಳ ಪುರೋಹಿತಶಾಹಿಯು ಪೋಷಿಸಿಕೊಂಡು ಬಂದಿದೆ.

ಕುಕ್ಕೆ ಸುಬ್ರಹ್ಮಣ್ಯವೂ ಸೇರಿದಂತೆ ನಾಲ್ಕಾರು ಸುಬ್ರಹ್ಮಣ್ಯ ದೇವಾಲಯಗಳಲ್ಲಿ ಮಡೆಸ್ನಾನದಂತಹ ಆಚರಣೆಗಳು ನಡೆದುಕೊಂಡು ಬಂದಿವೆ. ಇದಕ್ಕೆ ಆ ದೇವಾಲಯಗಳಲ್ಲಿ ಬ್ರಾಹ್ಮಣರಿಗೊಂದು, ಬ್ರಾಹ್ಮಣೇತರರಿಗೊಂದು ಎಂಬಂತೆ ಇರುವ ಪ್ರಸಾದ ಭೋಜನವೇ ಕಾರಣವಾಗಿದೆ. ಪಂಕ್ತಿಭೇದದ ಕಾರಣವಾಗಿ ಮಡೆಸ್ನಾನ ನಡೆಯುತ್ತಿದೆ. ಪಂಕ್ತಿಭೇದ ಇಲ್ಲವಾದರೆ ಮಡೆಸ್ನಾನವೇ ನಡೆಯಲಾರದು.

ದೇವಾಲಯಗಳಲ್ಲಿ ಸಹಭೋಜನದ ಬದಲು ಪಂಕ್ತಿಭೇದವನ್ನು ಆಚರಿಸುತ್ತಿರುವ ನೂರಾರು ಉದಾಹರಣೆಗಳು ಕರ್ನಾಟಕದಲ್ಲಿವೆ. ಅವುಗಳಲ್ಲಿ ಮುಕ್ಕಾಲುಪಾಲು ಕರಾವಳಿ ಜಿಲ್ಲೆಗಳಲ್ಲೇ ಇವೆ. ಅತೀ ಹೆಚ್ಚು ವಿದ್ಯಾವಂತರಿರುವ ಕರಾವಳಿ ಜಿಲ್ಲೆಗಳಲ್ಲಿ ಇದು ಮುಂದುವರಿಯುತ್ತಿರುವುದು 'ವಿದ್ಯೆ' ಎಂಬ ಶಬ್ದಕ್ಕೇನೇ ಎಸಗುವ ಅವಮಾನವಾಗಿದೆ.

ಕೋಮುವಾದಿಗಳ ಪ್ರಯೋಗಶಾಲೆಗಳಾಗಿ ರೂಪುಗೊಳ್ಳುತ್ತಿರುವ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಪ್ರಮುಖ ದೇವಾಲಯಗಳು ಜಾತಿ ತಾರತಮ್ಯ, ಅಸ್ಪೃಶ್ಯತೆ ಹಾಗೂ ಅಂಧಶ್ರದ್ಧೆಯನ್ನು ಗಟ್ಟಿಗೊಳಿಸುವ ಕೇಂದ್ರಗಳಾಗಿವೆ. 'ಹಿಂದುಗಳೆಲ್ಲ ಒಂದು' ಎಂದು ಹೇಳುವ ಸಂಘ ಪರಿವಾರದ ಮಾರ್ಗದರ್ಶಕರೂ, ವಿಶ್ವ ಹಿಂದೂ ಪರಿಷತ್ತಿನ ಅಖಿಲ ಭಾರತ ಉಪಾಧ್ಯಕ್ಷರೂ ಆದ ಉಡುಪಿ ಪೇಜಾವರ ಸ್ವಾಮಿಗಳೂ ಕೂಡಾ, ಉಡುಪಿ ಕೃಷ್ಣ ದೇವಾಲಯದಲ್ಲಿ ಪಂಕ್ತಿಭೇದವನ್ನು ನಿಲ್ಲಿಸಲು ಸಮರ್ಥರಾಗಿಲ್ಲ. ಅವರ ಸೂಚನೆಯ ಮೇರೆಗೆ ಕರ್ನಾಟಕ ರಾಜ್ಯ ಸರಕಾರವು ಮಡೆಸ್ನಾನದ ಬದಲು ನೈವೇದ್ಯ ಪ್ರಸಾದದ ಮೇಲೆ ಉರುಳು ಸೇವೆ ಮಾಡುವ ಎಡೆಸ್ನಾನದ ಪ್ರಸ್ತಾಪವನ್ನು ಹೈಕೋರ್ಟಿಗೆ ಸಲ್ಲಿಸಿರುತ್ತದೆ. ಈ ಎಡೆಸ್ನಾನವೂ ಇನ್ನೊಂದು ಬಗೆಯ ಅಂಧಶ್ರದ್ಧೆಯೇ ಆಗಿದೆ.

ಜನರ ನಂಬಿಕೆಗಳ ಹೆಸರಿನಲ್ಲಿ ಕುಕ್ಕೆ ಸುಬ್ರಹ್ಮಣ್ಯದಲ್ಲಿ ನಡೆಸಲಾಗುತ್ತಿರುವ ಮಡೆಸ್ನಾನವಾಗಲಿ ಉಡುಪಿ ಕೃಷ್ಣ ಮಠದಲ್ಲಿ ಚಾಲನೆಯಲ್ಲಿರುವ ಪಂಕ್ತಿಭೇದ ಪದ್ಧತಿಯಾಗಲಿ ನಮ್ಮ ದೇಶದ ಸಂವಿಧಾನದ ಮೂಲ ಆಶಯಗಳಿಗೆ ತದ್ವಿರುದ್ಧವಾಗಿದೆ. ರಾಜ್ಯ ಸರ್ಕಾರದ ಮೇಲೆ ಪುರೋಹಿತಶಾಹಿ ಮತ್ತು ಅದರ ಪೋಷಕ ಸಂಘ ಪರಿವಾರದ ಹಿಡಿತ ಬಿಗಿಯಾಗಿರುವುದರಿಂದ ಇಂತಹ ಪದ್ಧತಿಗಳನ್ನು ಕಾನೂನಿನ ಮೂಲಕ ನಿಷೇಧಿಸಲು ಸರ್ಕಾರ ಹಿಂದೇಟು ಹಾಕುತ್ತಿದೆ. ಬಾಲ್ಯ ವಿವಾಹ, ಸತಿ ಸಹಗಮನ, ದೇವದಾಸಿ, ಬೆತ್ತಲೆ ಸೇವೆಯಂತಹ ಪದ್ಧತಿ ಹಾಗೂ ಆಚರಣೆಗಳಿಗೂ ಜನರ ನಂಬಿಕೆಗಳೇ ಆಧಾರವಾಗಿದ್ದರೂ, ಅವೈಜ್ಞಾನಿಕವಾದ ಈ ಪದ್ಧತಿಗಳನ್ನು ಕಾನೂನಿನ ಮೂಲಕ ನಿಲ್ಲಿಸಲು ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ಅವೈಜ್ಞಾನಿಕವಾದ ಹಾಗೂ ಜಾತಿಭೇದವನ್ನು ಪ್ರತಿಪಾದಿಸುವ ಮಡೆಸ್ನಾನ ಹಾಗೂ ಪಂಕ್ತಿಭೇದವನ್ನು ತಡೆಹಿಡಿಯಲು ಜನಾಂದೋಲನ ಸಾಗಿ ಬರಬೇಕಾಗಿದೆ.

ಪ್ರತಿ ವರ್ಷದಂತೆ ಈ ವರ್ಷವೂ ಷಷ್ಠಿ ಜಾತ್ರೆ ಬಂದು ಹೋಯಿತು. ಹೈಕೋರ್ಟು ಪಂಕ್ತಿಭೇದ ಮಾಡಕೂಡದೆಂದು ಆದೇಶ ಕೊಟ್ಟಿತ್ತು; ಮಡೆಸ್ನಾನದ ಬದಲು ಸರಕಾರ ಸೂಚಿಸಿದ ಎಡೆಸ್ನಾನಕ್ಕೆ ಒಪ್ಪಿಗೆ ನೀಡಿತ್ತು. ಆದರೆ ಕುಕ್ಕೆ ಆಡಳಿತ ಮಂಡಳಿ ಸ್ಥಳೀಯನೊಬ್ಬನ ಹೆಸರಿನಲ್ಲಿ ಕೊನೆಗಳಿಗೆಯಲ್ಲಿ ಸಲ್ಲಿಸಿದ ಮೇಲ್ಮನವಿಗೆ ಸ್ಪಂದಿಸಿ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿತು. ಇದನ್ನು ಮಡೆಸ್ನಾನಕ್ಕೆ ನ್ಯಾಯಾಂಗದ ಒಪ್ಪಿಗೆಯೆಂದು ವ್ಯಾಖ್ಯಾನಿಸಿ, ದೇವಾಲಯದ

ಆಡಳಿತ ಮಂಡಳಿ ಮಡೆಸ್ನಾನವನ್ನು ಮಾಡಿಸಿಯೇ ಬಿಟ್ಟಿತು.

ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿಯು ಈ ಹಮ್ಮಿಕೊಂಡಿರುವ ಜನಜಾಗೃತಿ ವಾಹನ ಜಾಥಾ, ಪಾದಯಾತ್ರೆ ಹಾಗೂ ಉಡುಪಿಯ ಪ್ರತಿಭಟನಾ ಸಭೆಗಳಿಗೆ ವಿಶೇಷ ಮಹತ್ವವಿದೆ.

ವಾಹನಜಾಥಾ ಮತ್ತು ಪಾದಯಾತ್ರೆಯ ಉದ್ಘಾಟನೆ

ಜನಜಾಗೃತಿ ವಾಹನಜಾಥಾ ಡಿಸೆಂಬರ್ 21 ರಂದು ಕುಕ್ಕೆ ಸುಬ್ರಹ್ಮಣ್ಯದಲ್ಲಿ ಉದ್ಘಾಟನೆಗೊಂಡಿತು. ಅಲ್ಲಿನ ಷಷ್ಠಿ ಜಾತ್ರೆ ಕಳೆದು 2 ದಿನಗಳು ಮಾತ್ರ ಆಗಿದ್ದವು. ಕುಕ್ಕೆ ಸುಬ್ರಹ್ಮಣ್ಯವು ಆದಿಯಲ್ಲಿ ಅಲ್ಲಿನ ಮಲೆಕುಡಿಯರು ಆರಾಧಿಸುತ್ತಿದ್ದ ನಾಗದೇವರಾಗಿದ್ದು, ಕೆಲವು ಶತಮಾನಗಳಿಂದ ವೈದಿಕರಿಂದ ಪೂಜಿಸಲ್ಪಡುತ್ತಿದೆ. ಕುಕ್ಕೆ ಸುಬ್ರಹ್ಮಣ್ಯ ಪ್ರದೇಶದ ಮಲೆಕುಡಿಯರು ಪ್ರಕೃತ ಅಲ್ಲಿ ಉಳಿಗದವರಾಗಿದ್ದು, ದೇವಾಲಯವು ಆರ್ಥಿಕವಾಗಿ ತೀವ್ರ ಬೆಳವಣಿಗೆಗೊಂಡ ಹಿನ್ನೆಲೆಯಲ್ಲಿ ಅಲ್ಲಿಯೇ ವಿವಿಧ ದುಡಿಮೆಗಳಲ್ಲಿ ಪಾಲ್ಗೊಳ್ಳುವವರಾಗಿದ್ದಾರೆ. ಅವರನ್ನು ವಿಧೇಯರಾಗಿಸಿದ ಆಡಳಿತ ಮಂಡಳಿ, ಅಲ್ಲಿನ ಮೌಢ್ಯಗಳನ್ನು ವಿರೋಧಿಸಿದವರ ಮೇಲೆ ಹಲ್ಲೆ ಧಾಳಿಗಳನ್ನು ಹಾಗೂ ಸಮರ್ಥನೆಗಳನ್ನು ಮಲೆಕುಡಿಯರಿಂದಲೇ ಮಾಡಿಸುತ್ತಿದೆ.

ವಾಹನ ಜಾಥಾವನ್ನು ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಉದ್ಘಾಟಿಸಿ ಮಾತನಾಡಿದರು. ಮಡೆಮಡೆಸ್ನಾನ, ಪಂಕ್ತಿಭೇದ, ಅನಾಗರಿಕ ಜನವಿರೋಧಿ ಪದ್ಧತಿ, ಅಂತಹ ಸಾಮಾಜಿಕ ಅಪರಾಧಗಳ ವಿರುದ್ಧ ತೀವ್ರ ಚಳುವಳಿ ನಡೆಸಲಾಗುವುದು ಎಂದು ಅವರು ಎಚ್ಚರಿಸಿದರು. ಮೂಢನಂಬಿಕೆ ಮತ್ತು ಧರ್ಮದ ನೆಲೆಯಲ್ಲಿ ಮುಗ್ಧ ಜನರನ್ನು ದಾರಿತಪ್ಪಿಸುವುದು ನಮ್ಮ ಸಂಸ್ಕಾರ, ಸಂಸ್ಕೃತಿ ಅಲ್ಲ. ಸಾಮಾಜಿಕ ಅಸಮಾನತೆ ಸ್ವಾತಂತ್ರ್ಯಪೂರ್ವದಿಂದಲೂ ನಡೆಯುತ್ತಾ ಬಂದಿದೆ. ಅನಿಷ್ಟ ಪದ್ಧತಿಗಳ ಮೂಲಕ ಸಮಾಜವನ್ನು ಜಾತಿ ಆಧಾರದಲ್ಲಿ ಒಡೆದು ಆಳುವ ನೀತಿಯನ್ನು ಪ್ರಬಲವಾಗಿ ವಿರೋಧಿಸುತ್ತೇವೆ ಎಂದು ಅವರು ಹೇಳಿದರು.

ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯ ಘಟಕದ ಅಧ್ಯಕ್ಷ ಕೆ.ಎಸ್.ಶಿವರಾಮ್ ಮತ್ತಿತರ ನಾಯಕರು ಈ ಜಾಥಾವನ್ನು ಬೆಂಬಲಿಸಿ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಕಳೆದ ವರ್ಷ ಷಷ್ಠಿ ಜಾತ್ರೆಯ ವೇಳೆಗೆ ಕುಕ್ಕೆ ಸುಬ್ರಹ್ಮಣ್ಯದಲ್ಲೇ ಪ್ರತಿಭಟನಾ ಘೋಷಣೆಗಳನ್ನು ಕೂಗಿದ್ದ ಇವರುಗಳಿಗೆ ಪೋಲೀಸರ ಸಮ್ಮುಖದಲ್ಲಿಯೇ ಸ್ಥಳೀಯ ಪಟ್ಟಭದ್ರರು ಹಲ್ಲೆ ನಡೆಸಿದ್ದರು.

ಬೆಳ್ತಂಗಡಿಯಿಂದ ನೂರಕ್ಕೂ ಹೆಚ್ಚು ಸಿಪಿಐ(ಎಂ) ಪಕ್ಷದ ಹಿತೈಷಿಗಳು ಭಾಗವಹಿಸಿದ್ದು, ಅವರಲ್ಲಿ ಅರ್ಧಕ್ಕೂ ಹೆಚ್ಚು ಭಾಗ ಮಲೆಕುಡಿಯರಾಗಿದ್ದರು. ಮಲೆಕುಡಿಯರನ್ನು ತಾವು ಗುತ್ತಿಗೆಗೆ ಪಡೆದುಕೊಂಡಿದ್ದೇವೆ ಎಂದು ಭಾವಿಸುವ ದೇವಸ್ಥಾನದ ಆಡಳಿತ ಮಂಡಳಿಗೆ ಇದೊಂದು ಸವಾಲು. ಆಡಳಿತ ಮಂಡಳಿಯ ಕಪಿ ಮುಷ್ಠಿಯಲ್ಲಿ ಸಿಕ್ಕಿಹಾಕಿಕೊಂಡಿರುವ ಸ್ಥಳೀಯ ಮಲೆಕುಡಿಯರು ಅಲ್ಲಿನ ಪಾಳೇಕಟ್ಟನ್ನು ವಿರೋಧಿಸಿ ಶೀಘ್ರವೇ ಹೊರ ಬರಬಹುದು.

ಸಿಪಿಐ(ಎಂ) ದ.ಕ.ಜಿಲ್ಲಾ ಕಾರ್ಯದರ್ಶಿ ಬಿ.ಮಾಧವ ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪಕ್ಷದ ಹಿರಿಯ ನಾಯಕರಾದ ಕೆ.ಆರ್.ಶ್ರೀಯಾನ್, ದಲಿತ ಹಕ್ಕುಗಳ ಹೋರಾಟ ಸಮಿತಿಯ ಗೋಪಾಲಕೃಷ್ಣ ಅರಳಹಳ್ಳಿ, ಜಿಲ್ಲೆಯ ಸಿಪಿಐ(ಎಂ) ಪಕ್ಷದ ನಾಯಕರು, ಭಾಗವಹಿಸಿದ್ದರು. ಜಾಥಾ ನಾಯಕ ಬಿ.ಎಂ.ಭಟ್ ಅವರಿಗೆ ಜಿ.ವಿ.ಶ್ರೀರಾಮ ರೆಡ್ಡಿ ಧ್ವಜವನ್ನು ಹಸ್ತಾಂತರಿಸಿ ಜಾಥಕ್ಕೆ ಚಾಲನೆ ನೀಡಿದರು.

ಸುಬ್ರಹ್ಮಣ್ಯದಿಂದ ನೆಟ್ಟಣ, ಕಡಬ, ಉಪ್ಪಿನಂಗಡಿ, ಉಜಿರೆ, ಬೆಳ್ತಂಗಡಿ ಮೊದಲ ದಿನ ಜಾಥಾ ಸಾಗಿದರೆ ಎರಡನೆ ದಿನ ಬೆಳ್ತಂಗಡಿ, ಗುರುವಾಯನಕೆರೆ, ವೇಣೂರು, ಮೂಡಬಿದ್ರೆ, ಬಿ.ಸಿ.ರೋಡ್ ಮತ್ತು ಫರಂಗಿ ಪೇಟೆಗಳಲ್ಲಿ ಜಾಥಾ ಸಾಗಿ ಮಂಗಳೂರಿಗೆ ತಲುಪಿತ್ತು.

ಭೇದ ಮಾಡುವ ಮಠಗಳಿಗೆ ಬೀಗ ಹಾಕಲು ನಿಡುಮಾಮಿಡಿ ಸ್ವಾಮಿ ಕರೆ



ಮಡೆಮಡೆಸ್ನಾನ, ಪಂಕ್ತಿಭೇದ ಮುಂತಾದ ಅಸಹ್ಯ ಪದ್ಧತಿಗಳನ್ನು ಜಾರಿಗೊಳಿಸಿ ಭೇದಭಾವ ಮಾಡುತ್ತಿರುವ ಮಠಗಳನ್ನು ಗುರುತಿಸಿ ಅವಕ್ಕೆ ಬೀಗ ಹಾಕುವ ಕೆಲಸ ಮಾಡುವ ಅಗತ್ಯವಿದೆ ಎಂದು ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿ ಕರೆ ನೀಡಿದರು.

ಸಿಪಿಐ(ಎಂ) ರಾಜ್ಯ ಸಮಿತಿ ವತಿಯಿಂದ ಮಡೆಸ್ನಾನ, ಪಂಕ್ತಿಭೇದ ವಿರೋಧಿಸಿ ಮಂಗಳೂರಿನಿಂದ ಉಡುಪಿವರೆಗೆ ಹಮ್ಮಿಕೊಳ್ಳಲಾದ ಪಾದಯಾತ್ರೆಯನ್ನು ಡಿಸೆಂಬರ್ 24 ರಂದು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಮಡೆಸ್ನಾನವನ್ನು ವಿರೋಧಿಸುವುದಾಗಿ ಹೇಳುವ ಪೇಜಾವರ ಶ್ರೀಗಳು ಬೆಂಗಳೂರಲ್ಲಿ ಈ ಹಿಂದೆ ನಡೆದ ಸಂವಾದ ಕಾರ್ಯಕ್ರಮದಲ್ಲಿ ಮಡೆಸ್ನಾನ ಬ್ರಾಹ್ಮಣರು ಹುಟ್ಟು ಹಾಕಿದ ಪದ್ಧತಿಯಲ್ಲ. ಅದು ದ್ರಾವಿಡ ಪದ್ಧತಿ. ಅದನ್ನು



ಬ್ರಾಹ್ಮಣರು ಮುಂದುವರೆಸಿಕೊಂಡು ಬಂದರು ಎಂದು ಹೇಳಿಕೆ ನೀಡಿದ್ದರು. ಆದರೆ ವಾಸ್ತವದಲ್ಲಿ ದ್ರಾವಿಡ ಸಂಸ್ಕೃತಿಯಲ್ಲಿ ಮನುಷ್ಯರನ್ನು ಈ ರೀತಿ ನಿಕೃಷ್ಟವಾಗಿ ಕಾಣುವ ಪದ್ಧತಿಯೇ ಇಲ್ಲ. ಮಠಗಳು, ಜಾತಿ ಸಂಸ್ಥೆಗಳು ಹುಟ್ಟು ಹಾಕಿರುವ ಆಚರಣೆ ಇದು. ಪೇಜಾವರ ಸ್ವಾಮಿಗಳು ಈವರೆಗೆ ಮಡೆಮಡೆಸ್ನಾನ ನಿಲ್ಲಿಸಲು ಯಾವುದೇ ರೀತಿಯ ಪ್ರಾಮಾಣಿಕ ಪ್ರಯತ್ನ ಮಾಡಿಲ್ಲ ಎಂದು ನಿಡುಮಾಮಿಡಿ ಸ್ವಾಮಿ ಆರೋಪಿಸಿದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ ಸಿಪಿಐ(ಎಂ) ಕೇಂದ್ರ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪಿ.ಶ್ರೀನಿವಾಸ ರಾವ್ ಮಾತನಾಡಿ, ಮಂಗಳೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಸಂಶೋಧನ ವರದಿಯೊಂದರ ಪ್ರಕಾರ ದ.ಕ.ಜಿಲ್ಲೆಯಲ್ಲಿ ಜಾತಿ ಆಚರಣೆ ಹೆಚ್ಚಿನ ಪ್ರಮಾಣದಲ್ಲಿದೆ. ಮಡೆಮಡೆಸ್ನಾನಕ್ಕೆ ಈ ಜಾತಿ ತಾರತಮ್ಯದ ಆಚರಣೆ ಹಾಗೂ ಭೇದಭಾವವೇ ಮೂಲ ಕಾರಣ ಎಂದು ಹೇಳಿದರು.

ಸಿಪಿಐ(ಎಂ) ಪಕ್ಷದ ರಾಜ್ಯ ಮುಖಂಡರಾದ ಕೆ.ಆರ್.ಶ್ರೀಯಾನ್, ಬಿ.ಮಾಧವ, ಮಾರುತಿ ಮಾನ್ಪಡೆ ಹಾಗೂ ಜಿಲ್ಲಾ ಸಮಿತಿ ಮುಖಂಡರು ಉಪಸ್ಥಿತರಿದ್ದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಬಿ.ಮಾಧವ ಅವರು ಪಾದಯಾತ್ರೆ ತಂಡದ ನಾಯಕರಾದ ವಸಂತ ಆಚಾರಿ ಅವರಿಗೆ ಪಕ್ಷದ ಧ್ವಜವನ್ನು ಹಸ್ತಾಂತರಿಸಿದರು. ಜಾಥಾ ತಂಡದ 60 ಮಂದಿಗೆ ಈ ಸಂದರ್ಭದಲ್ಲಿ ಕೆಂಪು ಶಾಲು ಹೊದಿಸಲಾಯಿತು. ನಿಡುಮಾಮಿಡಿ ಸ್ವಾಮಿಗಳೂ, ಪಿ.ಶ್ರೀನಿವಾಸರಾವ್ ಅವರೂ ಒಂದಷ್ಟು ದೂರದ ವರೆಗೆ ಪಾದಯಾತ್ರೆಯಲ್ಲಿ ಜೊತೆಯಾಗಿ ಸಾಗಿ ಬಂದರು.

ಉಡುಪಿಯಲ್ಲಿ ಪ್ರತಿಭಟನೆ – ಲಾಠೀ ಚಾರ್ಜ್

ಉಡುಪಿ ಜಿಲ್ಲೆಯ ಪಕ್ಷದ ಸಮಿತಿ ನೇತೃತ್ವದಲ್ಲಿ ಡಿಸೆಂಬರ್ 24 ರಂದು ಸಾಯಂಕಾಲ 4 ಗಂಟೆಗೆ ಬೈಕ್ ರ್‍ಯಾಲಿ–ಪ್ರಚಾರ ಜಾಥಾ ಬೈಂದೂರಿನಿಂದ ಕುಂದಾಪುರಕ್ಕೆ ತಲುಪಿತ್ತು. 30 ಜನ ಭಾಗವಹಿಸಿದ ಈ ರ್‍ಯಾಲಿಯನ್ನು ಸಿಪಿಐ(ಎಂ) ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್ ಉದ್ಘಾಟಿಸಿದರು. ಈ ಬೈಕ್ ಜಾಥಾ ಕುಂದಾಪುರ ತಲುಪಿದ ಮೇಲೆ ಸಾಯಂಕಾಲ 6 ಗಂಟೆಗೆ ಕುಂದಾಪುರದ ಶಾಸ್ತ್ರಿ ಸರ್ಕಲ್‌ನಲ್ಲಿ ಪಾದಯಾತ್ರೆಯ ಉದ್ಘಾಟನೆ ನಡೆಯಿತು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಮಾರುತಿ ಮಾನ್ಪಡೆ ಈ ಜಾಥಾವನ್ನು ಉದ್ಘಾಟಿಸಿ ಮಾತನಾಡಿದರು.

ಕುಂದಾಪುರ ಪಾದಯಾತ್ರೆಯು ಕುಂದಾಪುರ, ಕೋಟೇಶ್ವರ, ತೆಕ್ಕಟ್ಟೆ, ಕೋಟ, ಸಾಲಿಗ್ರಾಮ, ಸಾಸ್ತಾನ, ಬ್ರಹ್ಮಾವರ, ಸಂತೆಕಟ್ಟೆಗಳಲ್ಲಿ ಡಿಸೆಂಬರ್ 25 ಮತ್ತು 26 ರಂದು ಸಾಗಿ ಬಂತು. ಪಕ್ಷದ ಉಡುಪಿ ಜಿಲ್ಲಾ ಸಮಿತಿ ಸದಸ್ಯ ಮಹಾಬಲ ವಡೇರಹೋಬಳಿ ಈ ಜಾಥಾದ ನೇತೃತ್ವ ವಹಿಸಿದ್ದರು. ಈ ಜಾಥಾ ತಂಡದಲ್ಲಿ 60 ಜನ ಕಾರ್ಯಕರ್ತರು ಭಾಗವಹಿಸಿದ್ದರು.

ಉಡುಪಿ ಅಜ್ಜರಕಾಡಿನಲ್ಲಿ ಒಂದುಗೂಡಿದ ಎರಡು ಜಾಥಾಗಳು:

ಮಂಗಳೂರಿನಿಂದ ಡಿಸೆಂಬರ್ 24 ರಂದು ಪೂರ್ವಾಹ್ನ ಹೊರಟ ಕಾಲ್ನಡಿಗೆ ಜಾಥಾ ಸುರತ್ಕಲ್, ಪಡುಬಿದ್ರಿ, ಮೂಲಕ ಸಾಗಿ ಕಟಪಾಡಿಯಲ್ಲಿ ರಾತ್ರಿ ತಂಗಿ ಡಿಸೆಂಬರ್ 27 ರಂದು ಉಡುಪಿ ಅಜ್ಜರಕಾಡು ಮೈದಾನದತ್ತ ತೆರಳಿತು. ಮಂಗಳೂರಿನಿಂದ ಉಡುಪಿ ವರೆಗಿನ ಊರುಗಳಲ್ಲಿ ಸಭೆಗಳನ್ನು ನಡೆಸಿ ಜಾಥಾದ ಉದ್ದೇಶಗಳನ್ನು ತಿಳಿಸಲಾಯಿತು. ಕುಂದಾಪುರದಿಂದ ಹೊರಟ ಜಾಥಾ ಕೂಡಾ ಉಡುಪಿವರೆಗಿನ ಮಧ್ಯದ ಊರುಗಳಲ್ಲಿ ಸಭೆಗಳನ್ನು ನಡೆಸಿ ಜಾಥಾದ ಉದ್ದೇಶಗಳನ್ನು ವಿವರಿಸಲಾಯಿತು.

ಡಿಸೆಂಬರ್ 27ರ ದಿನ ಬೆಳಗ್ಗೆ 10

ಪುಟ 10 ಕ್ಕೆ

ಉಡುಪಿಯಲ್ಲಿ ಪೊಲೀಸ್ ಅತಿರೇಕ....

ಪುಟ 9 ರಿಂದ

ಗಂಟೆಯ ವೇಳೆಗೆ ಎರಡೂ ದಿಕ್ಕಿನಿಂದ ಬಂದ ಕಾಲ್ನಡಿಗೆ ಜಾಥಾಗಳು ಉಡುಪಿ ಮುಖ್ಯ ರಸ್ತೆಯ ಜೋಡುಕಟ್ಟೆ ಎಂಬಲ್ಲಿ ಒಂದಾಗಿ, ಅಲ್ಲಿಂದ ಅಜ್ಜರಕಾಡು ಮೈದಾನ ತಲುಪಿದಾಗ, ಆಗಲೇ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಬಂದಿದ್ದ ಪಕ್ಷದ ಕಾರ್ಯಕರ್ತರು, ಬೆಂಬಲಿಗರು ಘೋಷಣೆಗಳೊಂದಿಗೆ ಸ್ವಾಗತ ಕೋರಿದರು. ಬಳಿಕ ಪ್ರತಿಭಟನಾ ರ್‍ಯಾಲಿಗೆ ಬರುವ ಜನರ ಸಂಖ್ಯೆ ಹೆಚ್ಚುತ್ತಲೇ ಹೋಗಿ ಮಧ್ಯಾಹ್ನ 12 ಗಂಟೆ ವೇಳೆಗೆ ಎರಡೂವರೆ ಸಾವಿರದಷ್ಟು ಜನರು ಉರಿ ಬಿಸಿಲಿನಲ್ಲಿಯೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಜಿ.ವಿ.ಶ್ರೀರಾಮ ರೆಡ್ಡಿಯವರಿಂದ ಉದ್ಘಾಟನೆ:

ಮಡೆಸ್ನಾನ, ಪಂಕ್ತಿಭೇದದಂತಹ ಸಾಮಾಜಿಕ ಅನಿಷ್ಟಗಳನ್ನು ರದ್ದು ಮಾಡದ ಸರಕಾರ ಸಂವಿಧಾನದ ಆಶಯಕ್ಕೆ ವಿರೋಧವಾಗಿ ನಡೆದು ಕೊಳ್ಳುತ್ತಿದ್ದರೆ, ಪಂಕ್ತಿಭೇದವನ್ನು ನಿಲ್ಲಿಸಲು ಸಾಧ್ಯವಿಲ್ಲ ಎನ್ನುತ್ತಿರುವ ಪೇಜಾವರ ಮಠದ ಸ್ವಾಮಿಗಳು ಇಬ್ಬಂದಿತನ ತೋರಿಸುತ್ತಿದ್ದಾರೆ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಹೇಳಿದರು. ಅವರು ಉಡುಪಿ ಅಜ್ಜರಕಾಡು ಮೈದಾನದಲ್ಲಿ ಪಕ್ಷದ ರಾಜ್ಯ ಸಮಿತಿ ವತಿಯಿಂದ ಏರ್ಪಡಿಸಿದ್ದ ಪ್ರತಿಭಟನಾ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

'ಹಿಂದೂಗಳೆಲ್ಲಾ ಒಂದು' ಎಂದು ಹೇಳುವ ವಿಶ್ವ ಹಿಂದೂ ಪರಿಷತ್ತಿನ ಉಪಾಧ್ಯಕ್ಷರಾಗಿರುವ ಪೇಜಾವರ ಮಠಾಧೀಶರು ಪೂಜಿಸುವ ಉಡುಪಿ ಕೃಷ್ಣ ಮಠದಲ್ಲಿ ಪಂಕ್ತಿಭೇದ ಮಾಡಲಾಗುತ್ತಿದೆ. ಒಂದೆಡೆ ದಲಿತ ಕೇರಿಗಳಿಗೆ ಭೇಟಿ ಮಾಡಿ ದಲಿತರೊಂದಿಗೆ ಉಣ್ಣುವ ಪೇಜಾವರ ಸ್ವಾಮೀಜಿ ಮಡೆಸ್ನಾನ ಹಾಗೂ ಪಂಕ್ತಿಭೇದವನ್ನು ಬೆಂಬಲಿಸುವ ಮೂಲಕ ಇಬ್ಬಂದಿತನ ತೋರುತ್ತಿದ್ದಾರೆ ಎಂದು ಅವರು ವಿಶ್ಲೇಷಿಸಿದರು. ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಟವನ್ನು ಮುಂದುವರಿಸ ಲಾಗುವುದು ಎಂದು ಶ್ರೀರಾಮರೆಡ್ಡಿ ಹೇಳಿದರು. ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಪಕ್ಷದ ರಾಜ್ಯ ಸಮಿತಿ ಮುಖಂಡರಾದ ಬಿ.ಮಾಧವ, ವಿ.ಜೆ.ಕೆ.ನಾಯರ್, ಜಿ.ಎನ್.ನಾಗರಾಜ್, ಮಾರುತಿ ಮಾನ್ಪಡೆ, ನಿತ್ಯಾನಂದ ಸ್ವಾಮಿ ಅಲ್ಲದೆ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಅಧ್ಯಕ್ಷ ಕೆ.ಎಸ್.ಶಿವರಾಮು ಕೂಡಾ ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಪಕ್ಷದ ಉಡುಪಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ.ಶಂಕರ್ ವಹಿಸಿದ್ದರು. ಬಾಲಕೃಷ್ಣ ಶೆಟ್ಟಿ ವಂದಿಸಿದರು.

ಮಠದ ಮುಂದುಗಡೆ ಪ್ರತಿಭಟನೆ ಉದ್ಘಾಟಿಸಿದ ಪಾಲಿಟ್ ಬ್ಯೂರೋ ಸದಸ್ಯ ಎಂ.ಎ.ಬೇಬಿ:

ಅಪರಾಹ್ನ ಅಜ್ಜರಕಾಡು ಮೈದಾನದಿಂದ ಘೋಷಣೆಗಳೊಂದಿಗೆ ಸಾಗಿ ಬಂದ ಮೆರವಣಿಗೆಯನ್ನು ಮಠದ ಸಮೀಪ ಇರುವ ಸಂಸ್ಕೃತ ಕಾಲೇಜು ಬಳಿಯ ರಸ್ತೆಯಲ್ಲಿ ಪೋಲೀಸರು ತಡೆ ಹಿಡಿದರು. ಪ್ರತಿಭಟನಾಕಾರರು ಅಲ್ಲೇ ಧರಣಿ ಕುಳಿತಾಗ, ಮೆರವಣಿಗೆ ಬೃಹತ್ ರ್‍ಯಾಲಿಯಾಗಿ ಪರಿವರ್ತನೆಯಾಯಿತು. ದೇವಾಲಯ ಮುಂದಿನ ಪ್ರತಿಭಟನೆಯನ್ನು ಸಿಪಿಐ(ಎಂ) ಪಾಲಿಟ್‌ಬ್ಯೂರೋ ಸದಸ್ಯರೂ, ಕೇರಳ ರಾಜ್ಯದ ಮಾಜಿ ಮಂತ್ರಿಗಳೂ ಆದ ಎಂ.ಎ.ಬೇಬಿ ಉದ್ಘಾಟಿಸಿದರು.

'ಕೃಷ್ಣ ನೀ ಬಾರೋ' ಕನ್ನಡದ ಗೀತೆಯಾದರೂ ಕರ್ನಾಟಕ ಸಂಗೀತಾಸಕ್ತರಲ್ಲೇ ಅತ್ಯಂತ ಜನಪ್ರಿಯವಾದ ಗೀತೆ. ಅಂಥ ಶ್ರೀ ಕೃಷ್ಣ ಎಲ್ಲ ತಾರತಮ್ಯಗಳ ವಿರೋಧಿ; ಆದುದರಿಂದ ಕೃಷ್ಣ ದೇವಾಲಯದಲ್ಲಿ ಜಾತಿ ಭೇದ ಪಂಕ್ತಿಭೇದ ಮಾಡುವುದು ಶ್ರೀ ಕೃಷ್ಣನಿಗೇ ಇಷ್ಟವಾಗದು. ಪಂಕ್ತಿ ಭೇದದ ವಿರುದ್ಧದ ಹೋರಾಟದಲ್ಲಿ ನಮ್ಮ ಜೊತೆಗೂಡಿದ ನಿಡುಮಾಮಿಡಿ ಸ್ವಾಮಿಗಳು ಜಾತಿಭೇದದ ವಿರುದ್ಧದ ಹೋರಾಟಕ್ಕೆ ನಮಗೆಲ್ಲಾ ಸ್ಫೂರ್ತಿಯಾಗಿದ್ದಾರೆ. ಕೇರಳದಲ್ಲಿ 100 ವರ್ಷಗಳ ಹಿಂದೆ ಎಲ್ಲಾ ಜಾತಿಯವರಿಗೂ ದೇವಾಲಯ ಪ್ರವೇಶಕ್ಕೆ ಅವಕಾಶ ಇಲ್ಲದ ಕಾಲದಲ್ಲಿ ಕೆಳವರ್ಗದ ಜನರಿಗೆ ದೇವಾಲಯ ಸಾಮೀಪ್ಯಕ್ಕಾಗಿ ನಾರಾಯಣ ಗುರುಗಳು ಹೋರಾಡಿದ್ದರು. ಎ.ಕೆ.ಗೋಪಾಲನ್ ಅವರ ಗುರುವಾಯೂರು ದೇವಾಲಯ ಪ್ರವೇಶ ಹೋರಾಟವು ಒಂದು ದಂತ ಕತೆಯೇ ಆಗಿದೆ. ನೂರ ವರ್ಷಗಳ ಆನಂತರ ಉಡುಪಿ ಹಾಗೂ ಇತರ ದೇವಾಲಯಗಳ ಜಾತಿಭೇದದ ವಿರುದ್ಧ ಇದೀಗ ಕರ್ನಾಟಕದಲ್ಲಿ ಚಳುವಳಿ ಆರಂಭವಾಗಿದೆ ಎಂದು ಅವರು ನುಡಿದರು.



ಪಂಕ್ತಿಭೇದ, ಮಡೆಸ್ನಾನಗಳು ಸಂವಿಧಾನ ವಿರೋಧಿ. ಎಂಜಲ ಮೇಲೆ ಹೊರಳಾಡುವುದರಿಂದ ಚರ್ಮ ರೋಗ ಗುಣವಾಗುವುದಾದರೆ, ಮೇಲು ಜಾತಿಗಳು ಅದನ್ನು ಏಕೆ ಮಾಡುತ್ತಿಲ್ಲ? ನಾವು ನಮ್ಮ ಚರ್ಮ ರೋಗ ಚಿಕಿತ್ಸಾಲಯಗಳನ್ನು ಮುಚ್ಚಿಬಿಡ ಬಹುದಲ್ಲವೆ? ಮಡೆಸ್ನಾನದ ವಿರುದ್ಧ ಪ್ರತಿಭಟಿಸಿ ಹಲ್ಲೆಗೀಡಾಗಿದ್ದರೂ ಎದೆಗುಂದದಿರುವ ಶಿವರಾಮು ಅವರು ಶ್ಲಾಘನೀಯರು ಎಂದು ಹೇಳಿದರು.

ಕರ್ನಾಟಕದಲ್ಲಿ ಎಂಟು ಶತಮಾನಗಳ ಹಿಂದೆಯೇ ಜಾತಿ ಪದ್ಧತಿಗೆ ವಿರುದ್ಧವಾಗಿ ಬಸವಣ್ಣನವರು ಹೋರಾಡಿದ್ದರು. ದುಡಿಮೆಯ ಗೌರವಕ್ಕಾಗಿ ಅದನ್ನು ಅವರು ಮಾಡಿದರು. ಶತಮಾನಗಳ ಆನಂತರದಲ್ಲಿ ನಾರಾಯಣ ಗುರು, ಡಾ॥ ಅಂಬೇಡ್ಕರ್, ಮಹಾತ್ಮ ಗಾಂಧೀಜಿಯವರು ಅದನ್ನೇ ಮುಂದುವರಿಸಿದರು. ಇತ್ತೀಚೆಗೆ ಕರ್ನಾಟಕದಲ್ಲಿ ಒಂದೆಡೆ ಬಸವಣ್ಣನ ಬೃಹತ್ ಶಿಲಾವಿಗ್ರಹ ನಿಲ್ಲಿಸಲಾಗುತ್ತಿದೆ. ಅದು ಮುಖ್ಯವಲ್ಲ; ಮನಸ್ಸಿನೊಳಗೆ ಬಸವಣ್ಣನ ವಿಚಾರಗಳನ್ನು ಕೆತ್ತಿ ನಿಲ್ಲಿಸಬೇಕು.

ನಮ್ಮ ಸಂವಿಧಾನದ ಮುಖ್ಯ ಅಂಶವಾದ ಸಮಾನತೆಯನ್ನು ನ್ಯಾಯಾಂಗವು ಕೂಡಾ ಸರಿಯಾಗಿ ಪರಿಗಣಿಸುತ್ತಿಲ್ಲ. ಕೋರ್ಟ್‌ಗಳು ಯಾವಾಗಲೂ ಪ್ರಗತಿಪರವಾಗಿರುವುದಿಲ್ಲ. ಆದರೆ ನ್ಯಾಯಾಲಯಗಳು ಸಂವಿಧಾನದ ಸತ್ವವನ್ನು ಗ್ರಹಿಸಿಕೊಂಡು ತೀರ್ಪು ನೀಡಬೇಕಾಗಿದೆ. ಸಂವಿಧಾನದ ತತ್ವಾದರ್ಶವನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಪ್ರಗತಿಪರರು ಹೋರಾಟದ ಮುಂಚೂಣಿಯಲ್ಲಿ ಬರುವಾಗ, ನ್ಯಾಯಾಂಗವೂ ಅದಕ್ಕೆ ತಕ್ಕುದಾಗಿ ಸ್ಪಂದಿಸಬೇಕೆಂದು ಎಂ.ವಿ.ಬೇಬಿ ಮನವಿ ಮಾಡಿದರು.

ಪೋಲಿಸರಿಂದ ಅನಗತ್ಯ ಲಾಠೀಪ್ರಹಾರ ; ಕಾರ್ಯಕರ್ತರ ಬಂಧನ:

ಪ್ರತಿಭಟನಾ ಸ್ಥಳದಲ್ಲಿ ಪೋಲೀಸರು ಬಲವಾದ ಬ್ಯಾರಿಕೇಡ್‌ಗಳನ್ನು ನಿರ್ಮಿಸಿದ್ದರು. ಎಂ.ಎ.ಬೇಬಿಯವರ ಭಾಷಣ ಮುಗಿಯುತ್ತಿದ್ದಂತೆಯೇ, ಜಿ.ವಿ.ಶ್ರೀರಾಮ ರೆಡ್ಡಿಯವರು, "ದೇವಾಲಯಕ್ಕೆ ಹೋಗುವುದಕ್ಕೆ ಯಾವ ಕಾನೂನಿನ ತಡೆಯೂ ಇಲ್ಲ. ನಾವು ದೇವಾಲಯ ವಿರೋಧಿಗಳಲ್ಲ, ಕೇವಲ ಪಂಕ್ತಿಭೇದದ ವಿರೋಧಿಗಳು. ತಡೆ ಬೇಲಿಗಳನ್ನು ತೆರವುಗೊಳಿಸಿ, ನಾವು ನ್ಯಾಯಬದ್ಧವಾಗಿಯೇ ದೇವಾಲಯಕ್ಕೆ ಪ್ರವೇಶಿಸಲು ಅವಕಾಶ ಮಾಡಿಕೊಡಬೇಕು" ಎಂದು ಎರಡೆರಡು ಬಾರಿ ಪೋಲೀಸ್ ಅಧಿಕಾರಿಗಳನ್ನು ವಿನಂತಿಸಿದರು. ಆದರೆ ಪೊಲೀಸರು ಸ್ಪಂದಿಸಲಿಲ್ಲ. ಹೀಗೆ ಘೋಷಿಸುತ್ತಿದ್ದಂತೆ ಪಕ್ಷದ ಕೆಲವು ಕಾರ್ಯಕರ್ತರು ತಡೆಬೇಲಿಗಳನ್ನು ಹತ್ತಿ ಹೋಗಲು ಪ್ರಯತ್ನಿಸಿದರು. ಅವರನ್ನು ಕೆಳಗೆಳೆಯಲು ಪ್ರಯತ್ನಿಸಿದ ಪೋಲೀಸರು ಇದ್ದಕ್ಕಿದ್ದಂತೆ ಲಾಠೀ ಪ್ರಹಾರ ಆರಂಭಿಸಿದರು. ಇದು ಪ್ರತಿಭಟನಾಕಾರರನ್ನು ಇನ್ನಷ್ಟು ಆಕ್ರೋಶಗೊಳಿಸಿತು. ಪ್ರತಿಭಟನೆ ತೀವ್ರವಾಯಿತು. ಪೊಲೀಸರ ಅತಿರೇಕಕ್ಕೆ ಹಲವು ಜನ ಕಾರ್ಯಕರ್ತರು ನೆಲಕ್ಕುರುಳಿದರು. ರಕ್ತ ಹರಿಯಿತು. ಪೊಲೀಸರು ಮುಖಂಡರನ್ನು ಮತ್ತು ಕಾರ್ಯಕರ್ತರನ್ನು ಬಂಧಿಸಿ ವಾಹನಗಳಲ್ಲಿ ತುಂಬಿ ಡಿ.ಎ.ಆರ್.ಮೈದಾ[illegible] ಪೊಲೀಸ್ ಠಾಣೆಗೆ ಒಯ್ದರು.

ಜಿ.ವಿ.ಶ್ರೀರಾಮರೆಡ್ಡಿ, ಬಿ.ಮಾಧವ[illegible] ಜಿ.ಎನ್.ನಾಗರಾಜ, ಮಾರುತಿ ಮಾನ್ಪಡ[illegible] ಕೆ.ಶಂಕರ್ ಮತ್ತಿತರರು ಬಂಧನಕ್ಕೊಳಗಾ[illegible] ಇವರನ್ನೊಳಗೊಂಡು 176 ಮಂದಿಯ ಮೇ[illegible] ಪೋಲೀಸರು ಪ್ರಕರಣಗಳನ್ನು ದಾಖಲು ಮಾ[illegible] ಮಧ್ಯರಾತ್ರಿ ನ್ಯಾಯಾಧೀಶರ ಮುಂದೆ ಹಾಜ[illegible] ಪಡಿಸಿದಾಗ ನ್ಯಾಯಾಧೀಶರು ಜಾಮೀನಿ[illegible] ಮೇಲೆ ಬಿಡುಗಡೆ ಮಾಡಿದರು.

ಲಾಠೀಪ್ರಹಾರದಿಂದ 9 ಮಂ[illegible] ಕಾರ್ಯಕರ್ತರು ತೀವ್ರವಾ[illegible] ಗಾಯಗೊಂಡಿದ್ದಾರೆ. ಹಾಗೂ ವಿವಿ[illegible] ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರ[illegible] ಬೆಂಗಳೂರಿನ ಪ್ರತಾಪ್,ಮೈಸೂರಿನ ಮಹೇಶ[illegible] ಅವರಿಗೆ ತೀವ್ರವಾದ ಗಾಯಗಳಾಗಿದ್ದು[illegible] ಕಾರ್ಯಕರ್ತರೇ ಅವರನ್ನು ಎತ್ತಿ ಆಸ್ಪತ್ರೆ[illegible] ಸಾಗಿಸಿದರು. ಮಂಗಳೂರಿನ ನಿತಿನ್ ಕುತ್ತಾರ[illegible] ಮಿಥುನ್‌ರಾಜ್ ಕುತ್ತಾರ್, ಹಂಝ[illegible] ಬೆಳ್ತಂಗಡಿಯ ಈಶ್ವರಿ, ಪ್ರಶಾಂತ್, ರೋ[illegible] ಮೈಸೂರಿನ ಸಂಜಯ್ ಮತ್ತಿತರರು ಆಸ್ಪತ್ರೆ[illegible] ದಾಖಲಾಗಿದ್ದಾರೆ. ಪೊಲೀಸರ ಎಳೆದಾಟದಿಂದ[illegible] ತೀವ್ರವಾಗಿ ಅಸ್ವಸ್ಥರಾದ ಎಸ್[illegible] ವರಲಕ್ಷ್ಮೀಯವರನ್ನೂ ಆಸ್ಪತ್ರೆ[illegible] ದಾಖಲು ಮಾಡಲಾಯಿತು.

ಪೊಲೀಸ್ ಅತಿರೇಕದ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆ:

ಪೊಲೀಸ್ ದೌರ್ಜನ್ಯವನ್[illegible] ಖಂಡಿಸಿ ಡಿಸೆಂಬರ್ 27ರಂದ[illegible] ಸಾಯಂಕಾಲ ಮಂಗಳೂರ[illegible] ಜಿಲ್ಲಾಧಿಕಾರಿ ಕಚೇರಿ ಎದುರ[illegible] ಡಿವೈಎಫ್ಐ ದ.ಕ.ಜಿಲ್ಲಾ[illegible] ಸಮಿತಿಯಿಂದ ಪ್ರತಿಭಟನ[illegible] ನಡೆಸಲಾಯಿತು. ಪ್ರತಿಭಟನೆಯಲ್ಲಿ[illegible] ಜಿಲ್ಲಾ ಸಮಿತಿ ಕಾರ್ಯದರ್ಶಿ[illegible] ದಯಾನಂದ ಶೆಟ್ಟಿ, ಮಂಗಳೂರು ನಗರ ಸಮಿತಿ[illegible] ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದ[illegible] ಸಂತೋಷ್ ಬಜಾಲ್, ಎಸ್‌ಎಫ್‌ಐನ ನಿತಿನ್[illegible] ಕುತ್ತಾರ್, ಜನವಾದಿ ಮಹಿಳಾ ಸಂಘಟನೆಯ[illegible] ಸುಕನ್ಯಾ ಮತ್ತಿತರರು ಭಾಗವಹಿಸಿದ್ದರು.

ಉಡುಪಿ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ[illegible] ಕಚೇರಿ ಎದುರು ನಡೆದ ಮತ್ತೊಂದು[illegible] ಪ್ರತಿಭಟನೆಯಲ್ಲಿ ಕರ್ನಾಟಕ ಕೋಮು ಸೌಹಾರ್ದ[illegible] ವೇದಿಕೆ, ಕರ್ನಾಟಕ ಕ್ರೈಸ್ತ ಸಂಘಟನೆಗಳ[illegible] ಅಂತರಾಷ್ಟ್ರೀಯ ಒಕ್ಕೂಟ, ಕರ್ನಾಟಕ ದಲಿತ[illegible] ಸಂಘರ್ಷ ಸಮಿತಿ, ವಿಚಾರವಾದಿ ವೇದಿಕೆ[illegible] ಜಾತಿಮುಕ್ತ ಸಂಬಂಧ ವೇದಿಕೆ ಇತ್ಯಾದಿ[illegible] ಸಂಘಟನೆಯವರು ಲಾಠೀ ಪ್ರಹಾರ ವಿರುದ್ಧ[illegible] ಪ್ರತಿಭಟನೆ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯಾದ್ಯಂತ ಸಿಪಿಐ(ಎಂ)ನ[illegible] ಕಾರ್ಯಕರ್ತರು ಹಾಗೂ ಹಿತೈಷಿಗಳು ಡಿಸೆಂಬರ್ 28 ರಂದು ಪ್ರತಿಭಟನೆ ನಡೆಸಲು ಪಕ್ಷದ ರಾಜ್ಯ[illegible] ಸಮಿತಿ ಕರೆ ಕೊಟ್ಟಿದ್ದು ವ್ಯಾಪಕ ಪ್ರತಿಭಟನೆಗ[illegible] ನಡೆಯುತ್ತಿರುವ ವರದಿಗಳು ಬರತೊಡಗಿ[illegible]

ಹೊಸಪೇಟೆ

ಪಡಿತರ ಅವ್ಯವಸ್ಥೆ ಸರಿಪಡಿಸಲು ಡಿವೈಎಫ್‌ಐ ಆಗ್ರಹ

ಬೃಹತ್ ಜನಸ್ತೋಮದೊಂದಿಗೆ ಪ್ರತಿಭಟನೆ

ಬಿಜೆಪಿ ಪಕ್ಷ ಕಳೆದ ವಿಧಾನ ಸಭಾ ಚುನಾವಣೆಯ ಸಮಯದಲ್ಲಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ತಾನು ಅಧಿಕಾರಕ್ಕೆ ಬಂದರೆ ಪ್ರತಿ ಕುಟುಂಬಕ್ಕೆ 35 ಕೆ.ಜಿ. ಅಕ್ಕಿಯನ್ನು ಕೆ.ಜಿ.ಗೆ [illegible] ರೂ. ದರದಲ್ಲಿ ಕೊಡುವುದಾಗಿ, ಎಲ್ಲಾ ಬಡ ಕುಟುಂಬಗಳಿಗೆ ಬಿಪಿಎಲ್ ಕಾರ್ಡ್ ಕೊಡುವುದಾಗಿ, ಪಡಿತರ ವ್ಯವಸ್ಥೆಯನ್ನು ಬಲಪಡಿಸುವುದಾಗಿ ಭರವಸೆ ನೀಡಿತ್ತು. ಆದರೆ ಅಧಿಕಾರ ಗದ್ದುಗೆಯನ್ನು ಅಲಂಕರಿಸಿದ ಬಿಜೆಪಿ ಪಕ್ಷದ ಸರ್ಕಾರ ಕೊಟ್ಟ ಆಶ್ವಾಸನೆಗಳನ್ನು ಮರೆತು ಕುರ್ಚಿ ಕಚ್ಚಾಟ, ಭ್ರಷ್ಟಾಚಾರ, ಹಗರಣಗಳಲ್ಲಿ ಮುಳುಗಿತು. ಮತ್ತು ಕೇಂದ್ರದ ಕಾಂಗ್ರೇಸ್ ನೇತೃತ್ವದ ಯುಪಿಎ ಸರ್ಕಾರದ್ದೂ ಅದೇ ದಾರಿ, ಅದೇ ನೀತಿಗಳು. ಭಿನ್ನವೇನು ಅಲ್ಲ.

ಇಂತಹ ನೀತಿಗಳ ಪರಿಣಾಮ ಎಲ್ಲೆಡೆ ಆದಂತೆ ಬಳ್ಳಾರಿ ಜಿಲ್ಲೆಯ ಮೇಲೆ ಸಹ ಆಗಿದೆ. ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಸಂಘಟನೆಯು ಹೊಸಪೇಟೆ ತಾಲ್ಲೂಕು ಸಮಿತಿ ಈ ಪ್ರಶ್ನೆಗಳ ಆಧಾರದಲ್ಲಿ ರೇಷನ್ ಕಾರ್ಡ್‌ವಂಚಿತ, ರೇಷನ್ ವಂಚಿತ ಜನರನ್ನು ಸಂಘಟಿಸಿ ದೊಡ್ಡ ಯೋಜಿತವಾದ- ಚಳುವಳಿಯನ್ನೇ ಆರಂಭಿಸಿದೆ.



ತಾಲ್ಲೂಕಿನಲ್ಲಿ ಸಹಸ್ರಾರು ಜನರು ರೇಷನ್ ಕಾರ್ಡ್‌ನಿಂದ ವಂಚಿತರಾಗಿದ್ದಾರೆ. ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ ಎನ್ನುತ್ತಾರೆ. ಆದರೆ ಅದೇ ರೀತಿ ಅರ್ಜಿ ಸಲ್ಲಿಸಿದ್ದರೂ ಗಣನೀಯ ಸಂಖ್ಯೆಯ ಜನರಿಗೆ ರೇಷನ್ ಕಾರ್ಡ್ ಎಂಬುದೇ ಸಿಗಲಿಲ್ಲ. ಇನ್ನೊಂದಷ್ಟು ಪ್ರಕರಣಗಳಲ್ಲಿ ಬಿಪಿಎಲ್ ಕಾರ್ಡ್ ಸಿಗಬೇಕಾದ ಜನಕ್ಕೆ ಸರ್ಕಾರ ಕೊಟ್ಟಿರುವುದು ಎಪಿಎಲ್ ಕಾರ್ಡುಗಳನ್ನು.

ಇಂದು ಸರ್ಕಾರಗಳು 'ಬಡತನ ರೇಖೆ ಕೆಳಗೆ ಇರುವ ಅರ್ಹರಿಗೆ ಮಾತ್ರ' ಬಿಪಿಎಲ್ ರೇಷನ್ ಕಾರ್ಡ್ ವಿತರಣೆ ಮಾಡುವೆವು, ಅವರಿಗೆ ಮಾತ್ರ ಸಬ್ಸಿಡಿ ಸಹಿತದ ಆಹಾರ ಧಾನ್ಯಗಳನ್ನು ವಿತರಣೆ ಮಾಡುವೆವು ಎನ್ನುತ್ತಾ ಗುರಿ ನಿರ್ದೇಶಿತ ರೇಷನ್ ವ್ಯವಸ್ಥೆ ಅಂದರೆ 'ಟಾರ್ಗೆಟ್' ಪದ್ಧತಿ ಮುಂತಾಗಿ ಜನರಿಗೆ ಅರ್ಥವಾಗದ ಮಾತುಗಳನ್ನಾಡುತ್ತಾ ಹಸಿದವರ ತಟ್ಟೆಯಿಂದ ಅನ್ನವನ್ನೇ ಕಸಿದುಕೊಳ್ಳಲು ಆರಂಭಿಸಿವೆ. ಗ್ರಾಮೀಣ ಪ್ರದೇಶಗಳಲ್ಲಿ ಮಾಸಿಕ ದಿನಕ್ಕೆ ರೂ 26 ಕ್ಕೂ ಹೆಚ್ಚು ಆದಾಯವಿದ್ದರೆ ಅವರು ಬಡವರಲ್ಲವೆಂದು, ನಗರ ಪ್ರದೇಶದಲ್ಲಿ ದಿನಕ್ಕೆ 32 ರೂ. ಆದಾಯ ಇದ್ದರೆ ಅವರು ಬಡವರಲ್ಲವೆಂದು ಕೇಂದ್ರ ಸರ್ಕಾರದ ಮಾನದಂಡ ಹೇಳುತ್ತಿದೆ.

ಮಾನದಂಡ ನಿರ್ಬಂಧ

ಇದಲ್ಲದೇ ಇತ್ತೀಚಿನ ರಾಜ್ಯ ಸರ್ಕಾರದ ಆದೇಶದಲ್ಲಿ ನಗರ ಪ್ರದೇಶದಲ್ಲಿ 17,000, ಗ್ರಾಮೀಣ ಪ್ರದೇಶದಲ್ಲಿಯಾದರೆ 12,000 ಕ್ಕೂ ಹೆಚ್ಚು ಆದಾಯವನ್ನು ಹೊಂದಿದ್ದರೆ ಅವರು ಬಡವರಲ್ಲವೆಂದು ಹೇಳಲಾಗಿದೆ. 100 ಸಿ.ಸಿ. ಕ್ಕೂ ಹೆಚ್ಚಿನ ಸಾಮರ್ಥ್ಯದ ಬೈಕ್ ಹೊಂದಿದ್ದರೆ ಅವರು ಬಡವರಲ್ಲವೆಂದು, ಅಥವಾ ಕುಟುಂಬದಲ್ಲಿ ಯಾರಾದರೂ ಸರ್ಕಾರಿ ಕೆಲಸದಲ್ಲಿದ್ದರೆ, ಇಲ್ಲವೇ ನಿಯಮಿತ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರೆ ಅವರು ಬಡವರಲ್ಲವೆಂದೂ ಅವೈಜ್ಞಾನಿಕವಾದ ನೀತಿಗಳನ್ನು ಸರ್ಕಾರ ಹೇರಿದೆ.

ಇಂತಹ ನೀತಿಗಳ ಪರಿಣಾಮವಾಗಿ ಇಂದು ಹೊಸಪೇಟೆಯಲ್ಲಿಯೂ ಸಹ ಈ ಮೊದಲೇ ಗುರುತಿಸಿ ನೀಡಲಾಗಿದ್ದ (ತಾತ್ಕಾಲಿಕ) ರೇಷನ್ ಕಾರ್ಡ್‌ಗಳಲ್ಲಿ ಗಣನೀಯ ಕಡಿತ ಮಾಡಲಾಗಿದೆ. ಮೊದಲಿಗೆ 3,091 ಅಂತ್ಯೋದಯ ಕಾರ್ಡ್ ನೀಡಲಾಗಿದ್ದ ಕಡೆ ಈಗ 2,869 ಕಾರ್ಡ್ ಮಾತ್ರ ನೀಡಲಾಗಿದೆ. 24,054 ಬಿಪಿಎಲ್ ಕಾರ್ಡ್ ನೀಡಲಾಗಿದ್ದ ಕಡೆ ಈಗ 21,914 ಕಾರ್ಡ್ ಮಾತ್ರ ನೀಡಲಾಗಿದೆ. 16,361 ಎಪಿಎಲ್ ಕಾರ್ಡ್ ನೀಡಲಾಗಿದ್ದ ಕಡೆ 14,023 ಮಾತ್ರ ನೀಡಲಾಗಿದೆ.

ಅಸಮರ್ಪಕ ಆಧಾರ

ಸರ್ಕಾರದ 2001 ಅಂಕಿ-ಅಂಶದ ಪ್ರಕಾರ ಹೊಸಪೇಟೆ ನಗರ ಪ್ರದೇಶದಲ್ಲಿ 70,000 ಕುಟುಂಬಗಳಿದ್ದವು. ಸರ್ಕಾರ ಜನಸಂಖ್ಯೆಯಲ್ಲಿ ಆಗಿರುವ ಹೆಚ್ಚಳ-ಕುಟುಂಬಗಳ ಸಂಖ್ಯೆಯಲ್ಲಿ ಆಗಿರುವ ಹೆಚ್ಚಳವನ್ನು ಗಣನೆಗೆ ತೆಗೆದುಕೊಂಡೇ ಇಲ್ಲ. ರೇಷನ್ ಕಾರ್ಡ್ ನೀಡಲು ಆಧಾರವಾದ ಅಂಕಿ-ಸಂಖ್ಯೆಗಳು ಮಾತ್ರ ಹಳೆಯವು. ಆದರೆ ರೇಷನ್ ಕಾರ್ಡ್ ನೀಡಲು ಆಧಾರವಾದ ಅರ್ಹತೆ-ಮಾನದಂಡ ಮಾತ್ರ ಹೊಸತು. ಅದೇ ಜನರಿಂದ ರೇಷನ್ ಕಾರ್ಡುಗಳನ್ನು ಕಿತ್ತುಕೊಳ್ಳುವ ಉದಾರೀಕರಣ-ಜಾಗತೀಕರಣ ನೀತಿಗಳಿಂದ ಪ್ರೇರಿತವಾದ ಹೊಸ ನೀತಿಗಳ ಪರಿಣಾಮವಾಗಿ ಬಂಧಿರುವ ಮಾನದಂಡಗಳು.

ಒಟ್ಟಾರೆ ರೇಷನ್ ಕಾರ್ಡ್‌ಗಳಲ್ಲಿ ಭಾರಿ ಕಡಿತ ಮಾಡಲಾಗಿದೆ. ಹತ್ತು ವರ್ಷಗಳ ನಂತರ ಹೊಸಪೇಟೆಯ ಕುಟುಂಬಗಳ ಸಂಖ್ಯೆ ಕನಿಷ್ಠ ಅರ್ಧ ಪಟ್ಟು ಹೆಚ್ಚಾಳವಾಗಿರಬಹುದೆಂದು ಅಂದಾಜಿಸಿದರೂ ಈಗ ಕೊಟ್ಟಿರುವ ಬಿಪಿಎಲ್ ಕಾರ್ಡ್‌ಗಳ ಸಂಖ್ಯೆಗೂ ಮತ್ತು ಇರುವ ಬಡ ಕುಟುಂಬಗಳ ಸಂಖ್ಯೆಗಳಿಗೂ ಬಹಳ ವ್ಯತ್ಯಾಸವಿದೆ. ಬಾರಿ ಅಂತರವಿದೆ.


ಕನಿಷ್ಠ ಈಗ ರೇಷನ್ ಮೂಲಕ ಕೊಡುವ ಆಹಾರ ಪದಾರ್ಥಗಳನ್ನು ಸರಿಯಾಗಿ ಕೊಡಲಾಗುತ್ತಿಲ್ಲ. ಏಕೆಂದರೆ ಹೊಸಪೇಟೆ ನಗರದಲ್ಲಿರುವ ಸು. 29 ನ್ಯಾಯಬೆಲೆ ಅಂಗಡಿಗಳು, 29 ಸೀಮೆಎಣ್ಣೆ ಅಂಗಡಿಗಳು ತಿಂಗಳ ಎಲ್ಲಾ ದಿನಗಳು ಸಹ ತೆಗೆದಿರಬೇಕೆಂದು, ಪ್ರತಿ ರೇಷನ್ ಕಾರ್ಡ್‌ಗಳಿಗೆ ನಿಯಮಿಸಿದ ಅಕ್ಕಿ, ಗೋಧಿ, ಸಕ್ಕರೆ, ಸೀಮೆಎಣ್ಣೆಗಳನ್ನು ತಿಂಗಳ ಪೂರ್ತಿಯಾಗಿ ಕೊಡಬೇಕೆಂದು ನಿಯಮವಿದ್ದರೂ ಅದನ್ನು ಸಹ ಸರಿಯಾಗಿ ನಿರ್ವಹಿಸುತ್ತಿಲ್ಲ. ಪ್ರತಿ ನ್ಯಾಯಬೆಲೆ ಅಂಗಡಿಗಳಿಗೆ ಸಂಬಂಧಿಸಿದಂತೆ 7 ಜನ ಸದಸ್ಯರ ಜಾಗೃತಿ ಸಮಿತಿ ಮಾಡಿ ಅದನ್ನು ಪ್ರತಿ ಎರಡು ತಿಂಗಳಿಗೊಮ್ಮೆ ಸಭೆ ಸೇರಿಸಿ ಚರ್ಚಿಸಬೇಕಾಗಿದೆ. ಅದನ್ನು ಸಹ ಮಾಡಲಾಗುತ್ತಿಲ್ಲ. ಪಡಿತರ ಚೇಟಿದಾರರ ಕುಂದುಕೊರತೆಗಳನ್ನು ನಿವಾರಣೆ ಮಾಡಲು ಆಹಾರ ಅದಾಲತ್‌ಗಳನ್ನು ನಡೆಸಲು ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಆಹಾರ ಅದಾಲತ್ ಮಾಡಬೇಕಾಗಿದೆ. ಅದು ಸಹ ಮಾಡಿಲ್ಲ.

ಹೊಸ ಅರ್ಜಿಗಳನ್ನು ಆನ್-ಲೈನ್ ಮೂಲಕವೇ ತುಂಬಬೇಕೆಂದು ಹೇಳಲಾಗಿದೆ. ಅನಕ್ಷರಸ್ಥರು, ಬಡವರು ಯಾವ ರೀತಿಯಾಗಿ ಇದನ್ನು ಮಾಡಬೇಕು. ಆನ್-ಲೈನ್‌ನಲ್ಲಿ ತುಂಬಬೇಕಾದರೂ ಸಹ ಇಂದು ಕನಿಷ್ಠ ರೂ.100 ಬೇಕಾಗಿದೆ. ಅದರಲ್ಲಿ ತಪ್ಪು ತುಂಬಿದರೆ ಸರಿ ಪಡಿಸಲು ಆಗುವುದಿಲ್ಲ, ದಾಖಲಾತಿಗಳನ್ನು ಒದಗಿಸಲಾಗುವುದಿಲ್ಲ. ಈಗ ಹೊಸ ಅರ್ಜಿಗಳನ್ನು ಸಹ ತೆಗೆದುಕೊಳ್ಳುವುದಿಲ್ಲವೆಂದು ಹೇಳುವುದರ ಮೂಲಕ ಜನರ ಹಕ್ಕನ್ನು ಸಹ ನಿರಾಕರಿಸಲಾಗಿದೆ.

ಸರಿಯಾದ ಉದ್ಯೋಗದ ಅವಕಾಶವಿಲ್ಲದೇ ಜನರು ತೊಳಲಾಡುತ್ತಿರುವ ಸ್ಥಿತಿಯಲ್ಲಿ, ತೀವ್ರವಾದ ಬೆಲೆಏರಿಕೆಯ ಇಂತಹ ಸಮಯದಲ್ಲಿ ಯಾವ ರೀತಿಯಾಗಿ ತಮ್ಮ ಕುಟುಂಬಗಳನ್ನು ಸಲಹಬೇಕು ಎಂಬ ಪ್ರಶ್ನೆ ಜನಸಾಮಾನ್ಯರನ್ನು ಕಾಡುತ್ತಿದೆ. ಈ ಪ್ರಶ್ನೆಯನ್ನು ಆಳುವ ಜನರ ಮುಖಕ್ಕೆ ಒಡ್ಡಲು ತೀರ್ಮಾನಿಸಿತು ಡಿವೈಎಫ್ಐ ಸಂಘಟನೆ.

ಬೃಹತ್ ಜನಸ್ತೋಮ- ಪ್ರಚಂಡ ಮೆರವಣಿಗೆ

ಅದು ಡಿಸೆಂಬರ್ 24, 2012. ಹೊಸಪೇಟೆಯ ಬಸವಣ್ಣ ಕಾಲುವೆ ಸಮೀಪದ ಡಿವೈಎಫ್ಐ ಕಛೇರಿ ಬಳಿ ಸಹಸ್ರಾರು ಜನ ಜಮಾಯಿಸಿದ್ದಾರೆ. ಈ ರೇಷನ್ ಕಾರ್ಡ್ ವಂಚಿತರ ಕೈಯಲ್ಲಿ ಡಿವೈಎಫ್‌ಐನ ಶ್ವೇತ ಪತಾಕೆ. ಬಡ ಜನರ ಹೊಟ್ಟೆಯ ಮೇಲೆ ಹೊಡೆದು ರೇಷನ್ ಕಾರ್ಡು ಕಸಿದುಕೊಳ್ಳುವ ಆಳುವ ಸರ್ಕಾರಗಳ ನೀತಿಗಳ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಮೊಳಗಿಸುತ್ತಾ ಜನ ಹೊರಟೇ ಬಿಟ್ಟರು. ಹೊಸಪೇಟೆಯ ಪ್ರಮುಖ ಬೀದಿಗಳಲ್ಲಿ ಸಾಗಿದ ಮೆರವಣಿಗೆ ತಲುಪಿದ್ದು ಬಿಜೆಪಿ [illegible] [illegible] [illegible]



[illegible]

ಬಾಬ್ರಿ ಮಸೀದಿ ಧ್ವಂಸದ ಎರಡು ದಶಕಗಳ ಬಳಿಕ.....

ನುಸುಳಿ ಬರುತ್ತಿರುವ ಫ್ಯಾಸಿಸ್ಟ್ ಪ್ರವೃತ್ತಿಯ ನಾನಾ ಮುಖಗಳು

ಪ್ರಭಾತ್ ಪಟ್ನಾಯಕ್

ಕನ್ನಡಕ್ಕೆ : ಸಿಮ್ಮಿಸಿ

2

ಪ್ರಜಾಪ್ರಭುತ್ವದ ರಚನೆಯೊಂದು ಅಸ್ತಿತ್ವದಲ್ಲಿ ಇರುವಾಗಲೇ ಪ್ರಜಾಸತ್ತೆಯನ್ನು ಉದ್ದೇಶ ಪೂರ್ವಕವಾಗಿ ಕತ್ತು ಹಿಸುಕಿ ಕೊಲ್ಲುವ ಪ್ರಕ್ರಿಯೆ ಪರಿಣಾಮಕಾರಿಯಾಗಿ ಹಾಗೂ ನಾಟಕೀಯ ಘಟನೆಗಳ ಮೂಲಕ ಒಳಗೊಳಗೇ ನಡೆಯುತ್ತಿದೆ. ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಯನ್ನು ಪ್ರೋತ್ಸಾಹಿಸುವ ಪ್ರಭುತ್ವ ಇಂತಹ ಕೆಲಸ ನಡೆಸುತ್ತಿದೆ. ಈ ಪ್ರಕ್ರಿಯೆಯನ್ನು ವ್ಯವಸ್ಥಿತವಾಗಿ ನಡೆಸುತ್ತಿರುವುದು ಐಡೆಂಟಿಟಿ ಪಾಲಿಟಿಕ್ಸ್‌ಗಾಗಿ ಹಪಹಪಿಕೆಯ ಒಂದು ದೊಡ್ಡ ಸಮೂಹ. ಈ ಗುಂಪು ಕೋಮುವಾದಿ ಫ್ಯಾಸಿಸಂ ಸೇರಿದಂತೆ ಫ್ಯಾಸಿಸ್ಟ್ ಧೋರಣೆಗಳನ್ನು ಜೀವಂತವಾಗಿ ಇಡುವಲ್ಲಿ ಎಲ್ಲ ಪ್ರಯತ್ನಗಳನ್ನೂ ಮುಂದುವರಿಸುತ್ತಿದೆ. ಇದಕ್ಕೆ ಪೂರಕವಾಗಿಯೇ ಪ್ರಭುತ್ವ ನಡೆದುಕೊಳ್ಳುತ್ತಿದೆ. ಸಮಾಜದಲ್ಲಿ ಆರ್ಥಿಕವಾಗಿ ದುರ್ಬಲರಾಗಿರುವ ಜನರನ್ನು ಇನ್ನಷ್ಟು ಶೋಷಣೆ ಮಾಡುತ್ತಲೇ ಪ್ರಗತಿಪರ ಶಕ್ತಿಗಳ ಮೇಲೆ ದಮನ ಮುಂದುವರಿಸಿದೆ. ಇದಕ್ಕೆ ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ನಡೆಯುತ್ತಿರುವ ವಿವಿಧ ಬೆಳವಣಿಗೆ ಗಳೇ ಸಾಕ್ಷಿ. ಹಾಗೆಯೇ, ಇಲ್ಲಿಯವರೆಗೆ ಪ್ರಜಾಸತ್ತಾತ್ಮಕ ಶಕ್ತಿಗಳು ಸಾಧಿಸಿರುವ ಯಶಸ್ಸನ್ನು ಹಿನ್ನಡೆಗೊಳಿಸುವುದು ಮತ್ತು ದಲಿತರು, ಮಹಿಳೆಯರು ಮತ್ತು ಅಲ್ಪಸಂಖ್ಯಾತರನ್ನು ಪ್ರಶ್ನಾತೀತವಾಗಿ ತಮ್ಮ ತಾಳಕ್ಕೆ ತಕ್ಕಂತೆ ಕುಣಿಯುವಂತೆ ಮಾಡಲಾಗುತ್ತದೆ. ಈಗಿನ ಜಾಗತೀಕರಣ ಹಣಕಾಸು ಬಂಡವಾಳಕ್ಕೆ ಬೇಕಾದ ವಾತಾವರಣ ಸೃಷ್ಟಿಸುವ ಪ್ರಕ್ರಿಯೆಯನ್ನು ಬೆಳೆಸಿಕೊಂಡು ಹೋಗುವ ಉದ್ದೇಶದಿಂದ ಇಂತಹ ಬೆಳವಣಿಗೆಗಳು ನಡೆಯುತ್ತಿದೆ. ನಮ್ಮ ದೇಶವೂ ಇದೇ ದಿಕ್ಕಿನಲ್ಲಿ ಸಾಗುತ್ತಿದೆ ಎಂಬುದನ್ನು ಅಂದಾಜಿಸಲು ನಮಗೆ ಹೆಚ್ಚು ಸಮಯ ಬೇಕಾಗುವುದಿಲ್ಲ.

ನವ ಉದಾರೀಕರಣ ಪ್ರಭುತ್ವವು ಪ್ರಜಾಸತ್ತಾತ್ಮಕ ವಿರೋಧಿ ಎಂಬುದು ಪ್ರಮುಖ ವಿಷಯ. ಹಾಗೆಯೇ ಪ್ರಜಾಸತ್ತೆಯ ಮೂಲಭೂತ ಸಂರಚನೆಯನ್ನು ಉಳಿಸಿಕೊಂಡು ಸಾಮಾಜಿಕವಾಗಿ ಪುರೋಗಾಮಿಯಾಗುತ್ತಾ ಸಾಗುತ್ತದೆ. ಅತ್ಯಂತ ಆಕ್ರಮಣಕಾರಿ ಹಾಗೂ ಅಪಾಯಕಾರಿ ಪ್ರವೃತ್ತಿಯ ರಾಜಕೀಯ ಸೇರಿದಂತೆ ಐಡೆಂಟಿಟಿ ಪಾಲಿಟಿಕ್ಸ್‌ನ್ನೂ ಅದು ಪ್ರೋತ್ಸಾಹಿಸುತ್ತದೆ.


ಇದಕ್ಕೆ ನಾವು ಟರ್ಕಿಯ ಉದಾಹರಣೆಯನ್ನೇ ನೋಡಬಹುದು. ಅಲ್ಲಿ ಮುಸ್ಲಿಂವಾದಿ ಆಡಳಿತದಲ್ಲೂ ನವ ಉದಾರವಾದ ವ್ಯವಸ್ಥಿತವಾಗಿ ಕಾರ್ಯಾಚರಿಸುತ್ತಿದೆ. ಅದೇ ರೀತಿ ನವ ಉದಾರೀಕರಣದ ಪ್ರಭುತ್ವವೂ ಸಾಧ್ಯವಾಗಲಿದೆ. ಭಾರತದಂತಹ ವಿಶಾಲವಾದ ರಾಷ್ಟ್ರದಲ್ಲಿ ಟರ್ಕಿಯಂತಹ ಏಕರೂಪದ ನವ ಉದಾರ ರೂಪಕ್ಕಿಂತಲೂ ಬಹುರೂಪಿ ಫ್ಯಾಸಿಸ್ಟ್ ಗುಣಸ್ವರೂಪದ ವ್ಯವಸ್ಥೆ ರೂಪು ಗೊಳ್ಳುವ ಸಾಧ್ಯತೆ ಇದೆ. ಅಂತಿಮವಾಗಿ ಈ ವ್ಯವಸ್ಥೆ ಫ್ಯಾಸಿಸ್ಟ್ ಪ್ರಭುತ್ವದ ರಚನೆಗಿಂತಲೂ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳದ ಹಿತಾಸಕ್ತಿಯನ್ನು ಕಾಪಾಡುವುದೇ ಆಗಿದೆ.

ಇಡೀ ದೇಶದ ಭೌಗೋಳಿಕ ವ್ಯಾಪ್ತಿಯಲ್ಲಿ ನಡೆಯುವ ಬೆಳವಣಿಗೆಗಳನ್ನು ಗಮನಿಸುವುದಾದರೆ, ಪ್ರಾದೇಶಿಕ ಮತ್ತು ಇತರ ಐಡೆಂಟಿಟಿಗಳ ಸಮ್ಮಿಶ್ರಣವಿದೆ. ಇದು ವಸಾಹತುಶಾಹಿ ವಿರುದ್ಧದ ಹೋರಾಟದ ಫಲ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಡೆದ ವಸಾಹತುಶಾಹಿ ವಿರುದ್ಧದ ಹೋರಾಟ ಭಾಷಾವಾರು ಪ್ರಾಂತ್ಯದ ಪ್ರಜ್ಞೆಯನ್ನೂ ರೂಪುಗೊಳಿಸಿತು. ಇದರಿಂದಾಗಿ ಇತರ ಪ್ರಾಮುಖ್ಯ ವಿಷಯಗಳ ಮೇಲೆ ಪಾರಮ್ಯ ಸಾಧಿಸಲು ಇದು ಬಿಡಲಿಲ್ಲ.

ಪ್ರಸಕ್ತ ಸಂದರ್ಭದ ಸಾಮ್ರಾಜ್ಯಶಾಹಿ ಯಾಜಮಾನ್ಯದಲ್ಲಿ, 'ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟಗಳು ರಾಷ್ಟ್ರೀಯ ಮಟ್ಟದಲ್ಲಿ ವ್ಯಾಪಿಸಲು ಹಲವು ಎಡರು ತೊಡರುಗಳನ್ನು ಹೊಂದಿದೆ. ಹೋರಾಟದ ಕೆಚ್ಚನ್ನು ರಾಷ್ಟ್ರೀಯ ಮಟ್ಟದಲ್ಲಿ ಸುಸ್ಥಿರವಾಗಿ ಉಳಿಸಿಕೊಳ್ಳುವ ಅನಿವಾರ್ಯತೆ ಜಾತ್ಯತೀತ ಶಕ್ತಿಗಳಿಗೆ ಇದೆ. ಇದೇ ವೇಳೆ, ಕೆಲವೊಂದು ಶಕ್ತಿಗಳು ಸಾಮ್ರಾಜ್ಯಶಾಹಿಗಳೊಂದಿಗೆ ರಾಜಿ ಹೊಂದಾಣಿಕೆ ಮಾಡಿಕೊಂಡು ಬಂದಿರುವುದನ್ನೂ ನಾವು ಕಾಣುತ್ತಿದ್ದೇವೆ. ಇದರಿಂದಾಗಿ ಜಾಗತೀಕರಣದ ಈಗಿನ ಸ್ಥಿತಿಯಲ್ಲಿ ಬೂರ್ಜ್ವಾ ಶಕ್ತಿಗಳು ದೇಶದಲ್ಲಿ ಈಗಲೂ ಮೇಲುಗೈ ಪಡೆದಿವೆ. ರಾಷ್ಟ್ರೀಯ ಪ್ರಜ್ಞೆಯಲ್ಲಿ ಕುಸಿತ ಉಂಟಾಗುವಾಗಲೇ ಅಥವಾ ಹಿನ್ನೆಲೆಗೆ ಸರಿಯುತ್ತಿರುವಾಗಲೇ ಐಡೆಂಟಿಟಿ ಪ್ರಜ್ಞೆಯ ವಿವಿಧ ಪ್ರಕಾರಗಳು ಮುಖ್ಯ ಭೂಮಿಕೆಗೆ ಬರುತ್ತಿವೆ. ಅದೇ ರೀತಿ ನವ ಉದಾರೀಕರಣದ ಆಳ್ವಿಕೆಯಲ್ಲೂ ರಾಷ್ಟ್ರೀಯ ಪ್ರಜ್ಞೆ ಎಂಬುದು ನಿಧಾನವಾಗಿ ಕರಗಿ ಬಹು ಪ್ರಕಾರದ ಐಡೆಂಟಿಟಿ ಪ್ರಜ್ಞೆಗೆ ಹೆಚ್ಚಿನ ಒತ್ತು ಸಿಗುತ್ತಿದೆ. ವಿವಿಧ ಗುಂಪುಗಳ ನಡುವೆ ವೈರುಧ್ಯದ ಸಂಬಂಧಗಳು ಏರ್ಪಡುತ್ತಿವೆ. ನಿರುದ್ಯೋಗ ಹಾಗೂ ಇತರ ಸಮಸ್ಯೆಗಳು ಈ ಪರಿಸ್ಥಿತಿಗೆ ಕಾರಣವಾಗಿವೆ. ಇಂತಹ ಪರಿಸ್ಥಿತಿಯಲ್ಲೇ ಫ್ಯಾಸಿಸ್ಟ್ ಧೋರಣೆಗಳು ರೂಪು ತಳೆಯುತ್ತಿವೆ. ಈ ವಿಸ್ತೃತ ಪರಿಸ್ಥಿತಿಯಿಂದಾಗಿಯೇ ಒಬ್ಬ ಬಿಹಾರಿ ಅಥವಾ ಒಬ್ಬ ದಕ್ಷಿಣ ಭಾರತೀಯನಿಂದಾಗಿ ಮಹಾರಾಷ್ಟ್ರದಲ್ಲಿ ಒಬ್ಬ ಕಾರ್ಮಿಕನೊಬ್ಬ ಕೆಲಸ ಕಳೆದುಕೊಳ್ಳುತ್ತಾನೆ ಎಂದು ಸುಲಭವಾಗಿ ಹೇಳಿಬಿಡಬಹುದು.

ವಸಾಹತುಶಾಹಿ ವಿರುದ್ಧದ ಹೋರಾಟ ಆರಂಭವಾಗುವಾಗ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಜೀವಿಸುವ ಪ್ರತಿ ಭಾರತೀಯನೂ ಕನಿಷ್ಟ ಗುಣಮಟ್ಟದ ಜೀವನದ ಖಾತ್ರಿ ನೀಡಲಾಗಿತ್ತು. ಆತನಿಗೆ ಕೆಲವೊಂದು ಹಕ್ಕುಗಳು ಮತ್ತು ಸ್ವಾತಂತ್ರ್ಯವನ್ನು ಪಡೆಯುವ ಭರವಸೆ ನೀಡಲಾಗಿತ್ತು. ಭಾರತೀಯ ಎಂಬ ಪದದ ಕಲ್ಪನೆ ಈ ರೀತಿ ಮಾಡಲಾಗಿತ್ತು.

ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಆಗ ಅಂದುಕೊಂಡಿದ್ದ ಭವ್ಯ ಭಾರತದ ಎಲ್ಲ ಭರವಸೆಗಳ ಪ್ರಕಾರ, ವೈಯಕ್ತಿಕ ಐಡೆಂಟಿಟಿಗಿಂತಲೂ ಭಾರತೀಯರು ಎಲ್ಲರೂ ಸಮಾನರು ಎಂಬ ಭಾವನೆ ಎಲ್ಲರಲ್ಲೂ ಮೇಳೈಸುತ್ತಿತ್ತು. ಭಾರತೀಯ ಪ್ರಭುತ್ವದ ಈ ಭರವಸೆಗಳು ನಿಧಾನವಾಗಿ ಕರಗಿ ಹೋಗಿ, ಎಲ್ಲ ಜನವಿಭಾಗಗಳ ಆಶೋತ್ತರಗಳನ್ನು ನೋಡುವ ಬದಲು ಜಾಗತಿಕ ಹಣಕಾಸು ಬಂಡವಾಳದ ಹಿತಾಸಕ್ತಿಯನ್ನು ಉತ್ತೇಜಿಸುವ ಏಕೈಕ ಇರಾದೆ ಈಗಿನ ಪ್ರಭುತ್ವಕ್ಕೆ ಇದೆ. ಇದಕ್ಕಾಗಿ ಎಲ್ಲ ರೀತಿಯ ಬಹುಮುಖ ಹಾಗೂ ರಾಷ್ಟ್ರೀಯ ಅರೆ ರಾಷ್ಟ್ರೀಯ ಐಡೆಂಟಿಟಿಗಳು ಒಟ್ಟುಗೂಡಿವೆ. ದೇಶದಲ್ಲಿ ದೊಡ್ಡ ಬಂಡವಾಳ ಆಕ್ರಮಿಸಿ ಬಿಟ್ಟಿರುವ ಬಂಡವಾಳ ಜಗತ್ತಿನಲ್ಲಿ ತಮ್ಮ ಪಾರಮ್ಯ ಮೆರೆಯಲು ಜನಸಾಮಾನ್ಯರ ಬದುಕನ್ನೂ ಒತ್ತೆ ಇಡಲು ಸಿದ್ಧವಾಗಿವೆ.


ಧರ್ಮಪುರಿಯಲ್ಲಿ ದಾಳಿಗೀಡಾದ ದಲಿತರ ಬದುಕು

ಜಾಗತಿಕ ಹಣಕಾಸು ಬಂಡವಾಳ ಈ ಅಪಾಯಕಾರಿ ವ್ಯವಸ್ಥೆಯನ್ನು ಸೃಷ್ಟಿಸಿದೆ. ನವ ಉದಾರೀಕರಣದ ನೀತಿಗಳ ವಿರುದ್ಧ ಹೋರಾಟ ನಡೆಸಲೂ ಜನರಿಗೆ ಆಗದಂತೆ ಸಮಾಜದಲ್ಲೇ ಅಂತರ್‌ವಿಭಜನೆ ಮಾಡುತ್ತಾ ಬರುತ್ತಿದೆ. ಪ್ರಜಾಪ್ರಭುತ್ವವನ್ನು ಬಲಹೀನಗೊಳಿಸಿ ಅದರ ವ್ಯವಸ್ಥೆಯನ್ನು ಹೊಡೆದುಹಾಕುವ ಪ್ರಕ್ರಿಯೆಯನ್ನು ಈ ಬೆಳವಣಿಗೆ ನಡೆಸಿದೆ. ವಸಾಹತುಶಾಹಿ ವಿರೋಧಿ ಹೋರಾಟ ಜನರನ್ನು ಮುನ್ನಡೆಸಿದ್ದರೆ ಈಗ ನಡೆಯುತ್ತಿರುವ ಪ್ರಕ್ರಿಯೆ ಕ್ರಾಂತಿಕಾರಿ ಹೋರಾಟಗಳಿಂದ ವಿಮುಖರನ್ನಾಗಿಸಿ ವಸಾಹತುಶಾಹಿ ಹೋರಾಟದ ಫಲಗಳು ಜನರಿಗೆ ದಕ್ಕದಂತೆ ಮಾಡಲಾಗುತ್ತಿದೆ.

ಹಾಗಾದರೆ ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಅದೇನೆಂದರೆ ಬಾಬ್ರಿ ಮಸೀದಿ ಧ್ವಂಸಕ್ಕೂ ಈ ಮೇಲಿನ ವಿವಿಧ ಬೆಳವಣಿಗೆಗಳಿಗೂ ಯಾವ ರೀತಿಯ ಸಂಬಂಧ ಇದೆ ಎಂಬುದು. ಮಸೀದಿ ಧ್ವಂಸದ ವಿಧ್ವಂಸಕ ಕೃತ್ಯ ಈ ಬೆಳವಣಿಗೆಯಲ್ಲಿ ವಹಿಸಿದ ಪಾತ್ರ ಯಾವುದು ಎಂಬುದು; ಬಾಬ್ರಿ ಮಸೀದಿ ಧ್ವಂಸದ ಈ ಘಟನೆ, ಪ್ರಜಾಸತ್ತಾತ್ಮಕ ಚಳವಳಿಗೆ ಒಂದು ದೊಡ್ಡ ಹಿನ್ನಡೆ, ಜೊತೆಗೆ ಪ್ರತಿಕ್ರಾಂತಿ ಮಾಡುವ ನಿಟ್ಟಿನಲ್ಲಿ ಒಂದು ಮಹತ್ವದ ಮೈಲುಗಲ್ಲು ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ಈ ಘಟನೆಯಿಂದಾಗಿ ನವ ಉದಾರೀಕರಣ ಆರ್ಥಿಕ ನೀತಿಗಳತ್ತ ದೇಶವನ್ನು ಕೊಂಡೊಯ್ಯುವ ಪ್ರಯತ್ನ ಆರಂಭ ವಾಯಿತು. ಈ ಧ್ವಂಸ ಪ್ರಕರಣ ಯಾವುದೇ ಎಗ್ಗಿಲ್ಲದೆ, ಶಿಕ್ಷೆಯ ಅಂಜಿಕೆಯಿಲ್ಲದೆ ನಡೆಯಿತು. ಈ ಕೃತ್ಯದ ಪ್ರಮುಖ ಪ್ರಚೋದಕರಲ್ಲೊಬ್ಬರಾದ ಬಾಳಾ ಠಾಕ್ರೆಗೆ ಸರ್ಕಾರಿ ಗೌರವಗಳೊಂದಿಗೆ ನಡೆದ ಅಂತ್ಯಸಂಸ್ಕಾರ 'ಇಂಥ ಕೃತ್ಯಗಳನ್ನು ನಡೆಸಿದರೂ ಸಮಸ್ಯೆಯಿಲ್ಲ' ಎಂಬ ಕೆಟ್ಟ ಸಂದೇಶವನ್ನು ರವಾನಿಸಿದೆ. ಬಹುಮುಖಿ ಫ್ಯಾಸಿಸ್ಟ್ ಧೋರಣೆಗಳಿಗೆ ಈ ಘಟನೆ ಮತ್ತಷ್ಟು ಪ್ರಚೋದನೆ ನೀಡಿದೆ. ಸಾಮ್ರಾಜ್ಯಶಾಹಿ ಈ ಬೆಳವಣಿಗೆಯ ಲಾಭ ಪಡೆದುಕೊಳ್ಳಲು ಇನ್ನಷ್ಟು ಐಡೆಂಟಿಟಿ ಪಾಲಿಟಿಕ್ಸ್ ಪ್ರಕ್ರಿಯೆಯ ಅಜೆಂಡಾಗಳನ್ನು ಜಾರಿಗೆ ತರುವ ಅಪಾಯವೂ ಇದೆ.

ಎಲ್ಲರನ್ನು ಒಳಗೊಳ್ಳುವಂತಹ ಬಹು ಮುಖಿ ಭಾರತ ದೇಶದ ಪರಿಕಲ್ಪನೆಯನ್ನು ಮರುಸ್ಥಾಪಿಸಬೇಕಾದರೆ, ನಮ್ಮನ್ನು ಆವರಿಸಿಕೊಳ್ಳುತ್ತಿರುವ ಫ್ಯಾಸಿಸ್ಟ್ ಪ್ರವೃತ್ತಿಯ ವಿರುದ್ಧ ಸೆಣೆಸಬೇಕಾದರೆ, ಒಟ್ಟಾರೆ ಈ ಪರಿಸ್ಥಿತಿಯನ್ನು ಪರಿವರ್ತಿಸಬೇಕಾದರೆ ನಮ್ಮ ಹೋರಾಟವು ನವ ಉದಾರೀಕರಣ ನೀತಿಗಳು ಮತ್ತು ಸಾಮ್ರಾಜ್ಯಶಾಹಿ ಜಾಗತೀಕರಣ ನೀತಿಗಳ ವಿರುದ್ಧದ ಹೋರಾಟಗಳನ್ನೂ ಸಹ ಒಳಗೊಳ್ಳಬೇಕಾಗುತ್ತದೆ. ಎಡಶಕ್ತಿಗಳು ಈ ಹೋರಾಟದಲ್ಲಿ ಪ್ರಧಾನ ಪಾತ್ರವನ್ನು ವಹಿಸಬೇಕಾಗುತ್ತದೆ. ಎಡಪಕ್ಷಗಳು ಇದನ್ನು ಸಾಧಿಸಬೇಕಾದರೆ ತನ್ನ ಸ್ವಂತದ ಸಿದ್ಧಾಂತವನ್ನು ಒಪ್ಪಿಕೊಳ್ಳುವವರು ಮಾತ್ರವಲ್ಲ, ಬದಲಿಗೆ ಅಂತರ ರಾಷ್ಟ್ರೀಯ ಹಣಕಾಸು ಬಂಡವಾಳದ ಯಜಮಾನಿಕೆಯ ವಿರುದ್ಧ ತಮ್ಮ ದೈನಂದಿನ ಜೀವನದಲ್ಲಿ ದನಿ ಎತ್ತುವ ಎಲ್ಲ ಕ್ರಾಂತಿಕಾರಿ ಶಕ್ತಿಗಳ ಬೆಂಬಲವನ್ನು ಪಡೆದುಕೊಳ್ಳಬೇಕಾಗುತ್ತದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ದಿಲ್ಲಿ ಆಳುವವರ ದಪ್ಪ ಚರ್ಮದ ಪ್ರದರ್ಶನ : ಪ್ರತಿಭಟನಾಕಾರರ ಮೇಲೆ ಲಾಠಿಪ್ರಹಾರ

ದೇಶದ ರಾಜಧಾನಿಯಲ್ಲಿ ನಡೆದ ಘೋರ ಅತ್ಯಾಚಾರದ ಘಟನೆಯ ಬಗ್ಗೆ ಉಕ್ಕಿ ಬಂದ ಯುವಜನರ, ಅದರಲ್ಲೂ ಪ್ರತಿದಿನ ಇಂತಹ ಕಿರುಕುಳಗಳನ್ನು ಎದುರಿಸಬೇಕಾಗುತ್ತಿರುವ ಯುವತಿಯರ ಕ್ರೋಧ ಯುಪಿಎ–2 ಸರಕಾರದ ಕಚೇರಿಗಳಿರುವ ರಾಜಪಥದಲ್ಲಿ ವ್ಯಕ್ತಗೊಂಡಾಗ ಸರಕಾರ ಮತ್ತು ಅದರ ಪೋಲೀಸ್ ಇಲಾಖೆ ಅವರ ಭಾವನೆಗಳಿಗೆ ಸ್ಪಂದಿಸುವ ಬದಲು ಲಾಠಿ ಪ್ರಹಾರ, ಜಲಪ್ರಹಾರ, ಅಶ್ರುವಾಯು ಪ್ರಯೋಗ ನಡೆಸಿದೆ. ಇದರಿಂದಾಗಿ ಯುಪಿಎ–2 ಸರಕಾರದ ಗೃಹ ಕಾರ್ಯದರ್ಶಿ ಮತ್ತು ದಿಲ್ಲಿ ಪೋಲೀಸ್ ಕಮಿಶನರ್‌ರವರ ದರ್ಪದ ಹೇಳಿಕೆಗಳಿಂದ ಅದಾಗಲೇ ನೊಂದಿದ್ದ ದಿಲ್ಲಿಯ ಜನತೆ ಮತ್ತಷ್ಟು ಸಿಟ್ಟಿಗೆದ್ದಿದ್ದಾರೆ.

ಇವರಿಬ್ಬರೂ ಈ ಹಿಂದೆ ದಿಲ್ಲಿಯಲ್ಲಿ ಮಹಿಳೆಯರ ಭದ್ರತೆಯ ಬಗ್ಗೆ ನೀಡಿದ ಭರವಸೆಗಳನ್ನು ಈಡೇರಿಸುವುದು ತಮ್ಮ ಜವಾಬ್ದಾರಿಯೇನಲ್ಲ ಎಂಬಂತೆ ಮಾತಾಡಿದ್ದಾರೆ. ದಿಲ್ಲಿಯಲ್ಲಿ ಸಾರ್ವಜನಿಕ ಭದ್ರತೆ, ನೀಡಿದ ಭರವಸೆಗಳನ್ನು ಜಾರಿಗೆ ತರುವ ಜವಾಬ್ದಾರಿ ಯಾರದ್ದು ಎಂಬ ಬಗ್ಗೆಯೇ ಗೊಂದಲ ಇರುವಂತೆ ಕಾಣುತ್ತದೆ. ಇದರ ಒಟ್ಟು ಪರಿಣಾಮವೆಂದರೆ ದೇಶದ ರಾಜಧಾನಿಯಲ್ಲಿ ಸಾರ್ವಜನಿಕರ ಭದ್ರತೆಯ ಜವಾಬ್ದಾರಿ ಯಾರಿಗೂ ಇಲ್ಲದಂತಾಗಿದೆ. ದಿಲ್ಲಿ ಸರಕಾರ, ಕೇಂದ್ರ ಸರಕಾರ ಮತ್ತು ಪೋಲೀಸ್ ಕಮಿಶನರ್ ಒಬ್ಬರು ಇನ್ನೊಬ್ಬರತ್ತ ಬೊಟ್ಟು ಮಾಡುತ್ತಿದ್ದಾರೆ.

ಈ ನಡುವೆ ದಿಲ್ಲಿಯ ಮುಖ್ಯಮಂತ್ರಿಗಳೇ ಅತ್ಯಾಚಾರಕ್ಕೆ ಒಳಗಾಗಿ ಆಸ್ಪತ್ರೆಯಲ್ಲಿ ಸಾವು–ಬದುಕಿನ ನಡುವೆ ಹೋರಾಡುತ್ತಿರುವ ಮಹಿಳೆಯ ಸಾಕ್ಷ್ಯವನ್ನು ದಾಖಲಿಸುವಾಗ ಪೋಲಿಸ್ ಕಮಿಶನರ್ ಕಚೇರಿಯಿಂದ ಹಸ್ತಕ್ಷೇಪದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ ದೂರು ಕೇಂದ್ರ ಗೃಹ ಮಂತ್ರಿಯ ಬಳಿಗೆ ಹೋಗಿದೆ ಎಂದು ವರದಿಯಾಗಿದೆ. ಅತ್ಯಾಚಾರದ ಪ್ರಕರಣದ ನ್ಯಾಯಾಂಗ ವಿಚಾರಣೆಯೊಂದಿಗೆ ಈ ದೂರಿನ ವಿಚಾರಣೆಯೂ ನಡೆಯುತ್ತದೆ ಎಂದು ಪ್ರಕಟಿಸಲಾಗಿದೆ.

ಇದೂ ಸಾಲದೆಂಬಂತೆ ಪ್ರತಿಭಟನಾಕಾರರನ್ನು ಚದುರಿಸುವ ವೇಳೆಯಲ್ಲಿ ಒಬ್ಬ ಪೋಲೀಸ್ ಸಿಬ್ಬಂದಿಯೂ ಆಸ್ಪತ್ರೆಗೆ ದಾಖಲಾಗಿದ್ದು, ನಂತರ ಆತನ ಸಾವು ಸಂಭವಿಸಿದೆ. ಆತ ಪ್ರತಿಭಟನಾಕಾರರ ಕಾಲ್ತುಳಿತಕ್ಕೆ ಸಿಕ್ಕಿ ಗಂಭೀರವಾಗಿ ಗಾಯಗೊಂಡು ಅದರಿಂದಲೇ ಸಾವಿಗೀಡಾದ ಎಂದು ಪೋಲೀಸ್ ಕಮಿಶನರ್ ಹೇಳಿದ್ದಾರೆ. ಈ ಸಂಬಂಧದಲ್ಲಿ 8 ಯುವಕರನ್ನು ಬಂಧಿಸಿದ್ದು ಅವರ ಮೇಲೆ ಕೊಲೆ ಆಪಾದನೆ ಹಾಕುವ ತಯಾರಿ ನಡೆದಿದೆಯಂತೆ. ಆದರೆ ಆತನ ಮೈಮೇಲೆ ಗಾಯಗಳೇನೂ ಕಾಣಲಿಲ್ಲ, ಹೃದಯಾಘಾತದಿಂದ ಸಾವು ಸಂಭವಿಸಿರಬಹುದು ಎಂಬುದು ಕೆಲವರ ಊಹೆ. ಪೋಲೀಸರು ತನ್ನ ಸಿಬ್ಬಂದಿಯ ಸಾವನ್ನು ತಮ್ಮ ಅದಕ್ಷತೆಯನ್ನು ಮುಚ್ಚಿಕೊಳ್ಳಲು ಬಳಸಿಕೊಳ್ಳುತ್ತಿರಬಹುದು ಎಂಬ ಸಂದೇಹವೂ ಇದೆ.

ಪ್ರಧಾನ ಮಂತ್ರಿಗಳು ತಮ್ಮ ಎಂದಿನ ಮೌನ ಮುರಿದು ಕೊನೆಗೂ ದೇಶವನ್ನುದ್ದೇಶಿಸಿ ಮಾತಾಡಿದ್ದಾರೆ. ಸಾಮಾನ್ಯವಾಗಿ ಅವರು ಬಾಯಿ ತೆರೆದಾಗಲೆಲ್ಲ 'ಆಮ್ ಆದ್ಮಿ'ಗೆ ಏನೋ ಕೇಡು ಬಂದಿದೆ(ಉದಾ: ಪೆಟ್ರೋಲ್ ಬೆಲೆ ಹೆಚ್ಚಳ ಇತ್ಯಾದಿ) ಎಂದರ್ಥ ಎಂಬ ಮಾತು ಈಗ ಜನಜನಿತವಾಗಿ ಬಿಟ್ಟಿದೆ. ಆದರೆ ಈ ಬಾರಿ 'ಠೀಕ್ ಹೈ?'(ಸರೀನಾ?) ಎಂದು ತಮ್ಮ ಭಾಷಣ ಮುಗಿಸಿ ಅವರು ಟಿವಿ ತಂಡಕ್ಕೆ ಹೇಳಿದ ಮಾತೂ ಪ್ರಮಾದವಶಾತ್ ಪ್ರಸಾರಗೊಂಡು ಸಾರ್ವಜನಿಕ ಗೇಲಿಗೆ ಆಹಾರವಾಗಿದೆ. ಈ ಘಟನೆ ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ಯುಪಿಎ–2 ಸರಕಾರದ ಕೇವಲ ಬಾಯುಪಚಾರದ ನಿಲುವಿನ ಪ್ರತೀಕದಂತೆಯೂ ಇದೆಯಲ್ಲವೇ?

★

ಇಂದಿರಾ ಗಾಂಧಿ ಬ್ಯಾಂಕ್ ರಾಷ್ಟ್ರೀಕರಣವನ್ನು ಮಣ್ಣುಗೂಡಿಸಿದ ಯುಪಿಎ–2 ಸಾಧನೆ !

ಯುಪಿಎ–2 ಸರಕಾರ ಕೊನೆಗೂ ಸಂಸತ್ತಿನಲ್ಲಿ ಬ್ಯಾಂಕಿಂಗ್ ಕಾನೂನುಗಳ ತಿದ್ದುಪಡಿ ಮಸೂದೆಯನ್ನು ಪಾಸು ಮಾಡಿಸಿಕೊಂಡಿದೆ– ಪ್ರಮುಖ ಪ್ರತಿಪಕ್ಷ ಬಿಜೆಪಿಯ ಕೃಪೆಯಿಂದ. ಎಡಪಕ್ಷಗಳೊಂದಿಗೆ ಎಐಎಡಿಎಂಕೆ, ತೆಲುಗುದೇಶಂ ಮತ್ತು ಬಿಜೆಡಿ ಪಕ್ಷಗಳು ಇದರ ವಿರುದ್ಧ ಮತ ಹಾಕಿದವು. ಕಳೆದ ವಾರ ಈ ಮಸೂದೆಯನ್ನು ವಿರೋಧಿಸಿ ದೇಶವ್ಯಾಪಿ ಮುಷ್ಕರ ನಡೆಸಿದ್ದರು.

ಈ ಮೂಲಕ ಕಾಂಗ್ರೆಸ್‌ನ ಮನಮೋಹನ ಸಿಂಗ್ ನೇತೃತ್ವದ ಯುಪಿಎ–2 ಸರಕಾರ 43 ವರ್ಷಗಳ ಹಿಂದೆ ಅದೇ ಕಾಂಗ್ರೆಸ್‌ನ ಇಂದಿರಾ ಗಾಂಧಿ ಸರಕಾರ ಮಾಡಿದ್ದನ್ನು ಮಣ್ಣು ಮಾಡಿದಂತಾಗಿದೆ. ಇಂದಿರಾ ಗಾಂಧಿ ಸರಕಾರ ರಾಷ್ಟ್ರೀಕರಣಕ್ಕೆ ಕೊಟ್ಟ ಒಂದು ಪ್ರಬಲ ಕಾರಣ ದೊಡ್ಡ ಬಂಡವಾಳಿಗರು ಮತ್ತು ಆಗಿನ ಬ್ಯಾಂಕಿಂಗ್ ವಲಯದ ನಡುವಿನ ಶಾಮೀಲು. ಈಗ ಯುಪಿಎ–2 ಸರಕಾರ ಪಾಸು ಮಾಡಿಸಿಕೊಂಡಿರುವ ತಿದ್ದುಪಡಿ ಅವೇ ದೊಡ್ಡ ಬಂಡವಾಳಿಗ ಉದ್ಯಮಿ ಗುಂಪುಗಳು ಹೊಸ ಖಾಸಗಿ ಬ್ಯಾಂಕುಗಳನ್ನು ಅವಕಾಶ ಮಾಡಿಕೊಟ್ಟಿದೆ! ಇಂದಿರಾ ಗಾಂಧಿಯವರಿಂದ ಸೋನಿಯ ಗಾಂಧಿಯವರ ನಾಲ್ಕು ದಶಕಗಳ ಅಂತರದಲ್ಲಿ ಕಾಂಗ್ರೆಸಿನ ತತ್ವ ತಿರುಗುಮುರುಗಾಗಿರುವುದರ ಸಂಕೇತ ಇದು.

2004 ರಲ್ಲಿ ಎನ್‌ಡಿಎ ಸರಕಾರ ಕಾಂಗ್ರೆಸ್ ಬೆಂಬಲದೊಂದಿಗೆ ಬ್ಯಾಂಕಿಂಗ್ ವಲಯದಲ್ಲಿ ಖಾಸಗಿ ಬ್ಯಾಂಕುಗಳಲ್ಲಿ 75 ಶೇ. ಎಫ್‌ಡಿಐಗೆ ಅವಕಾಶ ಕಲ್ಪಿಸಿತ್ತು. ಬ್ಯಾಂಕಿಂಗ್ ಕಾನೂನಿನಲ್ಲಿ ಮತದಾನದ ಹಕ್ಕು 10 ಶೇ.ಕ್ಕೆ ಸೀಮಿತಗೊಂಡಿತ್ತು. ಯುಪಿಎ–1 ಸರಕಾರ ಈ ಮಿತಿಯನ್ನು ತೆಗೆಯುವ ತಿದ್ದುಪಡಿಯನ್ನು ಮಂಡಿಸಿತ್ತು. ಆದರೆ ಎಡಪಕ್ಷಗಳ ವಿರೋಧದಿಂದಾಗಿ 14ನೇ ಲೋಕಸಭೆಯ ಬರ್ಖಾಸ್ತಿನೊಂದಿಗೆ ಆ ತಿದ್ದುಪಡಿ ಮಸೂದೆಯೂ ಲೋಪಗೊಂಡಿತು. ಯುಪಿಎ–2 ಸರಕಾರ ಅದನ್ನು 2011 ರಲ್ಲಿ ಪುನಃ ಮಂಡಿಸಿತು. ಬಿಜೆಪಿಯ ಯಶವಂತ ಸಿನ್ಹಾ ಅಧ್ಯಕ್ಷತೆಯ ಸ್ಥಾಯೀ ಸಮಿತಿ ಮತದಾನದ ಹಕ್ಕಿನ ಮಿತಿಯನ್ನು ಸಂಪೂರ್ಣ ತೆಗೆಯುವುದು ಬೇಡ, 26 ಶೇ.ಕ್ಕೆ ಏರಿಸಬಹುದು ಎಂದು ಶಿಫಾರಸು ಮಾಡಿತು. ಜತೆಗೆ ಈ ಹೊಸ ಮಸೂದೆಯಲ್ಲಿ ದೊಡ್ಡ ಉದ್ಯಮಿ ಗುಂಪುಗಳಿಗೆ ತಮ್ಮದೇ ಬ್ಯಾಂಕುಗಳನ್ನು ತೆರೆಯುವ ಅವಕಾಶವನ್ನು ಕಲ್ಪಿಸಿತು. ಇದಕ್ಕೆ ಬಿಜೆಪಿಯ ಆಕ್ಷೇಪವೇನೂ ಇರಲಿಲ್ಲ.

★


ಸದ್ಯ 43 ಜಿಲ್ಲೆಗಳಲ್ಲಿ ನಗದು ವರ್ಗಾವಣೆ: "ಠೀಕ್ ಹೈ?"

ಯುಪಿಎ–2 ಸರಕಾರದ ಮುಂದಿನ ತುತ್ತೂರಿ 'ನೇರ ನಗದು ವರ್ಗಾವಣೆ' ಯೋಜನೆ ಜನವರಿ 1ರಿಂದ 16 ರಾಜ್ಯಗಳ 43 ಜಿಲ್ಲೆಗಳಲ್ಲಿ ಆರಂಭವಾಗಿಯೇ ಬಿಡಲಿದೆಯಂತೆ–'ಆಧಾರ್' ಕಾರ್ಡುಗಳನ್ನು ಹೊಂದಿರುವ ಫಲಾನುಭವಿಗಳ ಸಂಖ್ಯೆ, ವಿಶೇಷವಾಗಿ ಈ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಎಷ್ಟಿದ್ದರೇನಂತೆ!

ಈ ಯೋಜನೆ ಸರಿಯಾಗಿ ಕೆಲಸ ಮಾಡಬೇಕಾದರೆ ಆಧಾರ್ ಕಾರ್ಡುದಾರರ ಡಿಜಿಟಲ್ ಮಾಹಿತಿ ನೆಲೆ ಅತ್ಯಗತ್ಯ. ಆದರೆ ಇದನ್ನು ಇನ್ನೂ ಸರಿಯಾಗಿ ಪರಿಶೀಲಿಸಿಲ್ಲ. ಕೇವಲ 25 ಶೇ. ಆಗಿದೆ. ಅಲ್ಲದೆ ಫಲಾನುಭವಿಗಳಿಗೆ ಆಧಾರ್–ಸಂಪರ್ಕಿತ ಬ್ಯಾಂಕ್ ಖಾತೆಗಳು ಇರಲೇಬೇಕಂತೆ. ಮೊದಲು 51 ಜಿಲ್ಲೆಗಳಲ್ಲಿ ಇದನ್ನು ಆರಂಭಿಸುವ ಯೋಚನೆ ಇತ್ತು. ಆದರೆ ಗುಜರಾತ್ ಮತ್ತು ಹಿಮಾಚಲ ಪ್ರದೇಶದ ವಿಧಾನಸಭಾ ಚುನಾವಣೆಗಳಿಂದಾಗಿ ಅಲ್ಲಿನ 8 ಜಿಲ್ಲೆಗಳಲ್ಲಿ ಅದು ಸಾಧ್ಯವಾಗಲಿಲ್ಲ. ಆದರೆ ಉಳಿದ 43 ಜಿಲ್ಲೆಗಳಲ್ಲೂ ಜನವರಿ 1ರಂದೇ ಆರಂಭ ಮಾಡುವುದು ಕಷ್ಟದ ಕೆಲಸ ಎನ್ನಲಾಗುತ್ತಿದೆ.

ಈ 43 ಜಿಲ್ಲೆಗಳಲ್ಲಿ ಕೆಲವು ನಗರ ಪ್ರದೇಶಗಳಲ್ಲಿ 80 ಶೇಕಡಾ ಮಂದಿಯ ಬಳಿ ಆಧಾರ್ ಕಾರ್ಡುಗಳಿವೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಇದು ಕೇವಲ 5 ಶೇ. 95 ಶೇ. ಮಂದಿಯ ಬಳಿ ಆಧಾರ್ ಕಾರ್ಡ್ ಇದ್ದರೆ ಮಾತ್ರವೇ ಈ ಯೋಜನೆ ಆರಂಭಿಸಬೇಕೆಂಬ ನಿರ್ದೇಶನವೂ ಇದೆಯಂತೆ.

ಏನೇ ಇರಲಿ, ಜನರ ಮುಂದೆ ತುತ್ತೂರಿ ಊದಲು ಸಾಧ್ಯವಿದೆ ತಾನೇ– ಅಷ್ಟೇ ತಾನೇ ಈ ಸರಕಾರಕ್ಕೆ ಬೇಕಾಗಿರುವುದು!



ವೇದರಾಜ ಎನ್.ಕೆ.

★

ಜೈತಪುರ ಪರಮಾಣು ಸ್ಥಾವರ : ಫ್ಲಾಮನ್‌ವಿಲೆಯಿಂದ ಸರಕಾರಕ್ಕೆ ಒಳ್ಳೇ ಸುದ್ದಿ ಇಲ್ಲ

ಪರಮಾಣು ವಿದ್ಯುತ್ ಸ್ಥಾವರಗಳೇ ವಿದ್ಯುತ್ ಸಮಸ್ಯೆಗೆ ದಿವ್ಯೌಷಧ ಎಂದು ನಂಬಿಸುತ್ತಿರುವ ಯುಪಿಎ ಸರಕಾರ ಭಾರೀ ಪ್ರತಿಭಟನೆಯನ್ನೂ ಲೆಕ್ಕಿಸದೆ ಮಹಾರಾಷ್ಟ್ರದ ಜೈತಪುರದಲ್ಲಿ ಆರು ಫ್ರಾನ್ಸಿನ ಅರೇವ ಕಂಪನಿಯ ಆರು ಇಪಿಆರ್ ಪರಮಾಣು ಸ್ಥಾವರಗಳನ್ನು ಖರೀದಿಸಿಯೇ ಖರೀದಿಸುತ್ತೇನೆ ಎಂದು ಹೊರಟಿದೆ. ಆದರೆ ಇಂತಹ ಸ್ಥಾವರ ಈ ವೇಳೆಗೆ ಕಾರ್ಯಾರಂಭ ಮಾಡಬೇಕಾಗಿದ್ದ ಫ್ರಾನ್ಸಿನ ಫ್ಲಾಮನ್‌ವಿಲೆಯ ಅನುಭವ ಜೈತಪುರ ಸ್ಥಾವರವನ್ನು ವಿರೋಧಿಸುತ್ತಿರುವವರ ಆತಂಕಗಳನ್ನೆಲ್ಲ ನಿಜಗೊಳಿಸುತ್ತಿದೆ.

ಫ್ಲಾಮನ್‌ವಿಲೆಯಲ್ಲಿ ಅರೇವ ರೂಪಿಸಿರುವ ಸ್ಥಾವರದ ಆರಂಭಿಕ ಅಂದಾಜುವೆಚ್ಚ 3.3 ಬಿಲಿಯ ಯುರೋಗಳು. ಕಳೆದ ವರ್ಷ ಈ ಅಂದಾಜು 6.5 ಬಿಲಿಯ ಯುರೋ ಎಂದು ಅಂದಾಜು ಮಾಡಲಾಗಿತ್ತು. ಈಗ ಅದು 8.5 ಬಿಲಿಯ ಯುರೋಗಳಿಗೆ ಏರಿದೆ. ಅಲ್ಲದೆ ಆ ಸ್ಥಾವರ ಕಾರ್ಯಾರಂಭದಲ್ಲಿ ನಾಲ್ಕು ವರ್ಷಗಳ ವಿಳಂಬವಾಗಲಿದೆ ಎಂದೂ ತಿಳಿದು ಬಂದಿದೆ. ವಾಸ್ತವವಾಗಿ ಇದೇ ಕಂಪನಿಯ ಇಂತಹ ಮೊದಲ ಸ್ಥಾವರವೂ ಫಿನ್‌ಲ್ಯಾಂಡಿನಲ್ಲಿ ಇನ್ನೂ ನಿರ್ಮಾಣ ಹಂತದಲ್ಲಿದ್ದು ಹಲವು ವರ್ಷಗಳ ವಿಳಂಬ ಕಂಡಿದೆ. 2009 ರಲ್ಲಿ ಕಾರ್ಯಾರಂಭ ಮಾಡಬೇಕಾಗಿದ್ದ ಈ ಸ್ಥಾವರ 2014 ರ ಮೊದಲು ಪೂರ್ಣಗೊಳ್ಳುವ ಸಂಭವ ಕಾಣಿಸುತ್ತಿಲ್ಲ.

ಅರೇವ ಕಂಪನ ಜೈತಪುರದ ಸ್ಥಾವರದ ಕಾಂಟ್ರಾಕ್ಟು ಪಡೆದಾಗ ತನಗೆ ಈಗಾಗಲೇ ನಾಲ್ಕು ಇಂತಹ ಇಪಿಆರ್ ಸ್ಥಾವರಗಳ ಅನುಭವ ಇದೆ ಎಂದಿತ್ತು. ಆದರೆ ಇವು ಯಾವುವೂ ಕಾರ್ಯಾರಂಭ ಮಾಡಿಲ್ಲ. ಚೀನಾದಲ್ಲಿನ ಅದರ ಎರಡು ಸ್ಥಾವರಗಳು, ತೈಶನ್–1 ಮತ್ತು ತೈಶನ್–2 ಯೋಜಿತ ಅವಧಿಯಲ್ಲಿ ಯೋಜಿತ ವೆಚ್ಚದೊಳಗೇ ನಿರ್ಮಾಣಗೊಳ್ಳುತ್ತಿವೆ ಎಂದೇನೋ ಅದು ಹೇಳಿಕೊಳ್ಳುತ್ತಿದೆ. ಆದರೆ ಇದಕ್ಕೆ ಕಾರಣ ಅರೇವಾ ಕಂಪನಿಯ ಕಾರ್ಯ ದಕ್ಷತೆಯಲ್ಲ, ಚೀಣಾ ಸರಕಾರದ ಕಟ್ಟುನಿಟ್ಟಾದ ಉಸ್ತುವಾರಿಯೇ ಕಾರಣ. ಅದು ತಂತ್ರಜ್ಞಾನದ ಸಂಪೂರ್ಣ ವರ್ಗಾವಣೆಯನ್ನು ಪಡೆಯುವ ಹರಸಾಹಸ ನಡೆಸಿ ಅದರಲ್ಲಿ ಯಶಸ್ವಿಯಾಗಿದೆ. ಈ ಹಿನ್ನೆಲೆಯಲ್ಲಿ 9,000 ಚೀನೀ ಕಾರ್ಮಿಕರು ದಿನದ 24 ಗಂಟೆ, ವಾರದ ಏಳೂ ದಿನ 10 ಗಂಟೆಗಳ ಪಾಳಿಗಳಲ್ಲಿ ಕೆಲಸ ಮಾಡುತ್ತಿರುವುದರಿಂದಲೇ ಇದು ಸಾಧ್ಯವಾಗಿರುವುದು. ಭಾರತ ಸರಕಾರ ತಂತ್ರಜ್ಞಾನದ ವರ್ಗಾವಣೆಯನ್ನು ಕೇಳಲೂ ನಿರಾಕರಿಸಿದೆ. ಆದ್ದರಿಂದ ಜೈತಪುರದ ಸ್ಥಾವರಗಳ ಅನುಭವ ಅರೇವಾದ ಇಪಿಆರ್ ಸ್ಥಾವರಗಳ ಫಿನ್‌ಲ್ಯಾಂಡ್ ಮತ್ತು ಸ್ವತಃ ಫ್ರಾನ್ಸಿನ ಅನುಭವಕ್ಕಿಂತ ಭಿನ್ನವಾಗಿರಲು ಸಾಧ್ಯವಿಲ್ಲ. ಇದಕ್ಕೆ ಬೆಲೆ ತೆರಬೇಕಾದವರು ಭಾರತದ ಜನಸಾಮಾನ್ಯರು ಎಂದು ಬೇರೆ

ಪುಟ 15 ಕ್ಕೆ

ಕಾಂ. ಪಿ.ಜಿ.ಗೊಂದು ನುಡಿನಮನ

ಮರೆಯಾಯಿತು ಜನತೆಗಾಗಿ ಮಿಡಿಯುತ್ತಿದ್ದ ಚೇತನ

ಪಿ.ಜಿ. ಎಂದೇ ಖ್ಯಾತರಾದ ಕೇರಳದ ಸಂಗಾತಿ ಪಿ. ಗೋವಿಂದನ್ ಪಿಳ್ಳೈ ಒಬ್ಬ ಅಸಾಧಾರಣ ವ್ಯಕ್ತಿ. ಮಾರ್ಕ್ಸ್‌ವಾದದ ಆಳವಾದ ಅಧ್ಯಯನ, ಮಾನವೀಯ ನಡವಳಿಕೆಗಳಿಗೆ ಖ್ಯಾತರಾಗಿದ್ದ ಕಾಮ್ರೇಡ್ ಪಿ.ಜಿ.ಯವರ ವ್ಯಕ್ತಿತ್ವ, ಕರ್ನಾಟಕವೂ ಸೇರಿದಂತೆ ದೇಶದ ಎಡ ಚಳುವಳಿಗೆ ಅವರು ನೀಡಿದ ಕೊಡುಗೆಯನ್ನು ಹಾಗೂ ತಮ್ಮೊಂದಿಗಿನ ಒಡನಾಟವನ್ನು ಇಲ್ಲಿ ನೆಪಿಸಿಕೊಂಡಿದ್ದಾರೆ ಕರ್ನಾಟಕ ರಾಜ್ಯದ ಹಿರಿಯ ಸಂಗಾತಿ ಕಾಮ್ರೇಡ್ ವಿಜೆಕೆ ನಾಯರ್.

ವಿಜೆಕೆ ನಾಯರ್

ಪಿ.ಜಿ. ಇನ್ನಿಲ್ಲ. ಅವರು ಡಿಸೆಂಬರ್ ತಿಂಗಳ ಆರಂಭದಲ್ಲಿ ನಿಧನರಾದರು. ಮಾರ್ಕ್ಸ್‌ವಾದ ಮತ್ತು ಸಂಸ್ಕೃತಿಗೆ ಬದ್ಧರಾದ ಕೆಲವೇ ಬುದ್ಧಿಜೀವಿಗಳಲ್ಲಿ ಅವರೂ ಒಬ್ಬರಾಗಿದ್ದರು. ಅಂತಾರ್‍ರಾಷ್ಟ್ರೀಯ ರಾಜಕೀಯ ಬೆಳವಣಿಗೆಗಳನ್ನು ತುಂಬಾ ಸೂಕ್ಷ್ಮವಾಗಿ ಅವಲೋಕಿಸುವವರಾಗಿದ್ದರು. ಮಲಯಾಳಂ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಪ್ರಭುತ್ವ ಹೊಂದಿದ್ದ ಅವರ ಸಂಪರ್ಕಕ್ಕೆ ಬಂದವರೆಲ್ಲರೂ ಅವರ ಜ್ಞಾನ ಹಾಗೂ ಬದ್ಧತೆಗೆ ತಲೆದೂಗದೇ ಇರುತ್ತಿರಲಿಲ್ಲ.

ಅವರ ನಿಧನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಮಲಯಾಳಂಗೆ ಮಾತ್ರ ಉಂಟಾದ ನಷ್ಟವಲ್ಲ, ಹೊಸ ಸಮಾಜ ರಚನೆಯ ಸಮರದಲ್ಲಿ ತೊಡಗಿಸಿಕೊಂಡಿರುವ ಎಲ್ಲ ಜನರಿಗೆ ಆದ ನಷ್ಟ.

ಪಿ. ಗೋವಿಂದ ಪಿಳ್ಳೆ ಒಂದು ಶ್ರೀಮಂತ ನಾಯರ್ ಕುಟುಂಬದಲ್ಲಿ ಜನಿಸಿದರು. ಸಂಯುಕ್ತ ಕೇರಳದ ಕೊಚ್ಚಿ ಸಮೀಪವಿದ್ದ, ಅಂದಿನ ತಿರುವಿತಾಂಕೂರು ರಾಜ್ಯದ ಉತ್ತರಭಾಗದ ಪೆರುಂ ಪಾವೂರು ಬಳಿಯ ಪಾಳೇಗಾರರಾಗಿದ್ದರು ಅವರ ಕುಟುಂಬದವರು. ಅವರ ಕುಟುಂಬ ತಮ್ಮ ಒಕ್ಕಲುಗಳಿಂದ 'ಆದಾಯ' ಬರುವಂಥ ಕಾಣಿಕೆಗಳನ್ನು ಪಡೆಯುವ ಪಾರಂಪರಿಕ ಪದ್ಧತಿಯನ್ನು ಅನುಸರಿಸುತ್ತಿತ್ತು. ಅವರ ಒಕ್ಕಲುಗಳಲ್ಲಿ ಕೆಳ ಜಾತಿಯ ಜನರೇ ಹೆಚ್ಚಾಗಿದ್ದರು. ಬಡ ರೈತರು ತಲೆಮೇಲೆ ತಮ್ಮ ಉತ್ಪನ್ನಗಳ ಭಾರದ ಮೂಟೆಗಳನ್ನು ಹೊತ್ತುಕೊಂಡು ಬಂದು ಭೂಮಾಲಿಕರ ಅಂದರೆ ತಮ್ಮ ಮನೆಯ ಮುಂದೆ ಕೈಕಟ್ಟಿಕೊಂಡು ನಿಂತು ಅವುಗಳನ್ನು ತನ್ನ ತಂದೆಗೆ ನೀಡುತ್ತಿದ್ದುದನ್ನು ಬಾಲಕ ಗೋವಿಂದ ನೋಡುತ್ತಿದ್ದ.

ತಮ್ಮ ಮನೆಯನ್ನು ಸಂಭಾಳಿಸಲು ರೈತರು ಕೃಷಿ ಉತ್ಪನ್ನಗಳನ್ನು ಹೊತ್ತುತರುತ್ತಿದ್ದುದನ್ನು ನೋಡಿ ಬಾಲಕನ ಮನಸ್ಸು ಕಸಿವಿಸಿಗೊಳ್ಳುತ್ತಿತ್ತು. ಇದನ್ನು ಪ್ರತಿಭಟಿಸಿದ ಆತ, ಈ ಪದ್ಧತಿಯನ್ನು ನಿಲ್ಲಿಸಲು ಆಗುವುದಿಲ್ಲವೇ ಎಂದು ನೇರವಾಗಿ ತಂದೆಯನ್ನೇ ಪ್ರಶ್ನಿಸುತ್ತಾನೆ. ಉದಾರವಾದಿಯಾಗಿದ್ದ ಗೋವಿಂದನ ತಂದೆ, 'ಒಣಕ್ಕಳ್‌ಚ' ಎಂದು ಕರೆಯಲಾಗುತ್ತಿದ್ದ ಆ ಪದ್ಧತಿಯನ್ನು ನಿಲ್ಲಿಸಿಯೇ ಬಿಟ್ಟರು.

ಬಹುಶಃ ಇದು ಪಿ.ಜಿ.ಯವರ ಮೊದಲ ಯಶಸ್ಸು ಆಗಿದೆ. ಬೆಳೆಯುತ್ತಾ ಉನ್ನತ ವಿದ್ಯಾಭ್ಯಾಸ ಪಡೆಯುತ್ತಿದ್ದ ಅವರು ಸ್ವಾತಂತ್ರ್ಯ ಸಂಗ್ರಾಮದ ವೇಳೆ ಯರವಾಡ ಜೈಲಿನಲ್ಲಿ ಬಂಧಿಯಾದರು. ಯರವಾಡ ಜೈಲಿನಲ್ಲಿ 1942ರಲ್ಲಿ ಕಾಮ್ರೇಡ್ ಎನ್.ಕೆ.ಉಪಾಧ್ಯಾಯ ಅವರು ಪಿ.ಜಿ.ಯವರೊಂದಿಗೆ ಸಹ ಖೈದಿ ಆಗಿದ್ದರು.

ಕಾಮ್ರೇಡ್ ಇ.ಎಂ.ಎಸ್. ನಂಬೂದರಿಪಾಡ್ 1957ರಲ್ಲಿ ಮುಖ್ಯಮಂತ್ರಿಯಾಗಿದ್ದಾಗ ಪಿ.ಜಿ. ಅತ್ಯಂತ ಕಿರಿಯ ಶಾಸಕ ಆಗಿದ್ದರು. ಅವರು ಇನ್ನೊಂದು ಅವಧಿಗೂ ಶಾಸಕರಾಗಿ ಆಯ್ಕೆಯಾಗಿದ್ದರು. ಆದರೆ, ಪಿ.ಜಿ.ಯವರು ಸಂಸದೀಯ ಕ್ಷೇತ್ರದಲ್ಲಿ ಸಾಧನೆ ಮಾಡುವುದಕ್ಕಿಂತ ಹೆಚ್ಚಾಗಿ ಸಾಹಿತ್ಯ, ಕಲೆ, ಬರವಣಿಗೆ ಮತ್ತಿತರ ವಿಭಾಗಗಳಲ್ಲಿ ತಮ್ಮ ಛಾಪನ್ನು ಮೂಡಿಸಿದರು.


ತಮ್ಮಲ್ಲಿ ಇರುವ ಹಣದಿಂದ ಪುಸ್ತಕಗಳನ್ನು ಖರೀದಿಸುವ 'ದೌರ್ಬಲ್ಯ' ಪಿಜಿಯವರದಾಗಿತ್ತು. ಅವರು ಭೇಟಿ ನೀಡದ ಪುಸ್ತಕ ಅಂಗಡಿಗಳೇ ಇಲ್ಲ. ಯಾವುದೇ ವಿಷಯದಲ್ಲಾದರೂ ಸರಿಯೇ, ಆ ವಿಷಯದ ಮೇಲಿನ ಪ್ರತಿಯೊಂದು ಪುಸ್ತಕವನ್ನು ಅವರು ಸಂಗ್ರಹಿಸುತ್ತಿದ್ದರು.

ಪಿ.ಜಿ.ಯವರು ಓದಿದಷ್ಟನ್ನು ನಾನು ಓದಿದ್ದರೆ..... – ಇಎಂಎಸ್

ಕಾರ್ಲ್‌ಮಾರ್ಕ್ಸ್ ಅವರ ವೈಯಕ್ತಿಕ ಜೀವನದ ಬಗ್ಗೆ ನಾನು ಸುಮಾರು 20 ವರ್ಷಗಳ ಹಿಂದೆ ಪಿ.ಜಿ.ಯವರನ್ನು ವಿಚಾರಿಸಿದಾಗ ಮಾರ್ಕ್ಸ್ ಜೀವನ ಚರಿತ್ರೆ ಕುರಿತ ನೂರಕ್ಕೂ ಹೆಚ್ಚು ಪುಸ್ತಕಗಳು ತನ್ನಲ್ಲಿ ಅದಾಗಲೇ ಇವೆ ಎಂದು ಪಿ.ಜಿ. ಹೇಳಿದ್ದರು. ಅವನ್ನು ಓದುವುದರಿಂದ ಅನುಮಾನವನ್ನು ಪರಿಹರಿಸಿಕೊಳ್ಳಬಹುದು ಎಂದಿದ್ದರು. ಪಿ.ಜಿ.ಯವರು ಓದಿದಷ್ಟನ್ನು ನಾನು ಓದಿದ್ದರೆ ನಾನು ಜಗತ್ತನ್ನೇ ಬದಲಾಯಿಸ ಬಹುದಿತ್ತು ಎಂದು ಒಮ್ಮೆ ಇ.ಎಂ.ಎಸ್. ಹೇಳಿದ್ದು ಪಿಜಿಯವರ ಓದಿನ ವಿಸ್ತಾರಕ್ಕೆ ಸಾಕ್ಷಿಯಾಗಿದೆ. ಕೇರಳವನ್ನು ಬೌದ್ಧಿಕವಾಗಿ ಬದಲಾಯಿಸಿದ ಹಾಗೂ ಸ್ವತಃ ನೂರು ಸಂಪುಟಗಳ ಲೇಖಕರಾದ ಸಂಗಾತಿಯಿಂದಲೇ ಈ ರೀತಿಯ ಟಿಪ್ಪಣಿ ಬಂದಿರುವುದು ಪಿ.ಜಿ.ಯವರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಪಿ.ಜಿ.ಯವರು ಕೇರಳದಲ್ಲಿನ ಪ್ರಗತಿಪರ ಸಾಹಿತ್ಯ ಚಳವಳಿಗೆ ಆಧಾರವಾದ 'ಪೆರುಂಬವೂರು ರೇಖಾ'ದ ಶಿಲ್ಪಿ. ಮಾರ್ಕ್ಸ್‌ವಾದಕ್ಕೆ ಅಂತೋನಿಯೋ ಗ್ರಾಮ್ಸ್ಕಿ ಕೊಡುಗೆಯನ್ನು ಇ.ಎಂ.ಎಸ್.ರಿಗೆ ಪರಿಚಯಿಸಿದ್ದ ಪಿ.ಜಿ.ಯವರು, ಇ.ಎಂ.ಎಸ್. ಜತೆಗೂಡಿ ಗ್ರಾಮ್ಸ್ಕಿ ಬಗ್ಗೆ ಒಂದು ಕೃತಿ ರಚಿಸಿದ್ದರು. ಪಿಜಿ ಅನೇಕ ಪುಸ್ತಕಗಳನ್ನು, ಲೇಖನಗಳನ್ನು ಬರೆದಿದ್ದಾರೆ. ಭಾಷಣಗಳನ್ನು ಮಾಡಿದ್ದಾರೆ. ಸಾಹಿತ್ಯ, ಸೌಂದರ್ಯ ಶಾಸ್ತ್ರ ಮೊದಲಾದ ವಿಷಯಗಳಲ್ಲಿ ಅವರ ಮಾತು ಅಧಿಕಾರಯುತವಾಗಿತ್ತು. ಅವರು ಇ.ಎಂ.ಎಸ್.ರ ಕೃತಿಗಳ ಸಂಗ್ರಹದ ಸಂಪಾದಕ ರಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಪಿ.ಜಿ. ಒಬ್ಬ ಉತ್ತಮ ಪತ್ರಕರ್ತರೂ ಹೌದು. ಅವರು 'ದೇಶಾಭಿಮಾನಿ'ಯ ಸಂಪಾದಕರಾಗಿದ್ದರು. ಕೋಳಿಕೋಡ್ ಕಾನ್ವೆಂಟ್ ರಸ್ತೆಯ



ದೇಶಾಭಿಮಾನಿ ಕಚೇರಿ ಪ್ರಗತಿಪರ ಲೇಖಕರಿಗೆ ಅಚ್ಚುಮೆಚ್ಚಿನ ತಾಣವಾಗಿತ್ತು.

ಈ ಲೇಖಕನನ್ನೂ ಪ್ರಗತಿಪರ ಸಾಹಿತ್ಯದತ್ತ ಸೆಳೆದಿದ್ದರು ಪಿ.ಜಿ. ತುರ್ತುಪರಿಸ್ಥಿತಿಯ ದಿನಗಳಿಗಿಂತಲೂ ಹಿಂದೆ ನನ್ನ ಹಾಗೂ ಪಿ.ಜಿ.ಯವರ ವೈಯಕ್ತಿಕ ಒಡನಾಟ ಆರಂಭವಾಗಿತ್ತು. ಆಗ ಅವರು 'ದೇಶಾಭಿಮಾನಿ'ಯ ಸಂಪಾದಕರಾಗಿದ್ದರು. ಕೋಳಿಕ್ಕೋಡ್‌ನಿಂದ ಆಗವರು ಕಾರ್ಯ ನಿರ್ವಹಿಸುತ್ತಿದ್ದರು. ಪಿ.ಜಿ., ಎಂ.ಎನ್.ಕುರುಪ್ ಮತ್ತು ಚೆರುಕಾಡ್ ಪ್ರಗತಿಪರ ಸಾಹಿತ್ಯ ಚಳವಳಿಯತ್ತ ಕಾರ್ಯ ನಿರ್ವಹಿಸುವಂತೆ ನನ್ನ ಆಸಕ್ತಿ ಹುಟ್ಟಿಸಿದರು. ಓದುಗರು ಮತ್ತು ಲೇಖಕ ವೇದಿಕೆಯನ್ನು ಸ್ಥಾಪಿಸಲು ಅವರು ನಮ ನೆರವಾದರು. ಈ ವೇದಿಕೆ ಸಕ್ರಿಯವಾ ಬೆಂಗಳೂರಿನಲ್ಲಿ ವಿಚಾರಸಂಕಿರಣ ಮೊದ ಕಾರ್ಯಕ್ರಮಗಳನ್ನು ನಡೆಸಿತು.

ಕರ್ನಾಟಕದೊಂದಿಗೆ ಪಿ.ಜಿ. ಒಡನಾಟ

ತುರ್ತು ಪರಿಸ್ಥಿತಿಯ ನಂತರ, ಕರ್ನಾಟ ವಿಶ್ವವಿದ್ಯಾಲಯದಲ್ಲಿ ಜಾನಪದ ಸಂಶೋಧನೆಗಾಗಿ ಪಿ.ಜಿ.ಯವರು ಫೆಲೋಶಿಪ ಒಪ್ಪಿಕೊಂಡಿದ್ದರು. ಯುವ ವಿದ್ಯಾರ್ಥಿಗ ಒಂದು ತಂಡವನ್ನು ಬೆಳೆಸಿದ್ದರಿಂದ ಅವರ ಎಸ್.ಎಫ್.ಐ. ನಾಯಕರಾಗಿ ಬೆಳೆಯಲು ಸಹಾಯಕವಾಯಿತು. ಅವರಲ್ಲಿ ಪಿ.ಜಿ. ಬಿತ್ತಿದ್ದ ಬೀಜ ಮೊಳಕೆಯೊಡೆದು ಬೆಟರ್‌ಮೆಂಟ್ ಲೆವಿ ವಿರುದ್ಧದ ಮಲಪ್ರಭಾ ಚಳವಳಿಯಾಗಿ ಬೆಳೆದು ನಿಂತಿತು. ಈ ಚಳವಳಿ ಹಾಗೂ ಬೆಂಗಳೂರಿನ ದುಡಿಯುವ ವರ್ಗದ ಚಳವಳಿ ಗುಂಡೂರಾವ್ ಸರಕಾರವನ್ನು ಅಧಿಕಾರಚ್ಯುತಿಗೊಳಿಸ ತನ್ಮೂಲಕ 1948ರಿಂದ 1983ರವರೆಗೆ ಕರ್ನಾಟಕದಲ್ಲಿ ನಿರಂತರವಾಗಿದ್ದ ಕಾಂಗ್ರೆಸ್ ಆಡಳಿತವನ್ನು ಕೊನೆಗೊಳಿಸುವಲ್ಲಿ ನೆರವಾಯಿತು.

ಯಾವುದೇ ಸಂವಾದ, ವಿಚಾರ ಸಂಕಿರಣ ಅಥವಾ ಪತ್ರಕರ್ತರಿಗೆ ತರಗತಿ ಮತ್ತಿತರ ಕಾರ್ಯಚಟುವಟಿಕೆಗಳಿಗೆ ಕಾಮ್ರೇಡ್ ಪಿ.ಜಿ. ನಮಗೆ ಸದಾ ಲಭ್ಯರಾಗುತ್ತಿದ್ದರು. ಅವರು ಹೇಳಿದ್ದ ಮಾತುಗಳು ನನಗೆ ಇನ್ನೂ ನೆನಪಾಗುತ್ತಿದೆ. ಪತ್ರಕರ್ತರು ಮನುಷ್ಯರ ಅಗತ್ಯಗಳಿಗೆ ಹಾಗೂ ಕಾಳಜಿಗೆ ಸ್ಪಂದಿಸಬೇಕು ನಿಜ, ಆದರೆ ಅದಕ್ಕಷ್ಟೇ ಸೀಮಿತವಾಗವೆ. ಓದುಗರ ಆಸಕ್ತಿಯನ್ನೂ ಅವರು ಕಡೆಗಣಿಸಬಾರದು ಎಂದು ಅವರು ಹೇಳುತ್ತಿದ್ದರು. ಒಂದು ನಾಯಿ ಅನೇಕ ಜನರಿಗೆ ಕಚ್ಚಿದರೆ ... ಸುದ್ದಿಯಾಗಲಾರದು, ಆದರೆ ಒಬ್ಬ ಮನುಷ್ಯ ನಾಯಿಗೆ ಕಚ್ಚಿದರೆ ಅದು ದೊಡ್ಡ ಸುದ್ದಿಗೆ ಅರ್ಹ ಎಂಬ ಉದಾಹರಣೆ ನೀಡುತ್ತಿದ್ದರು. 1970ರ ದಶಕದಲ್ಲಿ ದೇಶಾಭಿಮಾನಿಯ ಮುದ್ರಣದ ದಯನೀಯ ಸ್ಥಿತಿಯನ್ನು ವಿವರಿಸುತ್ತಿದ್ದ ಅವರು, ದೇಶಾಭಿಮಾನಿಯ ಪ್ರಪ್ರಥಮ ರೋಟರಿ ಮುದ್ರಣಾಲಯ ಖರೀದಿಸಲು ಲೇಖಕರ ನೆರವನ್ನು ಕೋರಿದ್ದರು. ಈಗ ದೇಶಾಭಿಮಾನಿ ಅನೇಕ ಕೇಂದ್ರಗಳಿಂದ ಅತ್ಯಾಧುನಿಕ ಮುದ್ರಣ ಯಂತ್ರಗಳೊಂದಿಗೆ ಪ್ರಕಟವಾಗುತ್ತಿದೆ.

ಪಿ.ಜಿ. ಅನೇಕ ಸಂದರ್ಭಗಳಲ್ಲಿ ಶಿಸ್ತುಕ್ರಮಕ್ಕೆ ಒಳಗಾದರು. ಕಾರ್ಮಿಕ ವರ್ಗದ ಪಕ್ಷದ ಕಟ್ಟುನಿಟ್ಟಿನ ಸಂಘಟನಾತ್ಮಕ ಸ್ವರೂಪಕ್ಕೆ ಹೊಂದಿಕೊಳ್ಳುವುದು ಅವರಿಗೆ ಕಷ್ಟವಾ...

ಪುಟ 15 ಕ್ಕೆ

ಪಡಿತರ ಅವ್ಯವಸ್ಥೆ ಸರಿಪಡಿಸಲು ಡಿವೈಎಫ್ಐ ಆಗ್ರಹ.....

ಪುಟ 11 ರಿಂದ

ಸಚಿವರೂ ಆದ ಆನಂದ್ ಸಿಂಗ್ ಅವರ ಮನೆಗೆ. ಮನೆಯಲ್ಲಿ ಸಚಿವರು ಇರಲಿಲ್ಲ. ಜನ ಕೇಳಬೇಕಲ್ಲ. ಸರಿ ಸಚಿವರು ಪ್ರತಿಭಟನಾಕಾರರನ್ನು ಉದ್ದೇಶಿಸಿ ದೂರದ ಜಾಗದಿಂದಲೇ ಮೊಬೈಲ್‌ನಲ್ಲಿ ಮಾತನಾಡಿ ಸಮಸ್ಯೆಗಳ ಪರಿಹಾರಕ್ಕೆ ಸರ್ಕಾರದ ಮಟ್ಟದಲ್ಲಿ ಪ್ರಯತ್ನಿಸುವುದಾಗಿಯೂ ಮತ್ತು ಸಾಧ್ಯವಾದಷ್ಟೂ ಬೇಗ ಚಳುವಳಿಗಾರರ ಪ್ರತಿನಿಧಿಗಳೊಂದಿಗೆ ಚರ್ಚೆ ನಡೆಸಲು ಸಭೆ ಕರೆಯುವುದಾಗಿಯೂ ಭರವಸೆ ನೀಡಿದರು. ಸಚಿವರ ಮಾತುಗಳು ಧ್ವನಿವರ್ಧಕದ ಮೂಲಕ ಜನರ ಕಿವಿಗಳಿಗೂ ತಲುಪಿದವು. ತಹಸೀಲ್ದಾರರು ಸ್ಥಳಕ್ಕೆ ಬಂದು ಪ್ರತಿಭಟನೆಕಾರರ ಮನವಿ ಪತ್ರವನ್ನು ಸ್ವೀಕಾರ ಮಾಡಿದರು. ರೇಷನ್ ಕಾರ್ಡ್ ವಂಚಿತ ಸಾವಿರಾರು ಜನರು ತಮ್ಮ ಅರ್ಜಿಗಳನ್ನು ಅಲ್ಲಿಯೇ ಸ್ವೀಕರಿಸಬೇಕೆಂದು ಪಟ್ಟು ಹಿಡಿದರು. ಇಲ್ಲವಾದಲ್ಲಿ ಸ್ಥಳದಿಂದ ಕದಲುವುದೇ ಇಲ್ಲವೆಂದು ತಮ್ಮ ದೃಢ ನಿರ್ಧಾರವನ್ನು ಘೋಷಿಸಿದರು.

ಮೊದಲು ನೇರವಾಗಿ ಅರ್ಜಿ ಸ್ವೀಕಾರ ಮಾಡುವುದಿಲ್ಲ ಎನ್ನುತ್ತಿದ್ದ ತಹಸೀಲ್ದಾರರು ತಾಂತ್ರಿಕ ಸಮಸ್ಯೆಯನ್ನು ಹೇಳಿ ಸಾಂಕೇತಿಕವಾಗಿ ಕೆಲವು ಅರ್ಜಿಗಳನ್ನು ಸ್ಥಳದಲ್ಲೇ ಸ್ವೀಕಾರ ಮಾಡಿದರು. ಉಳಿದ ಅರ್ಜಿಗಳನ್ನು ಸಂಗ್ರಹಿಸಿ ಕಛೇರಿಯಲ್ಲಿ ಸಲ್ಲಿಸಿದಲ್ಲಿ ಅವನ್ನು ಸ್ವೀಕರಿಸುವುದಾಗಿ ತಿಳಿಸಿದರು. ಈ ಸಂದರ್ಭದಲ್ಲಿ ಡಿವೈಎಫ್ಐನ ಹೊಸಪೇಟೆ ತಾಲ್ಲೂಕು ಸಮಿತಿಯ ಅಧ್ಯಕ್ಷರಾದ ಬಿ. ಮಹೇಶ್, ಕಾರ್ಯದರ್ಶಿ ಯಲ್ಲಾಲಿಂಗ, ಉಪಾಧ್ಯಕ್ಷರುಗಳಾದ ಕೆ.ರಮೇಶ್, ಜಿ.ಕುಲ್ಲಯಪ್ಪಾ, ಸಹ ಕಾರ್ಯದರ್ಶಿಗಳಾದ ಕಲ್ಯಾಣಯ್ಯ, ಬಿ. ತಿರುಕಪ್ಪ, ಖಜಾಂಜಿ ಇ. ಮಂಜುನಾಥ್ ಮುಂತಾದ ಮುಖಂಡರುಗಳು ಮಾತನಾಡಿದರು. ಕೆ.ಎಂ. ಸಂತೋಷ್, ಹುಲುಗಪ್ಪ, ಜೆ.ರಮೇಶ್, ಕೆ.ಹನುಮಪ್ಪ, ಚೌಡಪ್ಪ, ಹುಸೇನ್.ಎಂ., ಶಿವಕುಮಾರ್.ಜೆ, ಸೇವಾನಂದ, ಹೆಚ್. ವೆಂಕಟೇಶಲು, ಸೋಮೇಶ್. ಮುಂತಾದವರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಇದೇ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ತರಲು ಉದ್ದೇಶಿಸಿರುವ ನೇರ ನಗದು ಯೋಜನೆಯನ್ನು ಕರ್ನಾಟಕ ರಾಜ್ಯ ಸರ್ಕಾರ ವಿರೋಧಿಸಬೇಕು ಮತ್ತು ನಮ್ಮ ಕರ್ನಾಟದಲ್ಲಿ ಜಾರಿ ಮಾಡಲು ಬಿಡ ಬಾರದು.ತಾತ್ಕಾಲಿಕ ಪಡಿತರ ಚೀಟಿಯನ್ನು ಹೊಂದಿರುವ ಕಾರ್ಡ್‌ದಾರರಿಗೆ ಹೊಸ ಕಾರ್ಡ್‌ಗಳನ್ನು ಕೊಡುವವರೆಗೂ ರೇಷನ್ ವ್ಯವಸ್ಥೆ ಮಾಡಬೇಕು ಎಂದೂ ಸಹ ಮುಖಂಡರು ಆಗ್ರಹಿಸಿದರು.

ಡಿವೈಎಫ್ಐ ಹೊಸಪೇಟೆ ತಾಲೂಕು ಸಮಿತಿಯು ಸಲ್ಲಿಸಬೇಕಾದ ಉಳಿದ ಅರ್ಜಿಗಳನ್ನು ವಾರ್ಡುವಾರು ವಿಭಜಿಸಿ ಕಛೇರಿಯಲ್ಲಿ ಸಲ್ಲಿಸುವ ಕಾರ್ಯಕ್ರಮವನ್ನು ಜನವರಿ 1, 2013 ರಂದು ಯೋಜಿಸಿದೆ. ಅಷ್ಟು ಮಾತ್ರವಲ್ಲ. ಇದು ಒಂದೆರಡು ಪ್ರತಿಭಟನೆ; ಮನವಿ ಪತ್ರಗಳ ಸಲ್ಲಿಕೆಗೆ ಬಗೆ ಹರಿಯುವ ಪ್ರಶ್ನೆ ಅಲ್ಲ ಎಂಬುದನ್ನು ಬಲ್ಲ ಡಿವೈಎಫ್ಐ ದೀರ್ಘಕಾಲೀನವಾದ ವ್ಯವಸ್ಥಿತವಾದ ಚಳುವಳಿ ಮುಂದುವರೆಸಲು ಅಗತ್ಯವಾದ ರೀತಿಯಲ್ಲಿ ಸ್ಥಳೀಯ ಮಟ್ಟಗಳಲ್ಲಿ 'ಆಹಾರ ಭದ್ರತಾ ಸಮಿತಿ'ಗಳನ್ನು ರಚಿಸಿ ಇದನ್ನೊಂದು ಬೃಹತ್ ಜನಾಂದೋಲನವನ್ನಾಗಿಸಲು ತೀರ್ಮಾನಿಸಿದೆ. ಸಿದ್ದತೆಗಳನ್ನು ನಡೆಸಿದೆ.

...ಹೋರಾಟಗಳು ತೀವ್ರಗೊಳ್ಳುವ ವರ್ಷವಾಗಲಿ

ಪುಟ 7 ರಿಂದ

ಫಲವತ್ತಾದ ನೆಲೆಯನ್ನು ಒದಗಿಸುತ್ತದೆ. ಪ್ರತಿಗಾಮಿ ಪ್ರವೃತ್ತಿಗಳು ಇದರಿಂದ ಇನ್ನಷ್ಟು ಬಲಿಷ್ಟಗೊಳ್ಳುತ್ತವೆ. ಮುಂಬರುವ ವರ್ಷದಲ್ಲಿ ಇದನ್ನು ದೃಢವಾಗಿ ಎದುರಿಸಬೇಕಾಗಿದೆ.

ಗಮನ ಹರಿಸಬೇಕಾದ ಪ್ರಶ್ನೆಗಳು

2013 ಕನಿಷ್ಟ ಎಂಟು ರಾಜ್ಯಗಳಲ್ಲಿ, ಅಂದರೆ ಕರ್ನಾಟಕ, ಮಧ್ಯಪ್ರದೇಶ, ರಾಜಸ್ತಾನ, ದಿಲ್ಲಿ, ತ್ರಿಪುರ, ಮೇಘಾಲಯ, ಮಿಝೋರಾಂ ಮತ್ತು ನಾಗಾಲ್ಯಾಂಡಿನಲ್ಲಿ ವಿಧಾನಸಭಾ ಚುನಾವಣೆಗಳನ್ನು ಕಾಣಲಿದೆ.

ಈ ಚುನಾವಣೆಗಳು ಜನಗಳ ಗಮನವನ್ನು ನಮ್ಮ ಸಂಪನ್ಮೂಲಗಳನ್ನು ಲೂಟಿ ಹೊಡೆಯುವ ತಮ್ಮ ಧೋರಣೆಗಳ ವಿರುದ್ಧ ಹೋರಾಟಗಳನ್ನು ತೀವ್ರಗೊಳಿಸುವ ಬದಲು ಬೇರೆಡೆಗೆ ತಿರುಗಿಸುವಂತೆ ಮಾಡುತ್ತದೆ ಎಂಬುದು ಭಾರತೀಯ ಆಳುವ ವರ್ಗಗಳ ನಿರೀಕ್ಷೆ. ತದ್ವಿರುದ್ಧವಾಗಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಈ ಚುನಾವಣೆಗಳ ಸರಣಿಯನ್ನು ಜನಗಳನ್ನು ಪರ್ಯಾಯ ಜನಪರ ಧೋರಣೆಗಳ ಸುತ್ತ ಅಣಿನೆರೆಸಲು ಬಳಸಬೇಕು.

ಅಲ್ಲದೆ 2014 ರಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆಯಬೇಕಾಗಿದ್ದು, 2013 ರಲ್ಲಿ ಸರಕಾರ ಒಂದಷ್ಟು ಅಗ್ಗದ ಜನಪ್ರಿಯತೆ ಗಿಟ್ಟಿಸುವ ಕ್ರಮಗಳನ್ನು ಪ್ರಕಟಿಸಬಹುದು, ಕೆಲವು ಕಸರತ್ತುಗಳ ಮೊರೆ ಹೋಗಬಹುದು. ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಜೀವನಾವಶ್ಯಕ ಸಾಮಗ್ರಿಗಳನ್ನು ಒದಗಿಸುವ ಬದಲು 'ನೇರ ನಗದು ವರ್ಗಾವಣೆ' ಇಂತಹ ಪ್ರಕಟಣೆಗಳಲ್ಲಿ ಒಂದು. ಇದೊಂದು ದೊಡ್ಡ ಮೋಸ. ಏಕೆಂದರೆ ಸತತ ಬೆಲೆಯೇರಿಕೆಗಳಿಂದಾಗಿ ಬಡಕುಟುಂಬಗಳಿಗೆ ವರ್ಗಾವಣೆ ಮಾಡುವ ಹಣದ ಮೌಲ್ಯ ಇಳಿಯುತ್ತಲೇ ಹೋಗುತ್ತದೆ. ಇದರಿಂದ ಜನಗಳಿಗೆ ತಮ್ಮ ಕನಿಷ್ಟ ಅಗತ್ಯಗಳನ್ನು ಪೂರೈಸಿಕೊಳ್ಳುವುದು ಹೆಚ್ಚೆಚ್ಚು ಕಠಿಣವಾಗುತ್ತದೆ. ಇದು ಬಡಜನರಲ್ಲಿ ಸುಭದ್ರತೆ ಮತ್ತು ಆರ್ಥಿಕ ಭದ್ರತೆಯ ಭ್ರಮೆಗಳನ್ನು ಸೃಷ್ಟಿಸುತ್ತಲೇ ಅವರಿಗೆ ಕೊಡುವ ಸಬ್ಸಿಡಿಗಳನ್ನು ತಂತಾನೇ ಕಡಿತಗೊಳಿಸುವ ಒಂದು ಚತುರ ಉಪಾಯ. ಅದೇ ರೀತಿ, ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ಕೆ.ಜಿ.ಗೆ ಗರಿಷ್ಟ 2ರೂ.ದರದಲ್ಲಿ ತಿಂಗಳಿಗೆ 35 ಕೆಜಿ ಆಹಾರ ಧಾನ್ಯಗಳನ್ನು ಎಲ್ಲ (ಎಪಿಎಲ್ ಮತ್ತು ಬಿಪಿಎಲ್ ಎರಡೂ) ಕುಟುಂಬಗಳಿಗೆ ಪೂರೈಸದೆ ಒಂದು ಅರ್ಥಪೂರ್ಣ ಆಹಾರ ಭದ್ರತೆಯೂ ಸಾಧ್ಯವಿಲ್ಲ.

ಇವೀಗ ಮುಂಬರುವ ವರ್ಷದಲ್ಲಿ ನಾವು ಗಮನ ಹರಿಸಬೇಕಾದ ಕೆಲವು ಪ್ರಶ್ನೆಗಳು. ಇದರತ್ತ ನಮ್ಮ ಗಮನ ಹರಿಸುವುದಷ್ಟೇ ಅಲ್ಲ, ಈ ದಿಕ್ಕಿನಲ್ಲಿ ಜನತೆಯ ಹೋರಾಟಗಳನ್ನು ತೀವ್ರಗೊಳಿಸಿ ನಮ್ಮ ಆಳುವ ವರ್ಗಗಳು ಈಗ ನಮ್ಮ ಬಹುಪಾಲು ಜನತೆಗೆ ಸಿಗದಂತೆ ಮಾಡಿರುವ ಒಂದು ಉತ್ತಮ ಬದುಕನ್ನು ಸಾಧಿಸುವಂತಾಗಬೇಕು ಮತ್ತು ನಮ್ಮ ಜನತೆ ಹಾಗೂ ದೇಶದಲ್ಲಿ ಅಡಕವಾಗಿರುವ ಸಾಮರ್ಥ್ಯಗಳು ಪೂರ್ಣವಾಗಿ ಪ್ರಕಟಗೊಳ್ಳುವಂತಾಗಬೇಕು.

2013 ನಮ್ಮ ಸಾಮರ್ಥ್ಯವನ್ನು ಈಡೇರಿಸಿಕೊಳ್ಳುವ ಅವಕಾಶದ ವಂಚನೆ ಹಾಗೆಯೆ ಮುಂದುವರೆಯಲು ಬಿಡಬಾರದು. ನಮ್ಮ ವಿಶಾಲ ಜನಸಮೂಹಗಳು ತಮಗೆ ನ್ಯಾಯಬದ್ಧವಾಗಿ ಸಲ್ಲಬೇಕಾದ್ದನ್ನು ಪಡೆಯಲು ಮತ್ತು ನಮ್ಮ ದೇಶ ತನ್ನಲ್ಲಿ ಅಡಗಿರುವ ಸಾಮರ್ಥ್ಯವನ್ನು ಈಡೇರಿಸಿಕೊಳ್ಳಲು ಹೋರಾಟವನ್ನು ತೀವ್ರಗೊಳಿಸುವ ಒಂದು ವರ್ಷವಾಗಿ 2013ಕ್ಕೆ ಸ್ವಾಗತ.

ಪಿ.ಜಿ.ಗೊಂದು ನುಡಿನಮನ....

ಪುಟ 14 ರಿಂದ

ಒಟ್ಟಾರೆಯಾಗಿ ಜನಸಮೂಹದ ಹಿತಕ್ಕೆ, ಅದರಲ್ಲೂ ಆದಷ್ಟೂ ವಿಶಾಲ ತಳಹದಿಯಲ್ಲಿ, ಅವರು ಆದ್ಯತೆ ನೀಡುತ್ತಿದ್ದರು. 'ಸೈಲೆಂಟ್ ವ್ಯಾಲಿ' ವಿಚಾರವಾಗಿ ಅವರು ಕಾಮ್ರೇಡ್ ಇ. ಬಾಲಾನಂದನ್ ಜತೆ ಭಿನ್ನಾಭಿಪ್ರಾಯ ಹೊಂದಿದ್ದರು. ಮಲಯಾಳ ಮನೋರಮಾ ಗುಂಪಿನ ಮಾಸ ಪತ್ರಿಕೆ 'ಭಾಷಾ ಪೋಷಿಣಿ'ಗೆ ನೀಡಿದ ಸಂದರ್ಶನದಲ್ಲಿ ಇ.ಎಂ.ಎಸ್.ರನ್ನು ಟೀಕಿಸಿದ್ದಕ್ಕಾಗಿ ಪಕ್ಷ ಪಿ.ಜಿ.ಯವರ ವಿರುದ್ಧ ಶಿಸ್ತು ಕ್ರಮ ಜರುಗಿಸಿತ್ತು. ಅವರು ಎಕೆಜಿ ಭವನದಿಂದ ಹೊರಬರುತ್ತಲೇ ಅವರನ್ನು ಸುತ್ತುವರಿದ ಪತ್ರಕರ್ತರಿಗೆ ನಿರಾಸೆ ಕಾದಿತ್ತು. ತಾಜಾ ಹಾಗೂ ರುಚಿಕರ ಮಾವಿನ ಹಣ್ಣಿನ ರುಚಿ ಸವಿಯಲು ಮನೆಗೆ ಬನ್ನಿ ಎಂದಷ್ಟೇ ಪತ್ರಕರ್ತರನ್ನು ಆಹ್ವಾನಿಸಿದ ಪಿ.ಜಿ., ತಮಗೆ ವಿಧಿಸಲಾಗಿದ್ದ ಶಿಕ್ಷೆಯ ಬಗ್ಗೆ ತುಟಿ ಪಿಟಕ್ ಎನ್ನಲಿಲ್ಲ. ಪಿ.ಜಿ. ಈ ವಿಷಯದಲ್ಲಿ ನಮಗೆಲ್ಲರಿಗೂ ಮಾದರಿಯಾಗಿದ್ದಾರೆ.

ಇ.ಎಂ.ಎಸ್.ರ ಸಂಕಲಿತ ಕೃತಿಗಳಲ್ಲಿ ಜೆ.ವಿ. ಸ್ಟಾಲಿನ್ ವಿರುದ್ಧ ಪಿ.ಜಿ. ಮಾಡಿದ್ದ ಟಿಪ್ಪಣಿಯನ್ನು ಈ ಲೇಖಕ ಪ್ರಬಲವಾಗಿ ವಿರೋಧಿಸಿದ್ದ. ಪಿ.ಜಿ.ಯವರ ವ್ಯಕ್ತಿತ್ವಕ್ಕೆ ಅದು ಸಮರ್ಥನೀಯವಾಗಿ ಕಂಡಿರಬಹುದು. ಸ್ಟಾಲಿನ್‌ರಿಂದ ತೊಂದರೆಗೊಳಗಾದ ಜನರ ಹಿತವನ್ನೇ ಅವರು ಪರಮವಾಗಿ ಕಂಡಿರಬಹುದು, ಆದರೆ, ಕಾರ್ಮಿಕ ವರ್ಗದ ಪಕ್ಷವಾಗಿ ಸ್ಟಾಲಿನ್ ನೇತೃತ್ವದ ಸಿಪಿಎಸ್‌ಯುನ ಕಟ್ಟುನಿಟ್ಟಿನ ಶಿಸ್ತನ್ನು ಅರಿಯುವಲ್ಲಿ ಅವರು ವಿಫಲರಾಗಿದ್ದರು. ಅವರ ವಿಶಾಲ ಚಿಂತನೆ ಹಾಗು ಬದ್ಧತೆಯನ್ನು ಓದುಗರಿಗೆ ತಿಳಿಸಲಷ್ಟೇ ಈ ವಿಷಯವನ್ನು ಇಲ್ಲಿ ಪ್ರಸ್ತಾವಿಸಿದ್ದೇನೆ.

ಪಿ.ಜಿ.ಯವರು ಜಾಗತಿಕ ರಾಜಕೀಯದ ಸೂಕ್ಷ್ಮ ವೀಕ್ಷಕರಾಗಿದ್ದರು. 'ಕೈರಳಿ' ಟಿವಿ ವಾಹಿನಿಯಲ್ಲಿ ವಾರಕ್ಕೊಮ್ಮೆ ಪ್ರಸಾರವಾಗುತ್ತಿದ್ದ ಪಿಜಿಯವರ "ಪಿಜಿ ಯುಮ್ ಲೋಕವುಮ್" ಕಾರ್ಯಕ್ರಮವನ್ನು ಜನರು ಅತ್ಯಾಸಕ್ತಿಯಿಂದ ವೀಕ್ಷಿಸುತ್ತಿದ್ದರು. ಅವರ ನಿಧನದಿಂದಾಗಿ ಈ ಕಾರ್ಯಕ್ರಮ ಇನ್ನು ಮುಂದೆ ಸಿಗುವುದಿಲ್ಲ. ಪಿ.ಜಿ. ಅವರು ಕಳೆದ ನವೆಂಬರ್ 22 ರ ರಾತ್ರಿ ನಿಧನರಾದರು. ಅವರಿಗೆ 86 ವರ್ಷ ವಯಸ್ಸಾಗಿತ್ತು.

ಜನರಿಗಾಗಿ ಪಿಜಿ ಮಿಡಿಯುತ್ತಿದ್ದ ರೀತಿಯಲ್ಲಿ ಮಿಡಿಯುವ ಇನ್ನೊಂದು ಜೀವವನ್ನು ನಾವು ನಿರೀಕ್ಷಿಸಲಾಗದು. ಅವರ ನಿಧನ ಕೇರಳದ ಪ್ರಗತಿಪರ ಚಳವಳಿಗೆ ಹೇಗೆ ನಷ್ಟವೋ ನಮಗೂ ಕೂಡ ನಷ್ಟವೇ.

ಯುಪಿಎ ದರ್ಬಾರ್....

ಪುಟ 13 ರಿಂದ

ಹೇಳಬೇಕಾಗಿಲ್ಲ.

ಈ ಇಪಿಆರ್ ಅಣುಸ್ಥಾವರದ ವೆಚ್ಚ ಮೂರುಪಟ್ಟು ಹೆಚ್ಚಿದ್ದು, ಇಂತಹ ಹಣಕಾಸು ತಳವೇ ಇಲ್ಲದ ಹೊಂಡಕ್ಕೆ ಹಣ ಹಾಕುವುದರಲ್ಲಿ ಅರ್ಥವಿದೆಯೇ, ಜನಸಾಮಾನ್ಯರೇಕೆ ಇದಕ್ಕೆ ಬೆಲೆ ತೆರಬೇಕು ಎಂದು ಫ್ರಾನ್ಸಿನಲ್ಲಿಯೇ ಇದಕ್ಕೇ ಭಾರೀ ವಿರೋಧ ಬರುತ್ತಿದೆ.

ಅಲ್ಲದೆ ಈ ಸ್ಥಾವರದ ಸುರಕ್ಷಿತತೆಯ ಬಗ್ಗೆ ಈಗಲೂ ಸಂದೇಹಗಳಿವೆ. ಈಗಾಗಲೇ ಫ್ರಾನ್ಸಿನ ಪರಮಾಣು ಸುರಕ್ಷಣಾ ಪ್ರಾಧಿಕಾರ ಹತ್ತಾರು ಬದಲಾವಣೆಗಳನ್ನು ಮಾಡುವಂತೆ ಸೂಚಿಸಿದೆ. ಯಂತ್ರ ಸಾಮಗ್ರಿಗಳ ಮತ್ತು ನಿರ್ಮಾಣ ಸಿಬ್ಬಂದಿಯ ತರಬೇತಿಯಲ್ಲಿ ತೀವ್ರ ಕೊರತೆಗಳಿವೆ ಎಂದೂ ಬೊಟ್ಟು ಮಾಡಿ ಹೇಳಲಾಗಿದೆ. ಆದರೆ ಯುಪಿಎ ಸರಕಾರ ಇದರಿಂದ ಪಾಟ ಕಲಿಯಲು ಸಿದ್ಧವಿದ್ದಂತಿಲ್ಲ.



ಜಿ.ಎನ್.ನಾಗರಾಜ್ 18

ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷದ ಸ್ಥಾಪನೆಯ ಪ್ರಯತ್ನಗಳು

ಮೇ ನಾಲ್ಕರ ಚಳುವಳಿ ಅನೇಕ ಬುದ್ಧಿ ಜೀವಿಗಳು ಹಾಗೂ ಅಸಂಖ್ಯಾತ ವಿದ್ಯಾರ್ಥಿಗಳು ಚೀನಾದ ತುಂಬೆಲ್ಲ ದುಡಿಯುವ ಜನರ ಜೊತೆ ಸಂಪರ್ಕ ಬೆಳೆಸಲು ಕಾರಣವಾಯಿತು.ಆ ಮೂಲಕ ಮಾರ್ಕ್ಸವಾದವನ್ನೂ ಕಾರ್ಮಿಕ ವರ್ಗವನ್ನೂ ಬೆರೆಸಿತು. ಕಾರ್ಮಿಕ ವರ್ಗ ಒಂದು ಸ್ವತಂತ್ರ ವರ್ಗವಾಗಿ ರಾಜಕೀಯ ಹೋರಾಟ ನಡೆಸಿದ್ದು ಈ ಪ್ರಕ್ರಿಯೆಗೆ ಚಾಲನೆ ನೀಡಿತು.

1918ರಲ್ಲಿಯೇ ಶಾಂಘೈಯಲ್ಲಿ ಒಂದು ಮಾರ್ಕ್ಸ್ ವಾದೀ ಅಧ್ಯಯನ ಸಂಘವೊಂದು ರೂಪುಗೊಂಡಿತ್ತು. 1919ರಲ್ಲಿ ಬೀಜಿಂಗ್ ನಲ್ಲಿ ಇಂತಹ ಸಂಘವೊಂದು ಆರಂಭವಾಗಿತ್ತು. ಮಾವೋರವರು ಬೀಜಿಂಗ್‌ನಲ್ಲಿದ್ದಾಗ ಅದರ ಸಭೆಗಳಲ್ಲಿ ಭಾಗವಹಿಸಿದ್ದರು. ಆದರೆ ಮೇ ನಾಲ್ಕರ ನಂತರ ಒಂದಾದ ಮೇಲೊಂದರಂತೆ ಹಲವು ಪ್ರದೇಶಗಳಲ್ಲಿ ಸಮಾಜವಾದೀ ಅಥವಾ ಕಮ್ಯುನಿಸ್ಟ್ ಒಲುವ ಸಂಘಗಳು ಆರಂಭವಾದುವು. ಇದೇ ಸಮಯದಲ್ಲಿಯೇ ಈ ಹಿಂದೆ ವಿವರಿಸಿದಂತೆ ರಷ್ಯದಲ್ಲಿ ಕ್ರಾಂತಿಯ ನಂತರ ಆಡಳಿತ ನಡೆಸುತ್ತಿದ್ದ ಕಾರ್ಮಿಕ ವರ್ಗದ ಪ್ರಭುತ್ವವು. ಹಿಂದಿನ ಝಾರ್ ಪ್ರಭುತ್ವವು 19-20ನೆಯ ಶತಮಾನದಲ್ಲಿ ಆಕ್ರಮಿಸಿಕೊಂಡಿದ್ದ ವಿಶಾಲ ಪ್ರದೇಶವನ್ನು ಯಾವ ಶರತ್ತಿಲ್ಲದೇ ಬಿಟ್ಟುಕೊಟ್ಟ ಕ್ರಮ ಕೂಡ ಚೀನಾದ ಜನತೆಯ ಮೇಲೆ ಪ್ರಭಾವ ಬೀರಿತು.

ಮೇ ನಾಲ್ಕರ ಚಳುವಳಿ ಬೀರಿದ ಪ್ರಭಾವವನ್ನು ಗಮನಿಸಿದ ಅಂತರ ರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಕೇಂದರ್ವು ಮೂರು ಜನರ ನಿಯೋಗವೊಂದನ್ನು ಕಳುಹಿಸಿ ಚೀನಾದ ಮೊದಲ ಕಮ್ಯುನಿಸ್ಟರಾದ ಲಿ ದಝಾವೋ, ಚೆನ್ ದುಷಿಯುರವರನ್ನು ಭೇಟಿ ಮಾಡಿ ಚರ್ಚಿಸಿತು. ಆ ನಂತರ ಶಾಂಘೈಯಲ್ಲಿ ಒಂದು ಕಮ್ಯುನಿಸ್ಟ್ ಗುಂಪನ್ನು ಮೇ 1920ರಲ್ಲಿ ಆರಂಭಿಸಲಾಯಿತು. ಮುಂದೆ ಬೀಜಿಂಗ್‌ನಲ್ಲಿ ಸೆಪ್ಟೆಂಬರ್‌ನಲ್ಲಿ, ಕ್ಯಾಂಟನ್‌ನಲ್ಲಿ 1920ರ ಕೊನೆಯಲ್ಲಿ ಕಮ್ಯುನಿಸ್ಟ್ ಗುಂಪುಗಳು ಆರಂಭಿಸಲ್ಪಟ್ಟವು. ಇದರಿಂದ ಚೀನಾದ ಮೂರು ಅತ್ಯಂತ ಪ್ರಮುಖ ನಗರಗಳಲ್ಲಿ



ಚೆನ್ ದುಷಿಯು



ಲಿ ದಝಾವೋ

ಕಮ್ಯುನಿಸ್ಟ್ ಗುಂಪುಗಳು ಆರಂಭವಾದಂತಾಯಿತು. ಅದೇ ಸಮಯದಲ್ಲಿ ಮಾವೋರವರು ಹುನಾನ್ ನಲ್ಲಿ ಕೂಡ ಕಮ್ಯುನಿಸ್ಟ್ ಗುಂಪನ್ನು ಆರಂಭಿಸಿದರು.

ಈ ಗುಂಪುಗಳ ನೇತೃತ್ವದಲ್ಲಿ "ನವ ಯುವ ಜನತೆ" ಪತ್ರಿಕೆಯ ಮುದ್ರಣಾಲಯ ಮೂ ಕಮ್ಯುನಿಸ್ಟ್ ಗ್ರಂಥಗಳನ್ನು ವ್ಯವಸ್ಥಿತವಾ ಅನುವಾದಿಸಿ ಪ್ರಕಟಿಸಲು ಆರಭಿಸಿತ 'ಕಮ್ಯುನಿಸ್ಟ್ ಪ್ರಣಾಳಿಕೆ' ಎಂಗೆಲ್ಸ್‌ರವ 'ಕಾಲ್ಪನಿಕ-ವೈಜ್ಞಾನಿಕ ಸಮಾಜವಾದ 'ಸಮಾಜವಾದದ ಇತಿಹಾಸ' 'ವಗ ಸಂಘರ್ಷ' ಇತ್ಯಾದಿ ಪುಸ್ತಕಗಳನ ಹೊರತರಲಾಯಿತು. "ನವ ಯುವಜನತೆ"ಂ ಮೇ ವಿಶೇಷಾಂಕದಲ್ಲಿ ವಿಶ್ವದ ವಿವಿಧ ದೇಶಗ ಕಾರ್ಮಿಕ ಚಳುವಳಿ, ಚೀನಾದ ವಿವಿ ರಾಜ್ಯಗಳಲ್ಲಿನ ಕಾರ್ಮಿಕರ ಪರಿಸ್ಥಿ ಇವುಗಳ ಬಗ್ಗೆ ಲೇಖನಗಳನ ಪ್ರಕಟಿಸಲಾಯಿತು. ಇವುಗಳ ಜೊತೆ ಶಾಂಘೈ ಕಮ್ಯುನಿಸ್ಟ್ ಗುಂಪ "ಕಮ್ಯುನಿಸ್ಟ್ ಪಕ್ಷ" ಎಂ ಪತ್ರಿಕೆಯನ್ನೇ ತರಲು ಆರಂಭಿಸಿತ

ಈ ಕಮ್ಯುನಿಸ್ಟ್ ಗುಂಪುಗಳ ಅಲ್ಲಲ್ಲಿಯ ಕಾರ್ಮಿಕರ ನೆಲೆಗಳಿ ಹೋಗಿ ಅವರಿಗೆ ರಾತ್ರಿಶಾಲೆಗಳನ ನಡೆಸಲಾರಂಭಿಸಿದರು. ಕಾರ್ಮಿ ಸಂಘಗಳನ್ನು ಕಟ್ಟಿದರು. ಈ ಸಂಘಗಳು ಶಾಂಘೈಯಲ್ಲಿ "ಕಾರ್ಮಿ ಪ್ರಪಂಚ" ಎಂಬ ಪತ್ರಿಕೆಯನ್ನು ಹೊರ ತಂದ ಬೀಜಿಂಗ್‌ನಲ್ಲಿ "ಕಾರ್ಮಿಕ ಧ್ವನಿ" ಎಂ ಪತ್ರಿಕೆಯನ್ನು ಹೊರತಂದವು.

ಹೀಗೊಂದು ಬದುಕಿನ 'ಹೊಸ ಭಾವಗೀತೆ'

"ಹೊಸ ಗೀತೆ ಹಾಡೋಣ ಹೊಸ ಗೀತೆ ...ಬಲು ದೂರ ಪಯಣದ ಹೊಸ ಗೀತೆ ...ಯುವಕರೇ ಯುವತಿಯರೇ ಇದು ನಮ್ ಹಾಡು ..."

ಮಧುರ ಕಂಠದ ಭಾವ ಗೀತೆ ಕಿವಿಗೆ ಇಂಪಾಗಿ ಕೇಳುತ್ತಿತ್ತು. ಹೀಗೆ ಬದುಕಿನ 'ಹೊಸ ಭಾವ ಗೀತೆ' ಹಾಡಲು ಹೊರಟವರು ಎಚ್.ಎಸ್. ಜಯಕುಮಾರ್ ಮತ್ತು ಕವಿತಾ.

ಯುವಕ ಶಿಕ್ಷಿತ. 'ಭಾರತ ಜ್ಞಾನ ವಿಜ್ಞಾನ ಸಮಿತಿ'ಯ ರಾಜ್ಯ ಪದಾಧಿಕಾರಿ. 'ಸ್ವತಂತ್ರ ತಂತ್ರಾಂಶ ಆಂದೋಲನ'ದ ಮುಂಚೂಣಿ ವ್ಯಕ್ತಿ. ಅಧಿಕಾರಿ ಹಂತದ ಉದ್ಯೋಗಿ. ಸ್ವಾವಲಂಬಿ. ಯುವತಿ 'ಭಾರತ ವಿದ್ಯಾರ್ಥಿ ಫೆಡರೇಷನ್'ನ ನಾಯಕಿ. ಈಗ ಪದವಿ ವಿದ್ಯಾರ್ಥಿಗಳಿಗೆ ಪತ್ರಿಕೋದ್ಯಮವನ್ನು ಕಲಿಸುವ ಶಿಕ್ಷಕಿ. ಶಿಕ್ಷಿತೆ. ಸ್ವಾವಲಂಬಿ. ಆದರೂ....ತನ್ನೊಳಗೇ ನೂರು ಜಾತಿ ಕಟ್ಟುಪಾಡುಗಳ ಬಿಳಲುಗಳನ್ನು ಹರಡಿ ಹೆಣೆದು ಬಿಟ್ಟು ಕೊಂಡು, ಜಡ್ಡುಗಟ್ಟಿ ಬದಲಾವಣೆಯನ್ನು ಒಲ್ಲೆ ಎನ್ನುವ ಜಡ ಸಮಾಜ, ಮನುಷ್ಯ, ಮನುಷ್ಯರ ನಡುವೆ ಜಾತಿ-ಅಸ್ಪೃಷ್ಯತೆಯ ಗೋಡೆ ಕಟ್ಟಿಕೊಂಡು ಗೋಡೆ ಹಾರುವವರ ಸದೆಬಡಿಯುವೆವು ಎನ್ನುತ್ತಾ ಸಜ್ಜುಗೊಂಡಂತೆ ನಿಂತಿರುವ ಸಾಮಾಜಿಕ ವ್ಯವಸ್ಥೆಯ ಕಠೋರ ಸಮಾಜಿಕ ಕಟ್ಟಳೆಗಳು ಈ 'ಹೊಸ ಭಾವ ಗೀತೆ'

ಬೇಡ ಅನ್ನುತ್ತದೆ. 'ಯಾವ ಕಾಲದ ಶಾಸ್ತ್ರ' ಏನು ಹೇಳಿದರೇನು ? ಕರ್ಮಠ ಕಟ್ಟಳೆಗಳ ಪಟ್ಟಿ ಎಷ್ಟಿದ್ದರೇನು ? ನಾವು ಮೀರುವೆವು ಅದನು ಎನ್ನುತ್ತಾ ಹೊರಟಿರುವ ಈ ಯುವಜೋಡಿಗೆ ಶುಭ ಹಾರೈಸುವ ಸಂದರ್ಭ ಅದು.

ಬೆಂಗಳೂರಿನ ಮಹಾಲಕ್ಷ್ಮಿ ಬಡಾವಣೆಯ ಇ.ಎಂ.ಎಸ್. ಭವನ ಡಿಸೆಂಬರ್ 16, 2012 ರಂದು ಇಂತಹ ಒಂದು 'ಶುಭ' ಸಮಾರಂಭಕ್ಕೆ ಸಾಕ್ಷಿಯಾಯಿತು. ಮೇಲೆ ಹೇಳಿದ ಸಂಘಟನೆಗಳು ಈ ಸಂತೋಷ ಸಮಾರಂಭ'ವನ್ನು ಆಯೋಜಿಸಿದ್ದವು. ಬಿಜಿವಿಎಸ್‌ನ ಒಡನಾಡಿ ವಜ್ರಮುನಿ, ಎಫ್‌ಎಸ್‌ಎಂಕೆಯ ಪರವಾಗಿ ಸೆಂದಿಲ್, ಎಸ್‌ಎಫ್‌ಐ ನ ಪರವಾಗಿ ಅನಂತ್ ನಾಯ್ಕ, ಜನವಾದಿ ಮಹಿಳಾ ಸಂಘಟನೆಯ ಪರವಾಗಿ ಕೆ.ಎಸ್.ಲಕ್ಷ್ಮಿ, ಡಿವೈಎಫ್‌ಐ



ಪರವಾಗಿ ಎನ್.ಎಲ್.ಭರತ್ ರಾಜ್, ಖಗೋಳಶಾಸ್ತ್ರ ವಿಜ್ಞಾನಿ, ಡಾ.ಎಸ್. ಚಟರ್ಜಿ, ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್‌ನ ಡಾ. ಪ್ರಕಾಶ್ ಸಿ ರಾವ್, ಅಂಗವಿಕಲರ ಮತ್ತು ಪಾಲಕರ ಒಕ್ಕೂಟದ ಪರವಾಗಿ ಜಿ.ಎನ್.ಯಶು, ಜನಶಕ್ತಿ ಕನ್ನಡ ವಾರ ಪತ್ರಿಕೆಯ ಪರವಾಗಿ ಎಸ್.ವೈ. ಗುರುಶಾಂತ್, ಪ್ರಾಂತ ಕೃಷಿಕೂಲಿಕಾರರ ಸಂಘದ ಪರವಾಗಿ ಚಂದ್ರಪ್ಪ ಹೊಸ್ಕೆರ, ಸಿಪಿಐ(ಎಂ) ರಾಜ್ಯ ಸಮಿತಿಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್. ನಾಗರಾಜ್, ನಿತ್ಯಾನಂದ ಸ್ವಾಮಿ, ಮಂಡ್ಯದ ಮುಖಂಡರಾದ ಪುಟ್ಟಮಾದು, ಮುಂತಾದವರು ಮಾತನಾಡಿ ಹೊಸ ಭಾವ ಗೀತೆ ಹಾಡುವ ನೀವು ಒಂಟಿಯಲ್ಲ. ನಾವೆಲ್ಲ ನಿಮ್ಮ ಬೆಂಬಲಕ್ಕಿದ್ದೇವೆ ಎಂದು ಸಾರಿದರು.

ಹೆಣ್ಣಿನ ತಂದೆ ತಾಯಿಗಳು ಗಂಡಿನ ಸಹೋದರಿ ವೇದಿಕೆಯ ಮೇಲಿದ್ದು ನವ ಜೋಡಿಯ ಹೊಸ ಹಾದಿಯ ಪಯಣಕ್ಕೆ ತಮ್ಮ ಬೆಂಬಲ ಸೂಚಿಸಿದರು.

ಸ್ನೇಹಿತರು, ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು, ಮುಂಖಂಡರು ಈ ಸಂದರ್ಭದಲ್ಲಿ ಹಾಜರಿದ್ದು ಸಂತೋಷ ಹಂಚಿಕೊಂಡರು.

– ಆರ್.ಕೆ.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 . Editor S.Y.GURURSHANTH, No12. 18th Cross, S.R.Nagar, BANGALORE - 560027
Editor S.Y.GURUSHANTH